ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


Swabhimani Sahakari

Pages : 56 / 12₹



# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ


Volume - 17
Issue - 11
November - 2020


67 ನೇ

ವಿಶೇಷ ಸಂಚಿಕೆ



ಅಖಿಲ ಭಾರತ
ಸಹಕಾರ ಸಪ್ತಾಹ-2020

ಸಪ್ತಾಹದ ಧ್ಯೇಯ:
ಕೊರೋನೋತ್ತರ, ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ

"ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು"
ದಿನಾಚರಣೆ

ದಿನಾಂಕ : 17.11.2020,
ಸಮಯ : ಬೆಳಗ್ಗೆ : 11.00ಘಂಟೆಗೆ
ಸ್ಥಳ : ಆಡಿಟೋರಿಯಂ ಜಿಲ್ಲಾಡಳಿತ ಭವನ,
ಚಿಕ್ಕಬಳ್ಳಾಪುರ



ನವಂಬರ್ 01
ಕನ್ನಡ ರಾಜ್ಯೋತ್ಸವ



ನವಂಬರ್ 14
ದೀಪಾವಳಿ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5118

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1351



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

"ದೀಪಾವಳಿ ದೀಪಗಳ ಹಬ್ಬ, ದೀಪದಿಂದ ದೀಪವನ್ನು ಪ್ರಜ್ವಲಿಸಿ ನಮ್ಮಲ್ಲಿರುವ ಅಂಧಕಾರವನ್ನು ಹೊಡೆದೊಡಿಸುವ ಹಬ್ಬ ಇದಾಗಿದೆ. ದೀಪಗಳನ್ನು ಬೆಳೆಸುವುದರಿಂದ ನಮ್ಮ ಜ್ಞಾನಜ್ಯೋತಿಯು ಪ್ರಜ್ವಲಿಸಲು ಅವಕಾಶವಾಗುತ್ತದೆ. ದೀಪಾವಳಿ ತಮಗೆಲ್ಲ ಸುಖ ಶಾಂತಿ ನೆಮ್ಮದಿಯನ್ನು ಹಾಗೂ ತಮ್ಮ ಜೀವನದಲ್ಲಿ ಉತ್ತರೋತ್ತರ ಅಭಿವೃದ್ಧಿಯನ್ನು ತರಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ರಾಜ್ಯದ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಎಲ್ಲರೂ ಕನ್ನಡವನ್ನು ಬಳಸುವ ಹಾಗೂ ಬೆಳಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳು ಜರುಗುತ್ತವೆಯೋ ಹಾಗೇ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಸಹಕಾರ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳು ನಡೆದು ಸಹಕಾರ ಕ್ಷೇತ್ರದ ಗುಣಮಟ್ಟವನ್ನು ಸುಧಾರಿಸುವ ಕಾರ್ಯಗಳು ನಡೆಯಬೇಕೆಂಬುದೇ ಸಹಕಾರಿಗಳ ಆಶಯವಾಗಿದೆ."

# ಸಹಕಾರ ಸಪ್ತಾಹದ ಅರ್ಥಪೂರ್ಣ ಆಚರಣೆ : ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕ

**ಆತ್ಮೀಯ ಸಹಕಾರಿ ಬಂಧುಗಳೆ,**

ರಾಜ್ಯದ ಎಲ್ಲ ಸಹಕಾರಿಗಳಿಗೆ ಕನ್ನಡ ರಾಜ್ಯೋತ್ಸವದ ಹಾಗೂ ಸೌಹಾರ್ದ ಸಹಕಾರಿಗಳಿಗೆ ದೀಪಾವಳಿಯ ಮತ್ತು 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಶುಭಾಶಯಗಳು. ಹಾರ್ದಿಕ ಶುಭಾಶಯಗಳು.

ದೀಪಾವಳಿ ದೀಪಗಳ ಹಬ್ಬ, ದೀಪದಿಂದ ದೀಪವನ್ನು ಪ್ರಜ್ವಲಿಸಿ ನಮ್ಮಲ್ಲಿರುವ ಅಂಧಕಾರವನ್ನು ಹೊಡೆದೊಡಿಸುವ ಹಬ್ಬ ಇದಾಗಿದೆ. ದೀಪಗಳನ್ನು ಬೆಳೆಸುವುದರಿಂದ ನಮ್ಮ ಜ್ಞಾನಜ್ಯೋತಿಯು ಪ್ರಜ್ವಲಿಸಲು ಅವಕಾಶವಾಗುತ್ತದೆ. ದೀಪಾವಳಿ ತಮಗೆಲ್ಲ ಸುಖ ಶಾಂತಿ ನೆಮ್ಮದಿಯನ್ನು ಹಾಗೂ ತಮ್ಮ ಜೀವನದಲ್ಲಿ ಉತ್ತರೋತ್ತರ ಅಭಿವೃದ್ಧಿಯನ್ನು ತರಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ರಾಜ್ಯದ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಎಲ್ಲರೂ ಕನ್ನಡವನ್ನು ಬಳಸುವ ಹಾಗೂ ಬೆಳಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳು ಜರುಗುತ್ತವೆಯೋ ಹಾಗೇ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಸಹಕಾರ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳು ನಡೆದು ಸಹಕಾರ ಕ್ಷೇತ್ರದ ಗುಣಮಟ್ಟವನ್ನು ಸುಧಾರಿಸುವ ಕಾರ್ಯಗಳು ನಡೆಯಬೇಕೆಂಬುದೇ ಸಹಕಾರಿಗಳ ಆಶಯವಾಗಿದೆ.

ಇದು 67ನೇ ಅಖಿಲಭಾರತ ಸಹಕಾರ ಸಪ್ತಾಹ. ಕೋರೋನೋತ್ತರ ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ ಇದು ಈ ಬಾರಿಯ ಸಪ್ತಾಹದ ಧ್ಯೇಯ. ಅತ್ಯಂತ ಮಹತ್ವದ ಜವಾಬ್ದಾರಿ ಹಾಗೂ ಪಾತ್ರವನ್ನು ಸಹಕಾರ ಸಂಸ್ಥೆಗಳು ನಿರ್ವಹಿಸಬೇಕಿದೆ. 7 ದಿನಗಳ ಕಾಲದಲ್ಲಿ ಸಹಕಾರಿ ಸಂಸ್ಥೆಗಳು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸದಸ್ಯರಲ್ಲಿ ಸಾರ್ವಜನಿಕರಲ್ಲಿ ಕೋರೋನಾದ ಬಗ್ಗೆ ಜಾಗೃತಿ ಮೂಡಿಸುವುದು, ಕೋರೋನಾ ಹರಡದಂತೆ ಸರಕಾರದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ, ಸದಸ್ಯರು ಹೆಚ್ಚಾಗಿ ತಾವು ತಮ್ಮ ಆರೋಗ್ಯವೃದ್ಧಿಸಿಕೊಳ್ಳುವಲ್ಲಿ ನಿರತರಾಗುವಂತೆ ಸಲಹೆ ಹಾಗೂ ಮಾರ್ಗದರ್ಶನ ನೀಡುವುದು, ಹಿರಿಯ ನಾಗರಿಕರಿಗೆ ಹೆಚ್ಚಿನ ಸೇವಾ ಸೌಲಭ್ಯಗಳನ್ನು ಒದಗಿಸುವುದು, ಮನೆಯಲ್ಲಿಯೇ ಉಚಿತ ತಪಾಸಣೆಗೆ ವ್ಯವಸ್ಥೆಗಳನ್ನು ಮಾಡುವುದು, ತುರ್ತುಬಳಕೆಗೆ ಉಚಿತ ಅಂಬುಲೆನ್ಸ ಸೇವೆಗಳನ್ನು ಒದಗಿಸುವುದು, ಉಚಿತ ಅಥವಾ ಕನಿಷ್ಠ ಬೆಲೆಯಲ್ಲಿ ಗುಣಮಟ್ಟದ ಔಷಧಿಗಳನ್ನು ಒದಗಿಸುವುದು ಹೀಗೆ ಹಲವು ಸೇವೆಗಳನ್ನು ಒದಗಿಸಲು ಸೌಹಾರ್ದ ಸಹಕಾರಿಗಳು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೋರೋನೋತ್ತರದಲ್ಲಿ ಸಮಾಜದ ಹಾಗೂ ಸಹಕಾರಿ ಸಂಸ್ಥೆಯ ಹಾಗೂ ಸದಸ್ಯರ ಅಭಿವೃದ್ಧಿಗೆ ನೆರವಾಗುವುದರ ಮೂಲಕ ಸಹಕಾರಿ ಸಂಸ್ಥೆಗಳು ತಮ್ಮ ಜವಾಬ್ದಾರಿಯನ್ನು ಮತ್ತು ಮಹತ್ವದ ಪಾತ್ರವನ್ನು ನಿರ್ವಹಿಸಲು ಅವಕಾಶವಿದೆ. ಸಹಕಾರಿ ಕ್ಷೇತ್ರ ಬಗ್ಗೆ ಸಕಾರಾತ್ಮಕ ಭಾವನೆಗಳನ್ನು ಹೆಚ್ಚಿಸಲೂ ಸದಸ್ಯರಲ್ಲಿ ಸಹಕಾರಿಗಳ ಬಗ್ಗೆ ವಿಶ್ವಾಸಾರ್ಹತೆಯೂ ಹೆಚ್ಚಿಸಲು ಸಾಧ್ಯವಾಗುತ್ತದೆ. ಸೇವೆಗೆ ಹಾಗೂ ಅವಕಾಶಗಳ ಸದುಪಯೋಗಕ್ಕೆ ಉತ್ತಮ ಅವಕಾಶ. ಈ ಅವಕಾಶವನ್ನು ಉಪಯೋಗಿಸಿಕೊಂಡು ಸಹಕಾರಿ ಸಂಸ್ಥೆಗಳು ಸಹ ಆರೋಗ್ಯವಾಗಿ ಬೆಳೆಯಲು ಅವಕಾಶವಾಗುತ್ತದೆ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

## ಸಹಕಾರ ಸಚಿವರಿಗೆ ಕೃತಜ್ಞತೆ

ರಾಜ್ಯದ ಎರಡು ಸಹಕಾರ ಕಾಯ್ದೆಗಳಿಗೆ ವಿಶೇಷವಾಗಿ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗಳನ್ನು ಮಾಡಿಕೊಡಲು ಒಪ್ಪಿರುವ ಸಹಕಾರ ಸಚಿವ ಮಾನ್ಯ ಶ್ರೀ ಎಸ್.ಟಿ ಸೋಮಶೇಖರ್ ಹಾಗೂ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಾನ್ಯ ಶ್ರೀ ತುಷಾರ್ ಗಿರಿನಾಥ್ ಹಾಗೂ ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಜಿಯಾಉಲ್ಲಾ ಇವರಿಗೆ ರಾಜ್ಯದ ಸಹಕಾರಿಗಳ ಪರವಾಗಿ ವಿಶೇಷವಾಗಿ ಸೌಹಾರ್ದ ಸಹಕಾರಿಗಳ ಪರವಾಗಿ ಕೃತಜ್ಞತೆಗಳು.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
67ನೇ ಅಖಿಲ ಭಾರತ ಸಹಕಾರ ಸಪ್ತಾಹ ...... ........................................ 5–28
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 29–36
ಸರ್ಕಾರದ ಸುತ್ತೋಲೆಗಳು .............. 37–43
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ........................................ 44–49
ಲೇಖನ........................................ 50–52
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–7) .................................. 53–55

# ಸಂಪಾದಕೀಯ

## ಸಹಕಾರಿ ಸಂಸ್ಥೆಗಳ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ video conference ಮೂಲಕ ನಡೆಸಲು ಸರಕಾರದ ಅನುಮತಿ : ತಾಂತ್ರಿಕ ಜ್ಞಾನವೃದ್ಧಿಗೆ ಹಾಗೂ ಸದಸ್ಯರ ಸಕ್ರೀಯ ಪಾಲುಗಾರಿಕೆ ಹೆಚ್ಚಿನ ಅವಕಾಶ

ಕೋರೋನಾ ಮಹಾಮಾರಿ ವಿಶ್ವದ ಆರ್ಥಿಕತೆಗೆ ಹಾಗೂ ದೈನಂದಿನ ಜೀವನಕ್ಕೆ ಕಷ್ಟಗಳನ್ನು ತಂದಿದೆ. ಈ ಕಷ್ಟಗಳ ಮಧ್ಯದಲ್ಲಿಯೇ ಜೀವನವನ್ನು ಸಾಧ್ಯವಾದಷ್ಟು ಸುಗಮವಾಗಿಸಿ ನಿರಾಡಂಬರವಾಗಿ ಹಾಗೂ ಸಾಮಾಜಿಕ ಶಿಸ್ತು ಕಾಪಾಡಿಕೊಳ್ಳಲು ಕೆಲವು ಅವಕಾಶಗಳನ್ನು ಒದಗಿಸಿದೆ. ಅದರಲ್ಲಿ ಪ್ರಾಮುಖ್ಯತೆಯನ್ನು ಪಡೆದಿರುವುದು ತಾಂತ್ರಿಕ ಜ್ಞಾನ ವೃದ್ಧಿಸಿಕೊಳ್ಳುವುದು.

ರಾಜ್ಯದ ಸಹಕಾರಿ ಸಂಸ್ಥೆಗಳ ಹಾಗೂ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ 25ನೇ ಸೆಪ್ಟೆಂಬರ ಒಳಗಾಗಿ ಮುಗಿಯಬೇಕಿತ್ತು. ಆದರೆ ಕೋರೋನಾದಿಂದಾಗಿ ಅದನ್ನು 25ನೇ ಡಿಸೆಂಬರ್‌ವರೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ ಕೋರೋನಾ ಓಟ ಇನ್ನೂ ನಿಯಂತ್ರಣಕ್ಕೆ ಬಾರದಿರುವುದರಿಂದ ಈಗಲೂ ಸಹಕಾರಿ ಸಂಸ್ಥೆಗಳು ಹಾಗೂ ಸೌಹಾರ್ದ ಸಹಕಾರಿಗಳು ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ಸರಕಾರಕ್ಕೆ ಸಾಕಷ್ಟು ಮನವಿಗಳನ್ನು ಸಹ ಸಹಕಾರ ಸಂಸ್ಥೆಗಳವರು ಸಲ್ಲಿಸಿರುವುದನ್ನು ಸರಕಾರ ಪರಿಗಣಿಸಿರುವುದು ಹಾಗೂ ಸಹಕಾರ ಸಂಸ್ಥೆಗಳ ವಾರ್ಷಿಕ ಸಾಮಾನ್ಯ ಸಭೆಗಳನ್ನು ವಿಡಿಯೋ ಕಾನ್ಫರೆನ್ಸ್ ಹಾಗೂ ವರ್ಚುಯಲ್ ಮೀಟಿಂಗ್ (video conference & virtual meeting) ಮೂಲಕ ಎಂದಿನಂತೆ ಸದಸ್ಯರ ಹಾಜರಾತಿಯೊಂದಿಗೆ ಕಾನೂನು ಹಾಗೂ ನಿಯಮಗಳನ್ನು ಪಾಲಿಸಿ ನಡೆಸಲು ಅವಕಾಶ ನೀಡಿ ದಿನಾಂಕ 21.10.2020 ರಂದು ಆದೇಶ ಹೊರಡಿಸಿರುವುದು ಸ್ವಾಗತಾರ್ಹ.

ಸಹಕಾರಿ ಕ್ಷೇತ್ರದ ಇತಿಹಾಸದಲ್ಲಿಯೇ ಇದೊಂದು ಮರೆಯಲಾಗದ ಹೊಸ ಅನುಭವ. ತಾಂತ್ರಿಕತೆಯನ್ನು ಪರಿಚಯಿಸುವ, ಸದಸ್ಯರ ತಾಂತ್ರಿಕ ಜ್ಞಾನದ ಮಟ್ಟವನ್ನು ಹೆಚ್ಚಿಸುವ ಅನುಭವ. ಸದಸ್ಯರು ತಮ್ಮ ಸಹಕಾರಿ ಸಂಸ್ಥೆಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ತಾವು ದೈಹಿಕವಾಗಿ ಭಾಗವಹಿಸುವ ಬದಲಿಗೆ ಸಾಮಾನ್ಯ ಸಭೆಯ ನೋಟೀಸಿನ ದಿನಾಂಕ ಹಾಗೂ ಸಮಯಕ್ಕೆ ತಮ್ಮ ಮನೆಯಲ್ಲಿ ಕುಳಿತು ಕಂಪ್ಯೂಟರ್, ಲ್ಯಾಪ್‌ಟಾಪ್ ಅಥವಾ ಮೊಬೈಲ್ ಮೂಲಕ ಹಾಜರಾಗಿ ತಮ್ಮ ಭಾಗವಹಿಸುವಿಕೆಯನ್ನು ನೊಂದಾಯಿಸಬೇಕು. ಸಕ್ರೀಯವಾಗಿ ಭಾಗವಹಿಸಲು ಪೂರ್ಣ ಅವಕಾಶವಿದೆ. ಡಿಸೆಂಬರ್ 25ರ ಒಳಗಾಗಿ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳು ತಮ್ಮ ವಾರ್ಷಿಕ ಸಾಮಾನ್ಯ ಸಭೆಯನ್ನು ಜರುಗಿಸಲು ಸೂಚಿಸಿರುವುದು ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಹಕಾರಿಗಳ ಸಕ್ರೀಯ ಪಾಲುಗಾರಿಕೆಗೆ ಹೆಚ್ಚಿನ ಅವಕಾಶವಾಗಿರುವುದು ಸಹಕಾರಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಯ ಸಂಕೇತವೆಂದು ಭಾವಿಸಬಹುದು.

ಸಾಮಾನ್ಯ ಸಭೆಯನ್ನು ಈ ರೀತಿ ವಿಡಿಯೋ ಕಾನ್ಫರೆನ್ಸ್ ಹಾಗೂ ವರ್ಚುಯಲ್ ಮೀಟಿಂಗ್ (video conference & virtual meeting) ಮೂಲಕ ನಡೆಸುವ ಮೊದಲಿಗೆ ತಮ್ಮ ಸದಸ್ಯರಲ್ಲಿ ಈ ಬಗ್ಗೆ ತಾಂತ್ರಿಕತೆಯ ತಿಳುವಳಿಕೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅವಶ್ಯಕ. ಸದಸ್ಯರಲ್ಲಿ ಈ ಬಗ್ಗೆ ತಿಳುವಳಿಕೆ ಕಾರ್ಯ ಯಶಸ್ವಿಯಾಗಿ ನಡೆದಲ್ಲಿ ಈ ರೀತಿಯ ಸಾಮಾನ್ಯ ಸಭೆಗಳು ಯಶಸ್ವಿಯಾಗಿ ನಡೆಯುವುದರಲ್ಲಿ ಸಂದೇಹವಿಲ್ಲ. ಸಹಕಾರಿ ಸಂಸ್ಥೆಗಳಿಗೆ ಇದೊಂದು ಸವಾಲು ಹಾಗೂ ಅವಕಾಶವೂ ಕೂಡ. ಈ ಬಗ್ಗೆ ಪೂರ್ಣ ತಯಾರಿ ಮಾಡಿಕೊಳ್ಳುವುದು ಅವಶ್ಯಕ.

ಶ್ರೇಣಿ 55



# ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

## "ಸೋಲೊಪ್ಪಿಕೊಳ್ಳದೇ ಪ್ರಕೃತಿಯಿಂದ ನಿತ್ಯನಿರಂತರ ಪ್ರೇರಿತವಾಗುತ್ತಿರು"

ಸಾವು ನೋವುಗಳ, ರೋಗ ರುಜಿನಗಳು, ಲಾಭ ನಷ್ಟಗಳು ಮತ್ತು ಮಾನಾಪಮಾನಗಳು ನಿರಂತರವಾಗಿ ಮುಗಿಬಿದ್ದಾಗ ಜೀವನವನ್ನೇದು–ರಿಸುವುದು ಕಷ್ಟಸಾಧ್ಯವೇ ನಿಜ ಇದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಅವುಗಳನ್ನು ಎದುರಿಸುವ ಸಂಬಂಧ ಒಂದು ಉತ್ತಮ ನಿರ್ದೇಶನ ಪದ್ಯವನ್ನು ಆಧ್ಯಾತ್ಮ ಕವಿ ಡಿವಿಜಿಯವರು ನೀಡಿ ಮಹದುಪಕಾರ ಗೈದಿದ್ದಾರೆ. ಪದ್ಯ ಹೀಗಿದೆ.

ಸತ್ತೆ ನೆಂದನಬೇಡ ಸೋತನೆಂದೆನಬೇಡ
ಬತ್ತಿತೆನ್ನೂಳು ಸತ್ವದೊಟೆಯಡನಬೇಡ
ಮೃತ್ಯುವೆನ್ನುವುದೊಂದು ತೆರೆಯಿಳೀತ ತೆರೆಯೇರು
ಮತ್ತೆ ತೋರ್ಪುದು ನಾಳೆ ॥ ಮಂಕುತಿಮ್ಮ॥ 593

ಸಿಂಹವೊಂದು ತನ್ನ ಭೇಟೆಯ ಪ್ರಕ್ರಿಯೆಯಲ್ಲಿ ಶೇ.25% ರಲ್ಲಿ ಮಾತ್ರ ಯಶಸ್ಸುಸಾಧಿಸಿ ಇನ್ನೂಳಿದ 75% ಪ್ರಯತ್ನದಲ್ಲಿ ಸೋಲನ್ನನುಭವಿಸುತ್ತದೆಂಬುದು ಪ್ರಾಣಿ ಭೇಟಿ ವಿಶ್ಲೇಷಣೆ ಕಾರರ ವರದಿಯ ಸಾರಾಂಶ. ಇಷ್ಟು ಕಡಿಮೆ ಶೇಕಡಾವಾರು ಗೆಲುವಿನ ಸಾಧನೆಯಿದ್ದರೂ ಸಿಂಹವು ತನ್ನ ವೈಫಲ್ಯವು ಸಾರಾಂಶ. ಇಷ್ಟು ಕಡಿಮೆ ಶೇಕಡಾವಾರು ಗೆಲುವಿನ ಸಾಧನೆಯಿದ್ದರೂ ಸಿಂಹವು ತನ್ನ ವೈಫಲ್ಯದ ಭಾಗವನ್ನು ಪರಿಗಣಿಸದೇ ಶಿಕಾರಿ ಮುಂದುವರಿಸಿ ತನ್ನ ಜೀವನ ನಿರ್ವಹಣೆ ಮಾಡಕೊಳ್ಳುತ್ತದೆ. ಇಂತಹ ಅನಿವಾರ್ಯ ಶಿಕಾರಿ ಮುಂದುವರಿಕೆಗೆ "ಹಸಿವೊಂದೇ" ಮುಖ್ಯಕಾರಣ ವೆನಿಸದೇ ಪ್ರಾಣಿ ಪ್ರಕೃತಿಗಳ ಮದ್ಯೆ ಏರ್ಪಟ್ಟಿರುವ ಪ್ರಯತ್ನ ಶೀಲತಾ ನಿರಂತರತೆ ಯ (Law of wasted efforts) ಒಪ್ಪಂದವೇ ಮುಖ್ಯ ಕಾರಣವಾಗಿ ಹೊರಹೊಮ್ಮುತ್ತದೆ. ನಿಸರ್ಗದೊಡಲಲ್ಲಿ ಸಂಭವಿಸುವ ಇನ್ನೂ ಕೆಲವು ನಷ್ಟವೆಂಬಂತೆ ತೋರುವ ಪ್ರಕ್ರಿಯೆಗಳನ್ನು ನಮ್ಮ ಗಮನ ಹರಿಸೋಣ.

1. ಮೀನುಗಳಿಂದ ಉತ್ಪತ್ತಿಯಾದ ಮೀನು ಮೊಟ್ಟೆಗಳಲ್ಲಿ 50% ಗಳಿಗಿಂತ ಹೆಚ್ಚಿಗೆ ಭಾಗ ತಿನ್ನಲ್ಪಡುತ್ತವೆ.
2. ಕರಡಿಗಳ ಮರಿಗಳಲ್ಲಿ 50% ಸಾವನ್ನಪ್ಪುತ್ತವೆ.
3. ಆಕಾಶದಿಂದ ಸುರಿವ ಮಳೆ ನೀರು 50% ಕ್ಕಿಂತ ಹೆಚ್ಚಿಗೆ ಭಾಗ ಸಮುದ್ರದ ಮೇಲೆ ಸುರಿಯುತ್ತದೆ.
4. ಮರ ಗಿಡಗಳ ಬೀಜಗಳಲ್ಲಿ ಬಹುಪಾಲು ಹಕ್ಕಿ ಪಕ್ಷಿಗಳ ಪಾಲಾಗುತ್ತದೆ.

ವಿಜ್ಞಾನಿಗಳ ಅಧ್ಯಯನದನ್ವಯ ಪ್ರಾಣಿಗಳು, ಸಸ್ಯಗಳು ಹಾಗೂ ಪ್ರಕೃತಿಯ ಇತರ ಶಕ್ತಿಗಳು ತಮ್ಮ ಉತ್ಪಾದನಾ ಕಾರ್ಯಗಳಲ್ಲಿ ಆಗಬಲ್ಲ ನಷ್ಟಗಳಿಗೆ ಹೊಂದಿಕೊಂಡು ಸ್ವೀಕೃತಭಾವ ವ್ಯಕ್ತಪಡಿಸಿವೆ. ಆದರೆ ಮನುಷ್ಯ ಜೀವಿಯೊಬ್ಬನೇ ತನ್ನ ಪ್ರಯತ್ನಗಳಲ್ಲಿ ಕಂಚಿತ್ ವಿಫಲತೆ ಕಂಡರೂ ಅದನ್ನ ಸೋಲು ಅಥವಾ ತನ್ನ ಪರಾಭವವೆಂದು ಪರಿಗಣಿಸುವವನಾಗಿದ್ದಾನೆ.

ಸಾವಿಲ್ಲದ ಮನೆ ಇಲ್ಲವೆಂಬಂತೆ ಸೋಲಿಲ್ಲದ ಮನುಷ್ಯನೇ ಇಲ್ಲವೆನ್ನಬಹುದು. ಸೋಲನ್ನು ಸವಾಲಾಗಿ ತೆಗೆದುಕೊಂಡು ಬದುಕನ್ನು ಬದಲಿಸಿಕೊಂಡು ಕಾರ್ಯ ನಿರ್ವಹಿಸಿದಾಗ ಜಯ ಕಟ್ಟಿಟ್ಟಬುತ್ತಿ. ಆದ್ದರಿಂದ ನಮ್ಮ ಮನಸ್ಸಿನಾಳದಲ್ಲಿ "Confidance is our best weapon, Never leave home without it. It may not bring success but it gives power to face challenges " ಎಂಬ ನಿರಂತರ ಶಕ್ತಿ ಮಂತ್ರವನ್ನು ಪಠಿಸುತ್ತಾ ಪ್ರಯತ್ನ ಶೀಲರಾಗೋಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 14,990 ಆಗಿರುತ್ತದೆ. ಇವುಗಳ ಪೈಕಿ 7,535 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,455.

**ಅಕ್ಟೋಬರ್ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 359, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 671, ಮಧ್ಯಸ್ಥದಾರರಿಗೆ ವಹಿಸಿದ ಪ್ರಕರಣಗಳು 40.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,489 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 260 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,059 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1006 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 92 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 437 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ 06 ಪ್ರಕರಣ ದಾಖಲಾಗಿರುತ್ತವೆ.



# ಬಿ. ಎಸ್ ಯಡಿಯೂರಪ್ಪ
### ಮಾನ್ಯ ಮುಖ್ಯಮಂತ್ರಿಗಳು

## –: ಶುಭ ಸಂದೇಶ :–

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಸಂಸ್ಥೆಯು 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ 2020ರ ನವೆಂಬರ್ 17 ರಂದು 'ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವ ದಿನಾಚರಣೆ"ಯನ್ನು ಆಚರಿಸುತ್ತಿರುವುದು ಸಂತೋಷದ ವಿಚಾರ.

'ಎಲ್ಲರಿಗಾಗಿ ಒಬ್ಬರು, ಒಬ್ಬರಿಗಾಗಿ ಎಲ್ಲರೂ,' ಎಂಬ ತತ್ವವೇ ಸಹಕಾರ ಕ್ಷೇತ್ರದ ಬುನಾದಿ. ಭಾರತವು ಜಗತ್ತಿನಲ್ಲಿಯೇ ಬೃಹತ್ತಾದ ಸಹಕಾರ ಜಾಲವನ್ನು ಹೊಂದಿರುವುದು ಹೆಮ್ಮೆಯ ಸಂಗತಿ. ಮಹಿಳೆಯರ ಸಬಲೀಕರಣ ಸೇರಿದಂತೆ ಆರ್ಥಿಕವಾಗಿ ಹಿಂದುಳಿದ, ಕೆಳವರ್ಗದ ಜನಸಾಮಾನ್ಯರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಚಳವಳಿ ಮಹತ್ವದ ಪಾತ್ರ ವಹಿಸಿದೆ.

2020ರ ಸಹಕಾರ ಸಪ್ತಾಹದ ಧ್ಯೇಯ 'ಕೊರೋನೋತ್ತರ ಅವಧಿಯಲ್ಲಿ ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ'ವಾಗಿರುವುದು ಔಚಿತ್ಯಪೂರ್ಣವಾಗಿದೆ. ಸನ್ಮಾನ್ಯ ಪ್ರಧಾನಿಯವರು ಘೋಷಿಸಿದ 'ಆತ್ಮನಿರ್ಭರ್ ಭಾರತ್' ಯೋಜನೆಯಿಂದ ಸ್ಫೂರ್ತಿ ಪಡೆದು, ಕರ್ನಾಟಕ ಸರ್ಕಾರವೂ ಸಹ ಕೃಷಿ ನೆರವಿನ ಯೋಜನೆಗಳ ಜೊತೆಗೆ ವಿಶೇಷ ಸಾಲದ ನೆರವಿನ 'ಆರ್ಥಿಕ ಸ್ಪಂದನ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಹಾಗೂ ರಾಜ್ಯ ಮಟ್ಟ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲ ಸಹಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ಆಚರಿಸಲಾಗುತ್ತಿರುವ ಈ ದಿನಾಚರಣೆ ರಾಜ್ಯ ಸಹಕಾರ ಚಳವಳಿಗೆ ಚೈತನ್ಯ ತುಂಬುವ ಮೂಲಕ ಸಹಕಾರ ಕ್ಷೇತ್ರದ ಸುಧಾರಣೆಗೆ ಪೂರಕವಾಗಲಿದೆ ಎಂದು ನಂಬಿದ್ದೇನೆ.

ಈ ಸಂದರ್ಭದಲ್ಲಿ ಸ್ವಾಭಿಮಾನಿ ಸಹಕಾರಿ ವಿಶೇಷ ಸಂಚಿಕೆಯು ಜನಸಾಮಾನ್ಯರಿಗೆ ಹಾಗೂ ಎಲ್ಲ ಸಹಕಾರಿಗಳಿಗೆ ಉಪಯುಕ್ತವಾಗುವ ಲೇಖನಗಳಿಂದ ಕೂಡಿದ್ದು ಸುಂದರವಾಗಿ ಮೂಡಿಬರಲಿ ಎಂದು ಆಶಿಸುತ್ತೇನೆ.

(ಬಿ.ಎಸ್.ಯಡಿಯೂರಪ್ಪ)



## ಚಂದ್ರಪಾಲ್ ಸಿಂಗ್ ಯಾದವ್

**ಅಧ್ಯಕ್ಷರು**

**ರಾಷ್ಟ್ರೀಯ ಸಹಕಾರಿ ಯೂನಿಯನ್, ನವದೆಹಲಿ**

### Message

National Cooperative Union of India is organizing 67th All India Cooperative Week from 14th-20th November, 2020 with the theme “Covid Pandemic–Atmanirbhar Bharat-Cooperatives”. The week-long celebrations provide an opportunity to cooperative organizations to highlight their achievements and chalk out an action-plan which can provide a direction to the growth of the cooperative movement. The Cooperative Week celebrations provide a good occasion to build up awareness for cooperatives at all levels of the society, more particularly the youth, women and weaker sections of the society.

This year’s Cooperative Week celebrations have a deeper significance at a time when the world has been badly affected by corona pandemic which has led to loss of lives and livelihoods. The adverse impact of this crisis has been felt in India too, but the cooperative sector has emerged stronger during this period when the corona calamity shook the entire world. The cooperative organizations in India not only came up with significant contributions through adequate monetary assistance and relief work, but they also ensured that the essential commodities reach the people in time despite the disruptions in the supply chain network. The significant contributions made by AMUL. IFFCO, KRIBHCO, MARKFED, Uralungul Labour Contract Cooperative Society and many other cooperative organizations in this hour of crisis proved the strength of the cooperative model and it’s resilient character. When our country was confronted by corona pandemic, our Hon’ble Prime Minister Shri Narendra Modi came up with a slogan of Atmanirbhar Bharat with a belief that the crisis has to be turned into an opportunity by building up a self-reliant India with a focus on ‘vocal for local’ and ‘local to global”. The cooperative model is a self-reliant model of growth, the most significant example is that of AMUL model which not only enabled our country to be self-sufficient in milk production, while other Asian countries are still dependent on import of milk products. Many of the cooperative products have a strong local orientation and community ethos, but they need strong marketing to develop them into global brands. The Atmanirbhar package provides many opportunities for the cooperatives to take benefits from the package, and utilize various opportunities for strengthening the economy. For example, 1 lakh crore Agri-infrastructure Fund provides many opportunities for PACS in the rural areas to strengthen their infrastructure in the rural areas so as to serve the farmers well and provide them a fair price of their produce.

It is hoped that the Cooperative Week celebrations based on the main theme and sub-themes of Cooperative Week from 14-20th November, 2020 will rejuvenate and infuse new life in the functioning of cooperative organizations so as to face the challenges of corona pandemic. The celebrations must give a strong message to the policy-makers that the cooperatives are indispensable for restructuring our economy during the covid crisis, and they must be given due priority in the policies and programmes of the government. I also request the cooperative organizations at national, state and district levels to organize events in which youth and women may be encouraged to participate in large numbers.

I wish the celebrations all success.

Chandra Pal Singh Yadav



## ಗೋವಿಂದ ಎಂ. ಕಾರಜೋಳ

**ಉಪ ಮುಖ್ಯಮಂತ್ರಿಗಳು**
**ಲೋಕೋಪಯೋಗಿ ಇಲಾಖೆ ಹಾಗೂ**
**ಬಾಗಲಕೋಟೆ ಮತ್ತು ಕಲಬುರಗಿ**
**ಜಿಲ್ಲಾ ಉಸ್ತುವಾರಿ ಸಚಿವರು**

### -: ಶುಭ ಸಂದೇಶ :-

2020ರ ಸಹಕಾರ ಸಪ್ತಾಹದ ಧ್ಯೇಯ – "ಕೋರೋನೋತ್ತರ ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ" (The theme of the 67th All India Cooperative week is "Post covid-19, Role and Responsibility of Cooperatives") ಈ ಒಂದು ಸುಸಂಧರ್ಭದಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯನ್ನು ದಿನಾಂಕ:14 ರಿಂದ 20ನೇ ನವೆಂಬರ್ 2020ರ ವರೆಗೆ ಆಚರಿಸುತ್ತಿರುವುದು ಸಹಕಾರ ಕ್ಷೇತ್ರಕ್ಕೆ ಸಂತೋಷದ ವಿಷಯವಾಗಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಹಾಗೂ ರಾಜ್ಯ ಮಟ್ಟದ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಸಹಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ದಿನಾಂಕ:17.11.2020ರಂದು "ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು" ಈ ದಿನಾಚರಣೆಯನ್ನು ಆಚರಿಸುತ್ತದೆ.

ಈ ಸಂದರ್ಭದಲ್ಲಿ ಸ್ವಾಭಿಮಾನಿ ಸಹಕಾರಿ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡುತ್ತಿದ್ದು, ಈ ವಿಶೇಷ ಸಂಚಿಕೆಯು ಜನಸಾಮಾನ್ಯರಿಗೆ ಹಾಗೂ ಎಲ್ಲಾ ಸಹಕಾರಿಗಳಿಗೆ ಉಪಯುಕ್ತವಾಗಲಿದೆ. ಸಂಯುಕ್ತ ಸಹಕಾರಿಯು ರಾಜ್ಯದ ಸಹಕಾರ ಚಳುವಳಿಗೆ ಬಲ ತಂದು ಕೊಟ್ಟಿರುವ ಹಾಗೂ ಹೊಸ ಚೈತನ್ಯ ನೀಡುತ್ತಿರುವ ಸಹಕಾರಿ ಚಳುವಳಿಯಾಗಿ, ಸಹಕಾರ ಕ್ಷೇತ್ರದ ಗುಣಮಟ್ಟ ಸುಧಾರಣೆಗೆ ಪೂರಕವಾಗಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಆಚರಿಸಲಾಗುತ್ತಿರುವ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಲೆಂದು ಹಾಗೂ ಸಹಕಾರ ತತ್ವದಡಿ ಸೌಹಾರ್ದ ಸಹಕಾರಿ ಬಾಂಧವರ ಶ್ರೇಯೋಭಿವೃದ್ಧಿಗೆ ಮತ್ತಷ್ಟು ಯೋಜನೆಗಳನ್ನು ರೂಪಿಸಿ, ಸಾಕಾರಗೊಳಿಸಿ, ಯಶಸ್ವಿಯಾಗಲೆಂದು ಶುಭ ಹಾರೈಸುತ್ತೇನೆ.

(ಗೋವಿಂದ ಎಂ.ಕಾರಜೋಳ)



## ಎಸ್. ಟಿ. ಸೋಮಶೇಖರ್

**ಮಾನ್ಯ ಸಹಕಾರ ಸಚಿವರು ಹಾಗೂ**
**ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು**

### –: ಶುಭ ಸಂದೇಶ :–

ಪ್ರತಿ ವರ್ಷ ನವೆಂಬರ್ 14 ರಿಂದ 20 ರ ವರೆಗೆ ಸಹಕಾರ ಸಪ್ತಾಹವನ್ನು ರಾಷ್ಟ್ರದಾದ್ಯಂತ ಆಚರಿಸಲಾಗುತ್ತದೆ. ಅದರಂತೆ 2020 ರ ಸಹಕಾರ ಸಪ್ತಾಹದ ಧ್ಯೇಯ–"ಕೊರೋನೋತ್ತರ ಸಹಕಾರ ಸಂಸ್ಥೆಗಳ ಜವಬ್ದಾರಿ ಮತ್ತು ಪಾತ್ರ( The theme of the 67 th All India Cooperative Week is "Post Covid-19, Role and Responsibility of Cooperatives")

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಮತ್ತು ರಾಜ್ಯ ಮಟ್ಟದ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಸಹಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ದಿನಾಂಕ:17.11.2020 ರಂದು "ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು" ಈ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಸಹಕಾರ ತತ್ವದಡಿ ಸೌಹಾರ್ದ ಸಹಕಾರಿ ಬಾಂಧವರ ಶ್ರೇಯೋಭಿವೃದ್ಧಿಗೆ ಮತ್ತಷ್ಟು ಯೋಜನೆಗಳನ್ನು ರೂಪಿಸಿ ಸಾಕಾರಗೊಳಿಸಿ, ಯಶಸ್ವಿಯಾಗಲೆಂದು ಶುಭ ಹಾರೈಸುತ್ತೇನೆ.

ಎಸ್.ಟಿ. ಸೋಮಶೇಖರ್
(ಎಸ್.ಟಿ. ಸೋಮಶೇಖರ್)



# ಡಾ|| ಕೆ. ಸುಧಾಕರ್

**ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು**

## –: ಶುಭ ಸಂದೇಶ :–

ಪ್ರತಿ ವರ್ಷ ನವೆಂಬರ್ 14ರಿಂದ 20ರವರೆಗೆ **'ಸಹಕಾರ ಸಪ್ತಾಹ'**ವನ್ನು ರಾಷ್ಟ್ರದಾದ್ಯಂತ ಆಚರಿಸಲಾಗುತ್ತಿದ್ದು, ಸಹಕಾರ ಸಪ್ತಾಹದ ಏಳು ದಿನಗಳಲ್ಲಿ, ಪ್ರತಿ ದಿನವನ್ನು ಸಹಕಾರ ಕ್ಷೇತ್ರದ ಒಂದೊಂದು ವಿಷಯಕ್ಕೆ ಸಂಬಂಧಿಸಿದ ದಿನವನ್ನಾಗಿ ಆಚರಣೆ ಮಾಡಲಾಗುತ್ತಿದ್ದು, 2020ರ 'ಸಹಕಾರ ಸಪ್ತಾಹ'ದ ಧ್ಯೇಯ – **"ಕೋರೋನೋತ್ತರ ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ"** ಆಗಿದ್ದು, 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಿಸುತ್ತಿರುವುದು ತಿಳಿದು ಸಂತೋಷವಾಗಿದೆ.

ಸನ್ಮಾನ್ಯ ಭಾರತದ ಪ್ರಧಾನಿಯವರು ಘೋಷಿಸಿದ "ಆತ್ಮನಿರ್ಭರ ಭಾರತ" ಪ್ಯಾಕೆಜ್‌ನಿಂದ ಸ್ಫೂರ್ತಿ ಪಡೆದ ಕರ್ನಾಟಕ ರಾಜ್ಯ ಸರ್ಕಾರವು ಕೃಷಿ ನೆರವಿನ ಯೋಜನೆಗಳ ಜೊತೆಗೆ ವಿಶೇಷ ಸಾಲದ ನೆರವಿನ "ಆರ್ಥಿಕ ಸ್ಪಂದನ" ಕಾರ್ಯಕ್ರಮಕ್ಕೆ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಚಾಲನೆ ನೀಡಿದ್ದು, ಇದರಿಂದಾಗಿ ಕೃಷಿಗೆ ಆದ್ಯತೆ ನೀಡಲಾಗಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಹಾಗೂ ರಾಜ್ಯ ಮಟ್ಟದ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಸಹಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ದಿನಾಂಕ 17.11.2020ರಂದು **"ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು"** ಈ **ದಿನಾಚರಣೆಯನ್ನು** ಆಚರಿಸಲಾಗುತ್ತಿರುವು ಹರ್ಷದಾಯಕ ವಿಷಯ. ಈ ಸಂದರ್ಭದಲ್ಲಿ ಸ್ವಾಭಿಮಾನಿ ಸಹಕಾರಿ 'ವಿಶೇಷ ಸಂಚಿಕ'ಯನ್ನು ಬಿಡುಗಡೆ ಮಾಡುತ್ತಿದ್ದು, ಈ ವಿಶೇಷ ಸಂಚಿಕೆಯು ಜನಸಾಮಾನ್ಯರಿಗೆ ಹಾಗೂ ಎಲ್ಲಾ ಸಹಕಾರಿಗಳಿಗೆ ಉಪಯುಕ್ತವಾಗಲಿದೆ.

ಸಂಯುಕ್ತ ಸಹಕಾರಿಯು ರಾಜ್ಯದ ಸಹಕಾರ ಚಳುವಳಿಗೆ ಬಲ ತಂದುಕೊಟ್ಟಿರುವ ಹಾಗೂ ಹೊಸ ಚೈತನ್ಯ ನೀಡುತ್ತಿರುವ ಸಹಕಾರಿ ಚಳುವಳಿಯಾಗಿ, ಸಹಕಾರ ಕ್ಷೇತ್ರದ ಗುಣಮಟ್ಟ ಸುಧಾರಣೆಗೆ ಪೂರಕವಾಗಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಆಚರಿಸಲಾಗುತ್ತಿರುವ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಲೆಂದು ಹಾಗೂ ಸಹಕಾರ ತತ್ವದಡಿ ಸೌಹಾರ್ದ ಸಹಕಾರಿ ಬಾಂಧವರ ಶ್ರೇಯೋಭಿವೃದ್ಧಿಗೆ ಮತ್ತಷ್ಟು ಯೋಜನೆಗಳನ್ನು ರೂಪಿಸಿ, ಸಾಕಾರಗೊಳಿಸಿ, ಯಶಸ್ವಿಯಾಗಲೆಂದು ಶುಭ ಹಾರೈಸುತ್ತೇನೆ.

(ಡಾ|| ಕೆ.ಸುಧಾಕರ್)



# ತುಷಾರ್ ಗಿರಿನಾಥ್

**ಸರ್ಕಾರದ ಪ್ರಧಾನ ಕಾರ್ಯದರ್ಶಿ**

**ಸಹಕಾರ ಇಲಾಖೆ**

## –: ಶುಭ ಸಂದೇಶ :–

ಸಹಕಾರ ಚಳುವಳಿಯ ವ್ಯವಸ್ಥೆಯ ಬಗ್ಗೆ ಜಾಗೃತಿಯುಂಟು ಮಾಡಲು ಹಾಗೂ ಚಳುವಳಿಯ ಧ್ಯೇಯೋದ್ದೇಶಗಳನ್ನು ಬಿಂಬಿಸಲು ದಿನಾಂಕ: 14-11-2020 ರಿಂದ 20-11-2020 ರವರೆಗೆ ರಾಷ್ಟ್ರಾದ್ಯಂತ ಅಖಿಲ ಭಾರತ ಸಹಕಾರ ಸಪ್ತಾಹ ಆಚರಿಸುತ್ತಿರುವುದು ಅತ್ಯಂತ ಸಂತಸದ ವಿಷಯ.

ಅಂತೆಯೇ ರಾಜ್ಯದಲ್ಲಿಯೂ ಸಹ, 67ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ದಿನಾಂಕ 14-11-2020 ರಿಂದ 20-11-2020 ರವರೆಗೆ ಸಹಕಾರ ಚಳುವಳಿಯ ಸಾಧನೆ, ವೈಫಲ್ಯಗಳ ವಿಮರ್ಶೆ, ಚಿಂತನ-ಮಂಥನ ಹಾಗೂ ವಿಶೇಷವಾಗಿ **"ಕೋರೋನೋತ್ತರ ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ"**ದ ಧ್ಯೇಯವನ್ನಿಟ್ಟುಕೊಂಡು ಆಚರಿಸುತ್ತಿರುವುದು ಅತ್ಯಂತ ಸಂತಸದ ವಿಷಯವಾಗಿದೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ಮಾಸಿಕವಾಗಿ ಪ್ರಕಟಿಸಲಾಗುತ್ತಿರುವ "ಸ್ವಾಭಿಮಾನಿ ಸಹಕಾರಿ ಪತ್ರಿಕೆ"ಯ ಮೂಲಕ ಸೌಹಾರ್ದ ಸಹಕಾರಿ ಚಟುವಟಿಕೆಗಳನ್ನು ಪ್ರಚಾರ ಮಾಡುವುದು, ಸಂಯುಕ್ತ ಸಹಕಾರಿಯ ಮಾರ್ಗದರ್ಶನಗಳನ್ನು, ಸರಕಾರದ ಮತ್ತು ಸಹಕಾರ ಇಲಾಖೆಯ ಮಹತ್ವದ ಸುತ್ತೋಲೆಗಳು ಹಾಗೂ ಸೂಚನೆಗಳನ್ನು ಪ್ರಕಟಿಸುತ್ತಿರುವುದು ಶ್ಲಾಘನೀಯವಾಗಿದೆ.

"ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವ" ಕುರಿತು ಆಚರಿಸುತ್ತಿರುವ ಈ ದಿನಾಚರಣೆಯಂದು ಬಿಡುಗಡೆಯಾಗುತ್ತಿರುವ ವಿಶೇಷ ಸಂಚಿಕೆಗೆ ಶುಭ ಕೋರುತ್ತಾ, ಈ ಮೂಲಕ ಸೌಹಾರ್ದ ಸಹಕಾರ ಚಳುವಳಿಯು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

**ಶುಭಾಶಯಗಳೊಂದಿಗೆ,**

(ತುಷಾರ್ ಗಿರಿ ನಾಥ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಹಕಾರ ಇಲಾಖೆ.

## 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಚಿಕ್ಕಬಳ್ಳಾಪುರದಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಅಂಗವಾಗಿ ದಿನಾಂಕ 17.11.2020 ರಂದು "ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು" ದಿನವನ್ನು ಚಿಕ್ಕಬಳ್ಳಾಪರದ ಜಿಲ್ಲಾ ಆಡಳಿತ ಭವನದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಸಹಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ಆಚರಿಸಲಾಗುತ್ತಿದೆ. ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ್ ಇವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕರ್ನಾಟಕ ಸರಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಶ್ರೀ ಡಾ. ಕೆ. ಸುಧಾಕರ್ ಇವರು ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಸಂಘಗಳ ನಿಬಂಧಕರು ಹಾಗೂ ಜಿಲ್ಲೆಯ ಸಂಸದರು, ಶಾಸಕರು, ಪ್ರಮುಖ ಸಹಕಾರಿ ಧುರೀಣರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ರಾಜ್ಯದ ಉತ್ತಮ ಸೌಹಾರ್ದ ಸಹಕಾರಿಗಳಿಗೆ, ಶ್ರೇಷ್ಠ ಸಹಕಾರಿಗಳಿಗೆ ಹಾಗೂ ಜಿಲ್ಲೆಯ ಉತ್ತಮ ಸಹಕಾರಿ ಸಂಸ್ಥೆಗಳಿಗೆ ಸನ್ಮಾನಿಸಲಾಗುವುದು. ಈ ದಿನದ ವಿಷಯದ ಬಗ್ಗೆ ಶ್ರೀ ವೈ.ವಿ ಗಂಡೂರಾವ್ ಇವರು ಉಪನ್ಯಾಸ ನೀಡಲಿಂದು ಈ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರ ಸಂಘಗಳ ನಿವೃತ ಅಪರ ನಿಬಂಧಕರಾದ ಶ್ರೀ ಶಶಿಧರ ಎಲ್ ರವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಸರ್ಪ ವರ್ಣದ ಸಹಕಾರ ಧ್ವಜಾರೋಹಣ ಹಾಗೂ ವಸ್ತು ಪ್ರದರ್ಶನಗಳನ್ನು ಏರ್ಪಡಿಸಲಾಗಿದ್ದು ಕೋವೀಡ್ ಹಿನ್ನಲೆಯಲ್ಲಿ ಅಗತ್ಯ ಮುನ್ನಚ್ಚರಿಕೆ ಕ್ರಮಗಳನ್ನು ವಹಿಸಿ ಕಾರ್ಯಕ್ರಮವನ್ನು ನಡೆಸಲಾಗುವುದು.

## ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ್ ನೇತೃತ್ವದಲ್ಲಿ ನಡೆದ 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧಾತ ಸಭೆ



**ಬೆಂಗಳೂರು** : ದಿನಾಂಕ 14.10.2020 ರಂದು 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಭೆಯನ್ನು ವಿಧಾನಸೌಧದಲ್ಲಿ ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್ ಟಿ ಸೋಮಶೇಖರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ, ಮಾನ್ಯ ಶಾಸಕರಾದ ಶ್ರೀ ಜಿ.ಟಿ ದೇವೇಗೌಡರವರು, ಡಾ. ರಾಜೇಂದ್ರ ಕುಮಾರ ರವರು, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿರವರು, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ರಾಜ್ಯಮಟ್ಟದ ಸಹಕಾರ ಮಹಾ ಮಂಡಳಗಳ ಅಧ್ಯಕ್ಷರು/ಪ್ರತಿನಿಧಿಗಳು ಉಪಸ್ಥಿತರಿದ್ದರು.

ಸಹಕಾರ ಸಪ್ತಾಹ ಸಭೆಯ ನಂತರದಲ್ಲಿ, ಕೋವಿಡ್ ಕಾರಣದಿಂದ ಸಹಕಾರ ಸಂಸ್ಥೆಗಳು ಸಾಮಾನ್ಯ ಸಭೆ ನಡೆಸಲು ತೊಂದರೆ ಉಂಟಾಗಿರುವುದನ್ನು ಪರಿಗಣಿಸಿ ವರ್ಚುವಲ್ (Online) ಸಾಮಾನ್ಯ ಸಭೆ ನಡೆಸಲು ರಾಜ್ಯ ಸರ್ಕಾರ ಸಹಕಾರ ಸಂಸ್ಥೆಗಳಿಗೆ ಅವಕಾಶ ಕಲ್ಪಿಸಲು ಹಾಗೂ ಸಾಮಾನ್ಯ ಸಭೆಯ ಕೋರಂ ಈ ವರ್ಷಕ್ಕೆ ಅನ್ವಯ ಆಗುವಂತೆ 50 ಕ್ಕೆ ನಿಗದಿಪಡಿಸಲು ಸಂಯುಕ್ತ ಸಹಕಾರಿಯ ಅಧ್ಯಕ್ಷರು ಮಾನ್ಯ ಸಹಕಾರ ಸಚಿವರಿಗೆ ಮನವಿ ಮಾಡಿದರು. ಸಹಕಾರ ಸಚಿವರು ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ರಾಜ್ಯ ಸರ್ಕಾರದಿಂದ ಕೆಲವೇ ದಿನಗಳಲ್ಲಿ ಆದೇಶ ಹೊರಡಿಸುವುದಾಗಿ ಭರವಸೆ ನೀಡಿರುತ್ತಾರೆ.



## ಸಚಿವರಾದ ಡಾ. ಕೆ. ಸುಧಾಕರ್ ಆಹ್ವಾನ

**ಬೆಂಗಳೂರು** : ದಿನಾಂಕ 02.11.2020 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಕೆ. ಸುಧಾಕರ್ ಇವರನ್ನು ಸಹಕಾರ ಸಪ್ತಾಹ ಕಾರ್ಯಕ್ರಮಕ್ಕೆ ಆಹ್ವಾನಿಸಿದರು.

# 67ನೇ ಅಖಿಲ ಭಾರತ ಸಹಕಾರ ಸಪ್ತಾಹ
# 14ನೇ-20ನೇ ನವೆಂಬರ್ 2020
# ಮಾರ್ಗದರ್ಶಿ

## 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪ್ರಮುಖ ವಸ್ತು ವಿಷಯ

"ಕೊರೋನ ಸೋಂಕು– ಆತ್ಮನಿರ್ಭರ ಭಾರತ– ಸಹಕಾರ ಸಂಸ್ಥೆಗಳು

COVID Pandemic – Atmanirbhar Bharat – Coopeartives"

ವಿಷಯಗಳು ಈ ಕೆಳಗಿನಂತಿವೆ.

| ದಿನಾಂಕ | ವಿಷಯ |
|---|---|
| 14.11.2020 | ಕೋವೀಡ್–19ರ ನಂತರ ಸಹಕಾರ ಸಂಘಗಳ/ ಸಹಕಾರಿಗಳ ಪಾತ್ರ ಮತ್ತು ಜವಾಬ್ದಾರಿ |
| | Post Covid-19, Role & Responsibility of Cooperatives |
| 15.11.2020 | ಸಹಕಾರ ಮಾರುಕಟ್ಟೆ, ಬಳಕೆದಾರರು, ಸಂಸ್ಕರಣೆ ಮತ್ತು ಮೌಲ್ಯ ವರ್ಧೀಕರಣ |
| | Cooperative Marketing, Consumers, Processing and Value addition |
| 16.11.2020 | ಆನ್‌ಲೈನ್ ಸಂಹವನ ಮುಖಾಂತರ ತರಬೇತಿ ಶಿಕ್ಷಣವನ್ನು ಪುನರ್ ರೂಪಿಸುವುದು. |
| | Re-orienting Training & Education through OnlineCommunication |
| 17.11.2020 | ಸಹಕಾರ ಸಂಘಗಳ ನಡುವೆ ಸಹಕಾರವನ್ನು ಬಲಪಡಿಸುವುದು |
| | Strengthening cooperation among Cooperatives |
| 18.11.2020 | ವ್ಯವಹಾರ, ಉದ್ಯೋಗ ಕಳೆದುಕೊಂಡವರು, ಬಾಧಿತರು ಪುನರುದ್ಯೋಗಸ್ಥರಾಗಲು ಕೌಶಲ್ಯಾಭಿವೃದ್ಧಿ |
| | Skill development to re amploy the job/business looser/victims |
| 19.11.2020 | ಯುವಜನತೆ ಮಹಿಳೆಯರು ಮತ್ತು ಅಬಲ ವರ್ಗಕ್ಕೆ ಸಹಕಾರ ಸಂಘಗಳು |
| | Cooperatives for youth, women and weaker secions |
| 20.11.2020 | ಆರ್ಥಿಕ ಸೇರ್ಪಡೆ, ಸಹಕಾರ ಸಂಘಗಳು ಮೂಲಕ ಡಿಜಿಟಲೀಕರಣ ಮತ್ತು ಸಾಮಾಜಿಕ ಮಾಧ್ಯಮ |
| | Financial inclusion, Digitalization and social media through Cooperatives |

**ಭಾರತದ ರಾಷ್ಟ್ರೀಯ ಸಹಕಾರ ಒಕ್ಕೂಟ**

**ನಂ 3, ಸಿರಿ ಇನ್‌ಸ್ಟಟ್ಯೂಷನ ಏರಿಯಾ, ಆಗಸ್ಟ್ ಕ್ರಾಂತಿ ಮಾರ್ಗ,**

**ನವದೆಹಲಿ – 110 016**

# 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಗೆ ಮಾರ್ಗದರ್ಶನ

## ಕೋವಿಡ್ ಸಾಂಕ್ರಾಮಿಕ - ಸ್ವಾವಲಂಬಿ ಭಾರತ - ಸಹಕಾರ ಸಂಘಗಳು/ ಸಹಕಾರಿಗಳು

ಭಾರತದ ದಿನಾಂಕ 14 ರಿಂದ 20 ರ ನವೆಂಬರ್ 2020 ರವರೆಗೆ ರಾಷ್ಟ್ರೀಯ ಸಹಕಾರ ಒಕ್ಕೂಟವು ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಯಿತು. ಸಹಕಾರ ಚಳುವಳಿಯ ಬೆಳವಣಿಗೆ ದಿಕ್ಸೂಚಿಯಾಗಿ ಈ ವಾರ ಮೋರ್ಕ ಅಚರಣೆಯು ಸಹಕಾರ ಸಂಘಗಳಿಗೆ ತನ್ನ ಯಶೋಗಾಥೆ, ತಮ್ಮ ಸಾಧನೆಗಳನ್ನು ಬಿತ್ತಿ ತೋರಿಸುವುದಕ್ಕೆ ಮತ್ತು ಮುಂದಿನ ಯೋಜನೆಗಳ ತಯಾರಿಗೆ ಅವಕಾಶ ಒದಗಿಸುತ್ತದೆ ಪ್ರತಿ ವರ್ಷ ಈ ಸಪ್ತಾಹವು ಸಹಕಾರ ಸಂಘಗಳಿಗೆ ಕಾರ್ಯಗಾರ ಸಮ್ಮೇಳನ ಸ್ಪರ್ಧೆಗಳನ್ನು ಆಯೋಜಿಸಿ ತನ್ನ ಪ್ರತಿಮೆ ಸೃಷ್ಟಿಸಲು ಸಾಧ್ಯವಾಗುತ್ತಿದೆ. ರಾಷ್ಟ್ರಾದ್ಯಂತ ಎಲ್ಲ ಸಹಕಾರ ಸಂಘಗಳು ವಿವಿಧ ಸಹಕಾರ ಅಭಿವೃದ್ಧಿ ಕಾರ್ಯಗಳನ್ನು ಒಳಗೊಂಡಂತೆ ಈ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈ ಕಾರ್ಯಕ್ರಮವು ಸಾರ್ವಜನಿಕರಲ್ಲಿ ಸಹಕಾರದ ಅರಿವು ಮೂಡಿಸುವುದಲ್ಲದೇ ಸಹಕಾರ ಚಳುವಳಿಗೆ ಅವರನ್ನು ಬೆಸೆಯುತ್ತದೆ. ಈ ಸ್ಪರ್ಧಾತ್ಮಕ ಆರ್ಥಿಕ ಚಟುವಟಿಕೆಗಳಲ್ಲಿ ಸಹಕಾರ ಎದುರಿಸುತ್ತಿರುವ ಸವಾಲಗಳನ್ನು ಅರಿತು ಪುನಶ್ಚೇತನ ಗೊಳಿಸಲು ಮತ್ತು ಎಲ್ಲಾ ಮಟ್ಟಗಳಲ್ಲಿ ತನ್ನ ಕಾರ್ಯಚರಣೆ ಸುಧಾರಿಸಲು ಈ ಸಹಕಾರ ಸಪ್ತಾಹದ ಆಚರಣೆಯನ್ನು ತನ್ನ ಪ್ರಾಮುಖ್ಯತೆ ಯನ್ನು ಪಡೆಯುತ್ತದೆ ಕಾರ್ಯಗಾರ/ಸಮ್ಮೇಳನ/ವಿಚಾರ ಸಂಕಿರಣಗಳನ್ನು ರಾಜ್ಯ ಮಟ್ಟದಲ್ಲಿ ನಡೆಸಿ ಸಹಕಾರ ಸಂಘಗಳ ಆಡಳಿತ ವ್ಯವಸ್ಥೆಗಳನ್ನು ಉತ್ತಮಗೊಳಿಸಲು ಶಿಫಾರಸ್ಸು ಮಾಡಲಾಗಿದೆ.

ಈ ವರ್ಷದ ಸಹಕಾರ ಸಪ್ತಾಹದ ವಸ್ತು ವಿಷಯ ಕೋವಿಡ್ ಸಾಂಕ್ರಾಮಿಕ – ಸ್ವಾವಲಂಬಿ ಭಾರತ – ಸಹಕಾರ ಸಂಘಗಳು ವಿಶ್ವವೇ ಈ ಅತೀವ ಕೊರೋನಾ ಸಾಂಕ್ರಾಮಿಕದಿಂದ ನರಳುತ್ತಿರುವಾಗ ಭಾರತವೂ ಕೂಡ ಕೋವೀಡ್–19 ರ ಜೊತೆಗೆ ಪ್ರವಾಹ, ಮಿಡತೆಗಳ ಹವಳಿ, ಭೂಕಂಪದಂತಹ ನೈಸರ್ಗಿಕ ವಿಕೋಪಗಳನ್ನು ಎದುರಿಸಬೇಕಾಯಿತು. ಭಾರತವನ್ನು ಸ್ವಾವಲಂಭಿಯಾಗಿಸಿ ವಿಷಮ ಸ್ಥಿತಿಯನ್ನು ಅವಕಾಶವಾಗಿ ಪರಿವರ್ತಿಸಲು ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಆತ್ಮ ನಿರ್ಭರ (ಸ್ವಾವಲಂಬಿ)ಭಾರತ ಎಂಬ ಘೋಷಣೆಯನ್ನು ನೀಡಿರುತ್ತಾರೆ. ಜಗತ್ತಿನ ಆರ್ಥಿಕತೆಯ ಪ್ರಮುಖ ಭಾಗವಾಗಿ ಭಾರತವನ್ನು ಸ್ವಾವಲಂಭಿ ಭಾರತವನ್ನಾಗಿ ನಿರ್ಮಾಣಮಾಡಲು ಆತ್ಮ ನಿರ್ಭಾರ ಭಾರತ ಪ್ರಚಾರವನ್ನು ನಮ್ಮ ಪ್ರಧಾನಿಗಳು ಕೈಗೊಂಡಿರುತ್ತಾರೆ. ಇದು ಅವರ ದೃಷ್ಟಿಕೋನವಾಗಿರುತ್ತದ. ಹೀಗೆಂದರೆ ದಕ್ಷತೆಯಿಂದ ಕೂಡಿದ್ದು ಸ್ಪರ್ಧಾತ್ಮಕ, ಸ್ಥಿರವಾಗಿ ಸ್ವಯಂ ಸ್ಥಿರತೆ ಸಾಧಿಸಬಲ್ಲ. ಸ್ವಯಂ ಬೆಳೆಯಬಲ್ಲ ನೀತಿಗಳನ್ನು ಪೋಷಿಸುವುದು. ಭಾರತ ಸರ್ಕಾರವು ಸಡಿಲವಾಗುತ್ತಿರುವ ಆರ್ಥಿಕತೆಯನ್ನು ಸರಿಪಡಿಸಲು ರೂ.20 ಲಕ್ಷ ಕೋಟಿಯ ಆತನಿರ್ಭರ ಭಾರತದಿಂದ ಐದು ಸ್ತಂಭಗಳೆಂದರೆ – ಆರ್ಥಿಕತೆ ಮೂಲಭೂತ ಸೌಕರ್ಯಗಳು, ವ್ಯವಸ್ಥೆಗಳು ಜನಸಂಖ್ಯೆ ಮತ್ತು ಬೇಡಿಕೆ.

ಈ ಮೇಲಿನ ಹಿನ್ನೆಲೆಯಲ್ಲಿ ಆತ್ಮನಿರ್ಭಾರ ಭಾರತ ಕಟ್ಟುವಲ್ಲಿ ಸಹಕಾರ ಸಂಸ್ಥೆಗಳು ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತಾರೆ. ಕೋವೀಡ್ ಸಾಂಕ್ರಮಿಕ ಅವಧಿಯಲ್ಲಿ ರಾಷ್ಟ್ರಾದ್ಯಂತ ಸಹಕಾರ ಸಂಸ್ಥೆಗಳು ಕೋವಿಡ್ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸಲು ಮುನ್ನೆಲೆಯಲ್ಲಿ ತೊಡಗಿಸಕೊಂಡಿದ್ದರು. ಕೇವಲ ಹಣಕಾಸಿನ ಸೌಲಭ್ಯ ಒದಗಿಸುವುದಲ್ಲದೇ ಆಹಾರ, ಸ್ಯಾನಿಟೈಜರ್, ಅವಶ್ಯ ನಿತ್ಯೋಪಯೋಗಿ ವಸ್ತುಗಳ ಹಂಚಿಕೆಯಂತಹ ಸಾಮಾಜಿಕ ಕಾರ್ಯವನ್ನು ಕೈಗೊಂಡಿದೆ. ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಾರ್ಕಫೆಟ್ ಅಮೂಲ್ ನಂತಹ ಸಂಸ್ಥೆಗಳು ಜನರಿಗೆ ಅಗತ್ಯ ವಸ್ತುಗಳ ಪೂರೈಕೆ ಸರಪಳಿಯನ್ನು ಕುಂಟಿತಗೊಳಿಸಲಿಲ್ಲ.

14ನೇ–20ನೇ ನವೆಂಬರ್ 2020ರ ವರೆಗಿನ ಸಹಕಾರ ಸಪ್ತಾಹ ಆಚರಣೆಯ ಪ್ರಮುಖ ವಿಷಯ ಮತ್ತು ಉಪವಿಷಯಗಳ ಬಗ್ಗೆ ಒಂದು ಉತ್ತಮ ತಳಪಯವನ್ನು ನಿರ್ಮಿಸಿ ಸಹಕಾರ ಚಳುವಳಿಯ ಬೆಳವಣಿಗೆಗೆ ನಾಂದಿಯಾಗುತ್ತದೆ ಎಂದು ಭರವಸೆ ಇಡಲಾಗಿದೆ. ಪ್ರತಿದಿನದ ಆಚರಣೆಯ ಪ್ರಮುಖ ವಿಷಯಗಳ ಬಗ್ಗೆ ಕಾರ್ಯಕ್ರಮಗಳು ಸಮ್ಮೇಳನಗಳು / ಕಾರ್ಯಗಳು ಉಪನ್ಯಾಸಗಳು /ಕ್ವಿಜ್ ಸ್ಪರ್ಧೆಗಳು / ಚರ್ಚಾ ಸ್ಪರ್ಧೆ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ ಹೆಚ್ಚಿನ ಯುವ ಜನತೆಯನ್ನು ಸೇರ್ಪಡೆಗೊಳಿಸುವಲ್ಲಿ ಯಶಸ್ವಿಯಾಗುತ್ತದೆ. ಎಂದು ಭಾವಿಸಿದ. ಸಹಕಾರ ಸಪ್ತಾಹದ ಆಚರಣೆಯ ಪ್ರತಿದಿನದ ಪ್ರಮುಖ ವಿಷಯಗಳ ಬಗ್ಗೆ ಮಾರ್ಗದರ್ಶನವಾಗಿ ಚರ್ಚಿಸಲಾಗಿದೆ. ಪ್ರತಿ ದಿನ ಆಚರಿಸಬೇಕಾದ ಕಾರ್ಯಕ್ರಮ ಚಟುವಟಿಕೆಗಳ ಬಗ್ಗೆಯೂ ತಿಳಿಸಲಾಗಿದೆ. ಭಾರತದ ಆರ್ಥಿಕತೆಯಲ್ಲಿ ಸಹಕಾರ ವಲಯವೂ ಪ್ರಮುಖ ಪಾತ್ರ ನಿರ್ವಹಿಸುತ್ತದೆ ಎಂಬುದನ್ನು ಸಾಮಾನ್ಯ ಜನತೆಯಲ್ಲಿ ಅರಿವು ಮೂಡಿಸುವುದಲ್ಲದೇ ನೀಡಿ ರೂಪಿಸುವವರ ಗಮನವನ್ನು ಸಳೆಯಬೇಕಾಗಿದೆ.

# 14ನೇ ನವೆಂಬರ್ 2020
# ಕೋವೀಡ್-19 ರ ನಂತರ ಸಹಕಾರ ಸಂಘಗಳ / ಸಹಕಾರಿಗಳ ಪಾತ್ರ ಮತ್ತು ಜವಾಬ್ದಾರಿ

- ರಿತೇಶದ್, ನಿರ್ದೇಶಕರು, ಭಾ.ರಾ.ಸ ಒಕ್ಕೂಟ. ಕನ್ನಡ ಅನುವಾದ : ಶ್ರೀ ಶಶಿಧರ್ ಎಲೆ

**ಭಾರತದ ಸಹಕಾರ ಸಂಸ್ಥೆಗಳ ಪಾತ್ರ :**

ಕೋವೀಡ್ ಸಾಂಕ್ರಮಿಕ ಬಿಕ್ಕಟ್ಟು ಎದುರಿಸುವಲ್ಲಿ ಸಹಕಾರ ಸಂಸ್ಥೆಗಳು ಮುನ್ನೆಡೆಯಲ್ಲಿ ನಿಂತು ತನ್ನ ಪಾತ್ರ ನಿರ್ವಹಿಸಿರುತ್ತವೆ. ಸಾಮಾಜಿಕ ಅಂತರ ಕಾಪಾಡಲು ಅನೇಕ ಸಣ್ಣ ಮತ್ತು ಬೃಹತ್ ಪಟ್ಟಣ ಸಹಕಾರ ಬ್ಯಾಂಕುಗಳು ಬಳಕೆದಾರರಿಗೆ ಡಿಜಿಟಲ್ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿವೆ. ಇದರಿಂದ ನೌಕರಿರಗೂ ಬಳಕೆದಾರರಿಗೂ ಅಂತರ ಕಲ್ಪಿಸಲು ಸಾಧ್ಯವಾಗಿದೆ. ಭೌತಿಕವಾಗಿ ಬ್ಯಾಂಕಿಗೇ ತೆರಳುವುದನ್ನು ತಪ್ಪಿಸಲು ಮನೆ ಬಾಗಿಲಿಗೆ ವಾಹನದ ಮೂಲಕ ಎ.ಟಿ.ಎಂ ಸೌಲಭ್ಯ ಕೊಟ್ಟಿವೆ.

ರಾಷ್ಟ್ರಾಂದ್ಯಾಂತ ಅವಶ್ಯ ಉಳ್ಳುವರಿಗೆ ಆಹಾರ, ಹಣ ಮತ್ತು ಪಡಿತರ ಸಾಮಾಗ್ರಿಗಳು ಅಕ್ಕಿ, ಮುಂತಾದವುಗಳನ್ನು ಸಹಕಾರ ಸಂಸ್ಥೆಗಳು ಒದಗಿಸಿವೆ. ಈ ರೀತಿಯಲ್ಲಿ ಸರ್ಕಾರಕ್ಕೆ ಬೆಂಬಲವಾಗಿ / ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸಿದವು. ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ಕೇವಲ ಬೃಹತ್ ಸಹಕಾರ ಸಂಸ್ಥೆಗಳಲ್ಲದೆ ಮತ್ತು ನಗರ ಪ್ರದೇಶಗಳಲ್ಲಿ ಕೇವಲ ಬೃಹತ್ ಸಹಕಾರ ಸಂಸ್ಥೆಗಳಲ್ಲದೆ ಸಣ್ಣ ಸಣ್ಣ ಸಹಕಾರ ಸಂಸ್ಥೆಗಳೂ ಕೂಡ ಸಾರ್ವಜನಿಕರಿಗೆ, ಅವಶ್ಯ ಸಾಮಾಗ್ರಿಗಳನ್ನು ನ್ಯಾಯುತ ಬೆಲೆಗೆ ಮನೆಬಾಗಲಿಗೆ ತಲುಪಿಸಿವೆ.

ಇಫ್ಕೋ ಗೊಬ್ಬರ ಸಂಸ್ಥೆಯ ರಾಷ್ಟ್ರವ್ಯಾಪಿಯಾಗಿ ಕೊರೋನಾ ಸರಪಳಿಯನ್ನು ಕಡಿತ ಗೊಳಿಸಲು ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಪ್ರಚಾರದಲ್ಲಿ ಸಾಮಾಜಿಕ ಅಂತರ ಕಾಪಾಡುವುದು. ಸ್ಯಾನಿಟೈಜೇಷನ್ ಆರೋಗ್ಯಕರ ಆಹಾರ ಸೇವನೆ, ಮುಖಗವಸು ಧರಿಸುವುದರ ಬಗ್ಗೆ ಪ್ರಚುರ ಪಡಿಸಲಾಯಿತು. ಅಲ್ಲದೆ. ವಿಟಮಿನ್-ಸಿ ಮಾತ್ರೆಗಳು ಔಷಧಯುಕ್ತ, ಸಾಬೂನು, ಮುಖ ಗವಸು, ಸ್ಯಾನಿಟೈಜರ್ ಮತ್ತು ಅನೇಕ ಔಷಧ ಕಿಟ್‌ಗಳನ್ನು ಭಾರತದ ವಿವಿಧ ಭಾಗಗಳಲ್ಲಿ ವಿತರಿಸಲಾಯಿತು. ಸ್ವಸಹಾಯ ಗುಂಪುಗಳು ತಯಾರಿಸಿದ ಮುಖ ಗವಸುಗಳನ್ನು ಭಾ.ರಾ.ಸ ಒಕ್ಕೂಟದ ಕ್ಷೇತ್ರ ಯೋಜನೆಗಳ ಮೂಲಕ ಜನರಿಗೆ ರೋಗ ತಡೆಗಟ್ಟುವ ಬಗ್ಗೆ ಶಿಕ್ಷಣ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಸಮೂಹ ಅಡಿಗೆ ಮನೆಗಳ ಮೂಲಕ ಅವಶ್ಯ ಜನತೆಗೆ ಆಹಾರವನ್ನು ಒದಗಿಸಲಾಯಿತು.

ಲಾಕ್‌ಡೌನ್ ಆರಂಭದಿಂದಲೂ ರಾಷ್ಟ್ರವೇ ಆಂತಂಕದಲ್ಲಿದಾಗ ಹಾಲಿನ ಸರಬರಾಜು ನಿರಂತರವಾಗಿ ನಡೆಯಿತು. ಗುಜರಾತ್ ಸಹಕಾರಿ ಹಾಲು ಮಹಾಮಂಡಳಿ (ಅಮೂಲ್) ರಾಷ್ಟ್ರಾದ್ಯಂತ ಹಾಲಿನ ಕೊರತೆ ಇಲ್ಲದಂತೆ ನೋಡಿಕೊಳ್ಳವ ಅಶ್ವಾಸನೆ ಇತ್ತು. ಈ ದಿನದ ಹಾಲಿನ ಕೊರತೆ ಉಂಟಾಗಿರುವುದಿಲ್ಲ.

ಪ್ರಧಾನಿಗಳ ಗರೀಬ್ ಕಲ್ಯಾಣ ಅನ್ನಯೋಜನೆ (ಡಿ.ವಿ.ಜಿ.ಕೆ.ಎ.ವೈ) ಯಡಿಯಲ್ಲಿ ನ್ಯಾಫೆಡ್ (ರಾಷ್ಟೀಯ ಸಹಕಾರ ಮಾರುಕಟ್ಟೆ ಮಹಾಮಂಡಳ)ಗೆ 20 ಕೋಟಿ ಮನೆಗಳಿಗೆ ಒಂದು ಕೆ.ಜಿ ದ್ವಿದಳಧಾನ್ಯ ನೀಡುವ (ಮೂರು ತಿಂಗಳ ವರೆಗೆ) ಬೃಹತ್ ಯೋಜನೆಯ ಜವಾಬ್ದಾರಿ ಹೊರಿಸಲಾಗಿತ್ತು. ಬಡ ಮತ್ತು ಅವಶ್ಯ ಜನರಿಗೆ ಒದಗಿಸಲು ಸಂಸ್ಕರಿಸಲಾಗದ ಸದ್ವಿದಳ ಧ್ಯಾನ್ಯಗಳನ್ನು ಗೋದಾಮುಗಳು ಮತ್ತು ವೇರ್ ಹೌಸಿಂಗ್ ಕಾರ್ಪೋರೇಷನ್ ನಿಂದ ಎತ್ತುವಳಿ ಮಾಡಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿತು.

ಭಾರತ ಸರ್ಕಾರವು ಗೊಬ್ಬರ ವಲಯವನ್ನು ಅತಿ ಪ್ರಮುಖ ವಲಯವನ್ನಾಗಿ ಗುರುತಿಸಿತ್ತು. ಇಫ್ಕೋ ಮತ್ತು ಕ್ರಿಭ್ಕೋ ಸಾಂಕ್ರಾಮಿಕರೋಗದ ಪೂರ್ಣ ಅವಧಿಯಲ್ಲಿ ನಿರಂತರವಾಗಿ ಕಾರ್ಯನಿರತವಾಗಿತ್ತು. ಬೆಳೆಗಳಿಗೆ ಅವಶ್ಯ ಪೋಷಕಾಂಶ ಒದಗಿಸುವಲ್ಲಿ ರೈತರಿಗೆ ಯಾವುದೇ ಕೊರತೆಯಾಗಬಾರದೆಂದು ಸಾವಿರಾರು ಕೂಲಿಕಾರ್ಮಿಕರು ಮತ್ತು ನೌಕರರು ಅವಿರತವಾಗಿ ಶ್ರಮವಹಿಸಿ ಕಾರ್ಯನಿರ್ವಹಣೆ ಮಾಡಿದರು. ವಾಹನಗಳ ಮೂಲಕ ರೈತರ ಮನೆ ಬಾಗಿಲಿಗೆ ಗೊಬ್ಬರವನ್ನು ಇಫ್ಕೋ ಮತ್ತು ಕ್ರಿಭ್ಕೋ ಎರಡು ಸಂಸ್ಥೆಗಳು ಮಾಡಿದರು. ಇದರೊಡನೆ ರಕ್ಷಣಾ ಕವಚಗಳು ಮುಖಗವಸು, ಸ್ಯಾನಿಟೈಜರ ಗಳನ್ನು ರಾಷ್ಟ್ರಾದ್ಯಂತ ಅನೇಕ ಕೇಂದ್ರಗಳಲ್ಲಿ ವಿತರಿಸದವು.

ಭಾ.ರಾ.ಸ ಒಕ್ಕೂಟ, ಇಫ್ಕೋ, ಕ್ರಿಭ್ಕೋ ಮತ್ತು ನ್ಯಾಫಡೆ ತೆರೆನಾದ ಅನೇಕ ರಾಷ್ಟೀಯ ಸಂಸ್ಥೆಗಳು ಪ್ರಧಾನಿಗಳ ಕೇರ್ ನಿಧಿಗೆ ಉದಾರವಾಗಿ ಧೇಣಿಗೆ ನೀಡಿದು. ಆಯಾ ರಾಜ್ಯಗಳಲ್ಲಿ ಅನೇಕ ಸಹಕಾರ ಸಂಸ್ಥೆಗಳ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ತಮ್ಮ ಧೇಣಿಗೆ ನೀಡಿದೆ. ಪಟ್ಟಣ ಸಹಕಾರ ಬ್ಯಾಂಕ್‌ಗಳ ಮಹಾಮಂಡಲ ರಾಷ್ಟ್ರಾದ್ಯಂತ ಪಟ್ಟಣ ಸಹಕಾರ ಬ್ಯಾಂಕ್‌ಗಳಿಗೆ ತನ್ನ ನಿವ್ವಳ ಲಾಭದ ಶೇ.2ನ್ನು ಪರಿಹಾರ ನಿಧಿಗಳಿಗೆ ಧೇಣಿಗೆ ನೀಡಲು ವಿನಂತಿಸಿಕೊಂಡಿತು. ರಾಜ್ಯ ಮಟ್ಟದಲ್ಲಿ ಕೇವಲ ನಿಧಿಗೆ ದೇಣಿಗೆ ನೀಡುವುದುರ ಜೊತೆಗೆ ಸಾಂಕ್ರಮಿಕ ರೋಗ ತಡೆಗಟ್ಟಲು ರಾಜ್ಯ ಸರ್ಕಾರಗಳಿಗೆ ಕಾರ್ಯಕ್ರಮಗಳಲ್ಲಿ ವಿವಿಧ ರೀತಿಯಲ್ಲಿ ಪಾಲ್ಗೊಂಡಿವೆ.

ಸಾಂಕ್ರಮಿಕ ಅವಧಿಯಲ್ಲಿ ಬಹುತೇಕ ಸಹಕಾರ ಸಂಸ್ಥೆಗಳು ವೀಡಿಯೋ ಸಮ್ಮೇಳನವನ್ನು ಅಧಿಕಾರಗಳೊಡಣೆ ಮಾತನಾಡಲು ಆಡಳಿತ ಮಂಡಳಿ ಸಭೆ ನಡೆಸಲು, ವೆಬಿನಾರ್, ಆನ್‌ಲೈನ್ ತರಬೇತಿ ಕಾರ್ಯಕ್ರಮಗಳನ್ನು ನಡೆಸಿವೆ. ಈ ಆನ್‌ಲೈನ್ ಸಂವಹನವು ಸದಸ್ಯರು ವಿವಿಧ ಪಾಲುದಾರನ್ನು ದಕ್ಷತೆಯಿಂದ ಮತ್ತು ಕಡಿಮೆ ವೆಚ್ಚದಲ್ಲಿ ತಲುಪಲು ಸಾಧ್ಯ ಮಾಡಿರುತ್ತದೆ.

**ಕೋವಿಡ್ ನಂತರದ ಪರಿಸ್ಥಿತಿ ನಿಭಾಯಿಸಲು ತಯಾರಿ ಮತ್ತು ಮುಂದಿರುವ ದಾರಿ :**

ಸಹಕಾರ ಸಂಸ್ಥೆಗಳ ಕೊಡುಗೆಯ ಹಿನ್ನೆಲೆಯಲ್ಲಿ ಕೋವೀಡ್-19ರ ನಂತರದ ಪರಿಸ್ಥಿತಿಯನ್ನು ತಿಳಿಯೋಣ ಕೋವೀಡ್-19 ಸಾಂಕ್ರಮಿಕವು ಮೂಲಭೂತವಾಗಿ ಆರ್ಥಿಕತೆಯನ್ನು ಸಮಾಜವನ್ನು ಬದಲಾಯಿದಿರುವುದಲ್ಲದೇ ಜನರ ಜೀವನ ಶೈಲಿಯನ್ನು ಬದಲಾಯಿಸಿದೆ. ಸಮಾಜದ ಸುಸ್ಥಿರ ಆರ್ಥಿಕತೆಗೆ ಪರ್ಯಾಯ ಅಭಿವೃದ್ಧಿ ಸಮಾಜದ ಸುಸ್ಥಿರ ಅರ್ಥಿಕತೆಗೆ ಪರ್ಯಾಯ ಅಭಿವೃದ್ಧಿ ಮಾಧರಿಗಳನ್ನು ಸೃಜಿಸಬೇಕಾಗಿದೆ. ಭವಿಷ್ಯವು ಸಾಮಾಜಿಕ ವ್ಯವಹಾರಗಳಿಗೆ ಸಂಬಂಧಿಸಿರುತ್ತಾದ್ದರಿಂದ ಅದು ಸಹಕಾರ ಸಂಘಗಳಿಗೆ ಸರಿಹೊಂದುತ್ತದೆ. 1930 ರ ಆರ್ಥಿಕ ಹಿಂಜರಿಕೆ 2008ರ ಆರ್ಥಿಕ ಕುಸಿತದ ನಂತರ ಮೊದಲ ಬಾರಿಗೆ ಆರ್ಥಿಕತೆಗೆ ಸರ್ಕಾರವು ಹಣಕಾಸು ಒದಗಿಸುತ್ತದೆ.

ರಾಜ್ಯದ ಖಜಾನೆಗಳನ್ನು ಆರ್ಥಿಕತೆಗೆ ನಿಧಿಗಳನ್ನು ಒದಗಿಸುತ್ತಿದ್ದಂತೆ ಮಾರುಕಟ್ಟೆಯಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಲಭ್ಯವಿರುವಂತೆ ನೋಡಿಕೊಳ್ಳಲು ಅಂತರಾಷ್ಟೀಯ ಸಂಪನ್ಮೂಲಗಳನ್ನು ಲಭ್ಯವಿರುವಂತೆ ನೋಡಿಕೊಳ್ಳಲು ಅಂತರರಾಷ್ಟೀಯ ಆರ್ಥಿಕ ಸಂಸ್ಥೆಗಳು ಕೇಂದ್ರಿಯ ಬ್ಯಾಂಕ್‌ಗಳ ತಮ್ಮ ಹಣ-ಕಾಸಿನ ನೀತಿಯನ್ನು ಬದಲಾಯಿಸಿ ಹಣ ದೊರೆಯುವ ಸ್ಥಿತಿಯನ್ನು ಸುಲಭಗೊಳಿಸುತ್ತವೆ. ಇತರೆ ಪದಗಳಲ್ಲಿ ಹೇಳುವುದಾದರೆ ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿ ಹಿಂದೆಂದೂ ಇಲ್ಲದ ದ್ರವ್ಯಾಸ್ಥಿ ಲಭ್ಯವಿರುತ್ತದೆ ಇದು ಸಹಕಾರಿ ಸಂಸ್ಥೆಗಳಿಗೆ ಅನ್ವೇಷಿಸಲು ನೂತನ ಅವಿಷ್ಕಾರಗಳನ್ನು ಸೃಷ್ಟಿಗಳು ದೊಡ್ಡ ಅವಕಾಶವನ್ನು ಒದಗಿಸಿದೆ. ತಮ್ಮ ವ್ಯವಹಾರ ಆಸಕ್ತಿ ಸದಸ್ಯರು ಆಸಕ್ತಿ ಮತ್ತು ಚೇತರಿಸಿಕೊಳ್ಳುತ್ತಿರುವ ಆರ್ಥಿಕತೆಯ ಆಸಕ್ತಿಯ ಸಾಮಥ್ಯ ಹಿಗ್ಗಿಸಲು ಈ ದ್ರವಾಸ್ಥಿಯನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

ಸ್ವಾಯತ್ತತೆಯ ಆದರೆ ಜಾಗಿತಕವಾಗಿ ಪ್ರತ್ಯೇಕ ವಲ್ಲದ ಆರ್ಥಿಕತೆಯೆಡೆಗೆ ಶ್ರಮವಹಿಸಲು ಭಾರತ ಸರ್ಕಾರವು ಕರೆ ನೀಡಿದೆ. ರಾಷ್ಟ್ರೀಯ ಮಾರುಕಟ್ಟೆಗೆ ರೂ ಇಪ್ಪತ್ತು ಲಕ್ಷ ಕೋಟಿ ಹಣ ಒದಗಿಸಲು ಅವಕಾಶ ಕಲ್ಪಿಸಿದೆ. ಇದು ರಾಷ್ಟ್ರದ ಸಹಕಾರಿ ಸಂಸ್ಥೆಗಳು ತಮ್ಮ ಭವಿಷ್ಯದ ನೀತಿ ಮತ್ತು ತಂತ್ರಗಾರಿಕೆ ರೂಪಿಸುವಲ್ಲಿ ದಿಕ್ಸೂಚಿಯಾಗಿದೆ. ಸರ್ಕಾರ, ಸಹಕಾರ ಉತ್ತುಂಗ ಸಂಸ್ಥೆಗಳು ಮತ್ತು ಪ್ರಾಥ-ಮಿಕ ಸಹಕಾರ ಸಂಸ್ಥೆಗಳು ಈ ದಿಸೆಯಲ್ಲಿ ಹೆಜ್ಜೆ ಇಡುವ ಅವಶ್ಯಕತೆ ಇದೆ.

ಕೋವೀಡ್-19 ರ ನಂತರದ ಪರಿಸ್ಥಿತಿಯಲ್ಲಿ ಕೇಂದ್ರ ರಾಜ್ಯ ಸರ್ಕಾರವು ಬ್ಯಾಂಕ್‌ಗಳು ಆರ್ಥಿಕ ಸಂಸ್ಥೆಗಳು ಖಾಸಗಿ ವಲಯ ಕೈಗಾರಿಕೆಗಳು ಸಹಕಾರ ಸಂಸ್ಥೆಗಳು ಮತ್ತು ಎಲ್ಲ ರೀತಿಯ ಸಂಸ್ಥೆಗಳು ಆರ್ಥಿಕತೆಗೆ ಬಲತುಂಬಲು ಪರಿಸ್ಥಿತಿಯನ್ನು ಆಗಿಂದಾಗ್ಯೆ ಪರಿಶೀಲಿಸಿ ಮೇಲ್ವಿಚಾರಣೆ ಮಾಡಿ ಆಗಿಂದಾಗ್ಯೆ ವಿವೇಚನಯುತ ದೃಡ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾತ್ತದೆ. ಸಹಕಾರ ವಲಯ ತನ್ನ ಬೃಹತ್ ಜಾಲದಿಂದ ಅತಿಯಾಗಿ ತೊಂದರೆಗಿಡಾರುವ ಪ್ರದೇಶಗಳಲ್ಲಿ ವ್ಯಕ್ತಿಗತ ಆರೋಗ್ಯವನ್ನು ಮತ್ತು ರಾಷ್ಟ್ರದ ಆರ್ಥಿಕತೆಯ ಪುನರ್ ಸ್ಥಾಪನೆಗೆ ಮತ್ತು ಆರ್ಥಿಕತೆಗೆ ಸುಧಾರಣೆ ತನ್ಮೂಲಕ ಸಾಮಾಜಿಕ ಆರ್ಥಿಕ ಸುಧಾರಣೆಗೆ ಸಮರ್ಥವಾಗಿದೆ.

ಉತ್ತುಂಗ ಸಹಕಾರ ಸಂಸ್ಥೆಗಳು ಅದರಲ್ಲಿಯೂ ಸಹಕಾರ ಬೆಂಬಲಿಸುವ ಸಂಸ್ಥೆಗಳು ಸಹಕಾರ ಸಂಸ್ಥೆಗಳು ಪ್ರಮುಖ ಪಾತ್ರ ನಿರ್ವಹಿಸುವಂತಾಗಲು ಸರ್ಕಾರದೊಡನೆ ವ್ಯವಹರಿಸಿ ನೀತಿ ನಿಯಮಗಳನ್ನು ರೂಪಿಸಲು ಕ್ರಮ ತೆಗೆದುಕೊಳ್ಳಬೇಕು. ಅನೇಕ ವ್ಯವಹಾರಗಳು ಒತ್ತಡದಲ್ಲಿವೇ ಕೇಲವಂತೂ ಮುಚ್ಚಿಹೋಗುವ ಸ್ಥಿತಿಯಲ್ಲಿವೆ. ಈ ರೀತಿಯ ಸಂಸ್ಥೆಗಳನ್ನು ಕೆಲಸಗಾರರು ಕೆಲಸಗಾರರ ಸಹಕಾರ ಸಂಸ್ಥೆಯಾಗಿ ಪರಿವರ್ತಿಸಲು ವಿಫಲ ಅವಕಾಶಗಳಿವೆ. ಹಾಲಿ ಖಾಸಗೀಕಾರಣ ನೀತಿಗೆ ಬದಲಾಗಿ ಸಹಕಾರೀಕರಣ ನೀತಿಗೆ ಸರ್ಕಾರ ಒಲವು ತೋರಿಸುವ ಅವಶ್ಯಕತೆಯಿದೆ. ಆರ್ಥಿಕ ಮತ್ತು ತೆರಿಗೆ ವಿಷಯಗಳಲ್ಲಿ ಸಹಕಾರ ಸಂಸ್ಥೆಗಳ ದೇಣಿಗೆಯೊಂದಿಗೆ ಒಗ್ಗಟ್ಟಿನ ನಿಧಿಯನ್ನು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಸ್ಥಾಪಿಸುವ ಬಗ್ಗೆ ಆಲೋಚಿಸಬಹುದಾಗಿದೆ. ಉನ್ನತ ಮತ್ತು ಕೆಳಮಟ್ಟದಲ್ಲಿ ಸಹಕಾರ ಸಂಸ್ಥೆಗಳ ನಡುವೆ ಸಹಕಾರ ತತ್ವ ಪಾಲಿಸುವ ಅವಶ್ಯಕತೆ ಇದೆ. ಇದರಿಂದ ಜಂಟಿಯಾಗಿ ತಂತ್ರಗಾರಿಕೆ ರೂಪಿಸುವ ಮತ್ತು ವ್ಯವಹಾರ ಮಾದರಿಯನ್ನು ರೂಪಿಸುವುದರಿಂದ ಆರ್ಥಿಕ ಸಂಸ್ಥೆ ಮತ್ತು ಸರ್ಕಾರದಿಂದ ದ್ರವ್ಯಾಸ್ತಿ ಪಡೆದು ಸದಸ್ಯರ ಅವಶ್ಯಕತೆಗಳನ್ನು ಪೂರೈಸಬಹುದಾಗಿದೆ. ಈ ಎಲ್ಲ ಉಪಕ್ರಮಗಳನ್ನು ಉತ್ತುಂಗ ಸಹಕಾರ ಸಂಸ್ಥೆಗಳು ರೂಪುಗೊಟ್ಟು ಅನುಷ್ಠಾನ ಗೊಳಿಸಬೇಕು.

ಸಾಂಕ್ರಮಿಕ ಪಿಡಗಿನಿಂದ ತೊಂದರೆಗೀಡುವವರಿಗೆ ಹತ್ತಿರವಿರುವುದು. ಪ್ರಾಥಮಿಕ ಸಹಕಾರ ಸಂಸ್ಥೆಗಳು ಇದು ಕೇವಲ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಯಲ್ಲ. ಕೆಲಸ ಕಳೆದುಕೊಂಡಿರುವುದು, ಆದಾಯ ಮೂಲಕ ನಷ್ಟ ಉತ್ಪನ್ನವನ್ನು ಮಾರಾಟ ಮಾಡಲಾಗಿದೆ. ಪರಿಸ್ಥಿತಿ ಅಗತ್ಯ ವಸ್ತುಗಳ ಲಭ್ಯತೆ. ವಲಸೆ ಕಾರ್ಮಿಕರು ಹಿಂತಿರುಗಿ ಬಂದಿರುವುದು ಎಲ್ಲವೂ ಸವಾಲುಗಳಾಗಿವೆ. ಸಹಕಾರ ಸಂಸ್ಥೆಗಳು ಬೆದರಿಕೆಗಳನ್ನು ಕಡಿಮೆಗೊಳಿಸಿ ಅವಕಾಶಗಳನ್ನು ಬಳಸಬೇಕಾಗಿದೆ. ಸಾಂಕ್ರಾಮಿಕತೆಯಿಂದ ಆಗಿರುವ ನರ್ಕಾರ್‍ರ್ಕ ಪರಿಣಾಮಗಳನ್ನು ಕಡಿಮೆಗೊಳಿಸಿಕೊಳ್ಳುವುದಲ್ಲದೆ ದೀರ್ಘಾವಧಿ ಸುಸ್ಥಿತಗೊಳ್ಳುವಲ್ಲ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳಬೇಕಾಗಿದೆ.

ಪ್ರಾಥಮಿಕ ಸಂಸ್ಥೆಗಳು ತಮ್ಮ ಸದಸ್ಯರ ಹಿತಾಸಕ್ತಿಯನ್ನು ರಕ್ಷಣಾತ್ಮಕ ಕ್ರಮಗಳು ಪರಿಹಾರ ಮತ್ತು ಚಿಕಿತ್ಸ ಕ್ರಮಗಳಿಂದ ಕೈಗೊಳ್ಳುವ ಅವಶ್ಯಕತೆ ಇದೆ. ಆರೋಗ್ಯ ಶುಚಿತ್ವದ ಬಗ್ಗೆ ಸದಸ್ಯರಿಗೆ ಶಿಕ್ಷಣ, ಸದಸ್ಯರಿಗೆ ಒಂಟಿತನದ ಭಾವದಿಂದ ಹೊರಬರುವಂತೆ ಮಾಡುವುದು ಅವರ ಕುಟುಂಬಗಳಿಗೆ ಅವಶ್ಯ ಆಹಾರ ಸಾಮಗ್ರಿಗಳು / ಸೇವೆಯನ್ನು ಒದಗಿಸುವುದು ಈ ಸಹಕಾರ ಸಂಸ್ಥೆಗಳ ದೀರ್ಘಾವಧಿ ಕಾರ್ಯಕ್ರಮವಾಗಬೇಕಾಗಿದೆ. ಧೀರ್ಘಾವಧಿ ಕಾರ್ಯಕ್ರಮಗಳ ಅಂಗವಾಗಿ ಸುಸ್ಥಿರ ವ್ಯಾಪಾರ ಮಾದರಿ ನಿರ್ಮಿಸುವಲ್ಲಿ ತಮ್ಮ ವ್ಯವಹಾರಗಳನ್ನು ವೈವಿಧ್ಯಮಯಗೊಳಿಸುವ, ಸಹಕಾರದ ಬ್ರಾಂಡ್ ನಿರ್ಮಾಣ ಮಾಡುವ ಸ್ಥಳೀಯ ಸಣ್ಣ ವ್ಯವಹಾರಗಳನ್ನು ಪ್ರೋತ್ಸಾಹಿಸುವ ಅವಶ್ಯಕತೆಯುಳ್ಳ ಯುವಜನರಿಗೆ ರಿಯಾಯ್ತಿ ದರದಲ್ಲಿ ಸಾಲ ಒದಗಿಸುವ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮತ್ತು ಕೃಷಿಯೇತ್ತರ ಚಟುವಟಿಕೆಗಳಿಗೆ ಅನುಕೂಲ ಒದಗಿಸುವ ತಮ್ಮ ಸ್ವಂತ ಸ್ಥಳಗಳಿಗೆ ಹಿಂದಿರುಗಿ ಒಂದಿರುವ ವಲಸೆ ಕಾರ್ಮಿಕರಿಗೆ ತಮ್ಮ ನೈಪುಣ್ಯ ಮರು ನೈಪುಣ್ಯ ಒದಗಿಸುವುದು. ಈ ತರಹದ ಸ್ಥಳೀಯ ಅವಶ್ಯಕತೆ ಸಂಪನ್ಮೂಲಗಳನ್ನು ಆಧರಿಸಿ ಒದಗಿಸುವುದಾಗಿದೆ.

ಅಂತಿಮವಾಗಿ ಸಹಕಾರ ಸಂಸ್ಥೆಗಳಿಗೆ ತಮ್ಮ ಕೆಲಸವನ್ನು ಮೌಲ್ಯಮಾಪನಕ್ಕೆ ಒಳಪಡಿಸುವ ಪುನರ್ ಆಲೋಚನೆ ಮಾಡುವ ನೂತನ ಅವಿಷ್ಕಾರ ಮಾಡುವ ಹಾಲಿ ಕೆಲಸ ಕಾರ್ಯಗಳನ್ನು ಪುನರ್ ರೂಪಿಸಲು ಮತ್ತು ಪರಿಸರ ಹಸನಗೊಳಿಸುವ ಡಿಜಿಟಲೀಕರಣ ಮಾಹಿತಿ ತಂತ್ರಜ್ಞಾನದ ಪೂರ್ಣ ಉಪಯೋಗ ಪಡೆಯುವ ಕಾರ್ಯಕ್ರಮ ರೂಪಿಸಬೇಕಾಗಿದೆ. ಇದರಿಂದ ನೌಕರರ ಮತ್ತು ಇತರೆ ಪಾಲುದಾರರ ದೈಹಿಕ ಅಂತರ ಕಾಪಾಡಲು ಸಾಧ್ಯವಾಗುತ್ತದೆ. ಈ ಆರಂಭಿಕ ಕ್ರಮಗಳು ವೆಚ್ಚ ದಕ್ಷವಾಗಿರಲು ಸುಸ್ಥಿರತೆ ಸಾಧಿಸಲು ಸಾಧ್ಯವಾಗುವುದಲ್ಲದೆ ವಿಶ್ವ ಎದುರುಸುತ್ತಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುತ್ತದೆ.

**ಸಹಕಾರ ಸಪ್ತಾಹದ ಅವಧಿಯಲ್ಲಿ ಮೇಲಿನ ವಿಷಯ ಅವಲಂಭಿಸಿ ಸಹಕಾರ ಸಂಸ್ಥೆಗಳ ಈ ಕೆಳಕಂಡ ಚಟುವಟಿಕೆಗಳು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.**

1. ಕೋವಿಡ್ ನಂತರದ ಪರಿಸ್ಥಿತಿಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಕಾರ್ಯಾಗಾರ ನಡೆಸುವುದು. ಚರ್ಚಾ ಸಭೆಗಳನ್ನು ನಡೆಸುವುದು.

2. ಮೇಲಿನ ವಿಷಯದ ಬಗ್ಗೆ ಮೇಲ್ಮಟ್ಟದ ನಾಯಕತ್ವ ಮತ್ತು ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

3. ಕೋವಿಡ್ ನಂತರದ ಸಹಕಾರ ಸಂಸ್ಥೆಗಳ ಪಾತ್ರ ಬಗ್ಗೆ ತಂತ್ರಗಾರಿಕೆ ರೂಪಿಸಿ ದೃಷ್ಟಿಕೋನದ ಲೇಖನ ತಯಾರಿಸಿ ಅವರ ಮಹಾಮಂಡಳದ ಒಕ್ಕೂಟಗಳ ಮೂಲಕ ಕೇಂದ್ರ ರಾಜ್ಯ ಸರ್ಕಾರಗಳಿಗೆ ಸಲ್ಲಿಸುವುದು.

# 15ನೇ ನವೆಂಬರ್ 2020
# ಸಹಕಾರಿ ಮಾರುಕಟ್ಟೆ ಬಳಕೆದಾರರ, ಸಂಸ್ಕರಣೆ ಮತ್ತು ಮೌಲ್ಯವರ್ಧಿಕರಣ

– ವೇದಪ್ರಕಾಶ್, ನಿರ್ದೇಶಕರು, ಭಾ.ರಾ.ಸ ಒಕ್ಕೂಟ. ಕನ್ನಡ ಅನುವಾದ : ಶ್ರೀ ಶಶಿಧರ್ ಎಲೆ

ಸಹಕಾರ ಸಂಸ್ಥೆಗಳು ಸಾಮಾಜಿಕ ಆರ್ಥಿಕ ಸಂಸ್ಥೆಗಳಾಗಿದ್ದು ಅವು ಸಮೂಹ ಸೇವೆಯನ್ನೇ ಪ್ರಮುಖ ಅಂಶವಾಗಿ ಹೊಂದಿರುತ್ತದೆ. ಅವು ಕೇವಲ ಲಾಭವನ್ನೇ ಪ್ರಮುಖ ಉದ್ದೇಶಹೊಂದಿರುವುದಿಲ್ಲ. ಸಮಾಜದ ಬಡಜನತೆಗೆ ಸೇವೆ ಒದಗಿಸುವ ಉದ್ದೇಶವನ್ನೇ ಹೊಂದಿರುತ್ತದೆ. ಯಾವುದೇ ಖಾಸಗಿ ಸಂಸ್ಥೆಗಿಂತ ಬಲವಾದ ಸದಸ್ಯರ ಸಂಬಂಧವಿರುವುದರಿಂದ ಅವು ಹೆಚ್ಚು ಪಾರದರ್ಶಕವಾಗಿ ಕಾರ್ಯನಿರ್ವಹಿಸುತ್ತದೆ. ಅವು ಸಹಕಾರ ಮೌಲ್ಯಗಳು ಮತ್ತು ತತ್ವಗಳ ಆಧಾರದ ಮೇರೆಗೆ ನಡೆಯುತ್ತವೆ. ಸಣ್ಣ ರೈತರಿಗೆ ಅವರ ಉತ್ಪನ್ನಗಳಿಗೆ ನ್ಯಾಯ ಬೆಲೆ ಒದಗಿಸಲು ಅತ್ಯುತ್ತಮ ಮಾದರಿ ಸಹಕಾರಿ ಮಾದರಿ ಮಾರುಕಟ್ಟೆ ಸಹಕಾರ ಸಂಘಗಳು ಸದಸ್ಯರು (ರೈತರು) ಮತ್ತು ವ್ಯಾಪಾರಸ್ಥರ ನಡುವೆ ಏಜೆಂಟರಾಗಿ ವರ್ತಿಸುತ್ತದೆ. ಉತ್ಪಾದಕರು ಉತ್ಪನ್ನಗಳನ್ನು ಸಹಕಾರ ಸಂಘಕ್ಕೆ ಸರಬರಾಜು ಮಾಡುತ್ತಾರೆ. ಅತಿ ಹೆಚ್ಚು ಬೆಲೆ ನೀಡುವವರಿಗೆ ಮಾರಾಟ ಮಾಡಲಾಗುತ್ತದೆ. ಸಣ್ಣ ಕಮಿಷನ್ ಮೊತ್ತ ಮುರಿದುಕೊಂಡು ಉತ್ಪನ್ನದ ಬೆಲೆಯನ್ನು ರೈತರಿಗೆ ಪಾವತಿಸಲಾಗುತ್ತದೆ. ಸಂಘಗಳು ಮಾರುಕಟ್ಟೆಗಾಗಿ ಅವಶ್ಯ ವಸ್ತುಗಳನ್ನು ಶೇಖರಿಸುವುದು ವರ್ಗೀಕರಿಸುವುದು ಮತ್ತು (ಪೊಟ್ಟಣ ಕಟ್ಟುವುದು) ಪ್ಯಾಕೆಜಿಂಗ್ ಮಾಡುವ ಕಾರ್ಯನಿರ್ವಹಿಸುತ್ತವೆ. ಮಾರುಕಟ್ಟೆ ಸಹಕಾರ ಸಂಘಗಳು ಸದಸ್ಯರು ಮತ್ತು ವ್ಯಾಪಾರಸ್ಥರ ನಡುವೆ ನಡೆಸುವ ಏಜೆನ್ಸಿ ವ್ಯವಹಾರದಿಂದ ಗಳಿಸಿದ ಲಾಭಕ್ಕೆ ಆದಾಯ ತೆರಿಗೆ ಕಲಂ 80ಪಿ(2)(iii) ಯಲ್ಲಿ ಶೇ 100 ವಿನಾಯ್ತಿ ನೀಡಲಾಗಿದೆ. 2022ಕ್ಕೆ ರೈತರ ಸಂಸ್ಥೆಗಳು ಸರ್ಕಾರದ ಅಂಶದ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರ ನಿರ್ವಹಿಸಬಹುದಾಗಿರುತ್ತದೆ. ಅತ್ಯಂತ ತಳಮಟ್ಟದಲ್ಲಿ ಗ್ರಾಮ ಮತ್ತು ನಗರದ ಅಂತರವನ್ನು ಕಡಿಮೆಗೊಳಿಸುವುದರಲ್ಲಿ ಆದಾಯ ಸೃಷ್ಟಿಸುವ ಅವಕಾಶ ಕಲ್ಪಿಸುವುದರಲ್ಲಿ ಸಹಕಾರ ವಲಯ ಮಹತ್ತರ ಪಾತ್ರ ವಹಿಸುತ್ತದೆ.

**ಸಹಕಾರ ಮಾರುಕಟ್ಟೆಯ ಪ್ರಾಮುಖ್ಯತೆ :**

ಸಹಕಾರ ಮಾರುಕಟ್ಟೆ ಸಂಸ್ಥೆಗಳು ಉತ್ಪಾದಕರು ಒಟ್ಟಿಗೆ ತಮ್ಮ ಉತ್ಪನ್ನ ಮಾರುಕಟ್ಟೆ ಮಾಡಲು ಸ್ಥಾಪಿಸಿರುವ ಸಂಸ್ಥೆಗಳು. ಒಬ್ಬ ವ್ಯಕ್ತಿ ಉತ್ಪಾದಕ ತನ್ನ ಮಾರುಕಟ್ಟೆ ಮಾಡಬಹುದಾದ ಉತ್ಪನ್ನವನ್ನು ಮಾರಾಟ ಮಾಡಲಾಗಿದೆ. ಪರಿಸ್ಥಿತಿಯಲ್ಲಿ ಸದಸ್ಯರು ಒಗ್ಗೂಡಿಸಿ ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡುವುದರಿಂದ ಹೆಚ್ಚಿನ ಅನುಕೂಲತೆಯನ್ನು ಪಡೆಯಬಹುದಾಗಿದೆ. ಸದಸ್ಯರು ಬಳಸಲಾಗದ ಹೆಚ್ಚುವರಿ ಉತ್ಪನ್ನವನ್ನು ಮಾರಾಟ ಮಾಡಲು ಮಾರುಕಟ್ಟೆ ಸಹಕಾರ ಸಂಘಗಳಲ್ಲದೇ ಮೀನು ಅಥವಾ ಕುಶಲಕರ್ಮಿಗಳ ಮತ್ತು ಇತರೆ ಸಾಮಾಗ್ರಿಗಳ ಸಂಘಗಳೂ ಇವೆ. ಮಾರುಕಟ್ಟೆ ಸಹಕಾರ ಸಂಘಗಳು ರೈತರಿಗೆ ಹೆಚ್ಚಿನ ಬೆಲೆ ದೊರಕಿಸುತ್ತವೆ. ಭಾರತದಲ್ಲಿ ನ್ಯಾಫೆಡ್ ಸಂಸ್ಥೆಯು ಮಾರುಕಟ್ಟೆ ಸಹಕಾರ ಸಂಘಗಳು ಆಶ್ರಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. 2ನೇ ಅಕ್ಟೋಬರ್ 1958 ರಲ್ಲಿ ಸ್ಥಾಪಿಸಲಾಯಿತು. ನಾಫೆಡ್ ನ ಉದ್ದೇಶಗಳು ಎಂದರೆ ಕೃಷಿ, ತೋಟಗಾರಿಕೆ. ಅರಣ್ಯ ಉತ್ಪನ್ನಗಳ ಸಂಗ್ರಹಣೆ ಸಂಸ್ಕರಣೆ, ಮಾರುಕಟ್ಟೆ ದಾಸ್ತಾನು ಮಾಡುವುದಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಮತ್ತು ಹಂಚಿಕೆ ಪ್ರಮುಖ ಕಾರ್ಯವಾಗಿದೆ. ಕೃಷಿ ಉತ್ಪನ್ನಗಳು ಬೇಗ ಕೆಡುವುದು ಋತುಗಳ ಆಧಾರದಲ್ಲಿ ಉತ್ಪನ್ನವಾಗುತ್ತದೆ. ಗುಣಮಟ್ಟದಲ್ಲಿ ಅತ್ಯಂತ ವ್ಯತ್ಯಯಗಳೊಂದಿಗೆ ಮೌಲ್ಯವರ್ಧನಗೆ ಮಾರುಕಟ್ಟೆಯು ಸಹಕಾರ ಮಾರುಕಟ್ಟೆಯ ಪ್ರಾಮುಖ್ಯತೆಯನ್ನು ಹೆಚ್ಚಳಗೊಳಿಸುತ್ತದೆ.

**ಬಳಕೆದಾರರ ಸಹಕಾರ ಸಂಘಗಳು :**

ಸಹಕಾರ ಚಳುವಳಿಯ ಮುಖ್ಯ ಉದ್ದೇಶ ಸದಸ್ಯರ ಏಳ್ಗೆ ಮತ್ತು ಅವರ ಶೋಷಣೆಯನ್ನು ತಪ್ಪಿಸುವುದು ಅಸಂಘಟಿತ ಬಳಕೆದಾರರಿಗೆ ಗುಣಮಟ್ಟದ ವಸ್ತುಗಳನ್ನು ಸರಬರಾಜು ಮತ್ತು ಸೇವೆಗಳನ್ನು ನ್ಯಾಯಯುತ ಬೆಲೆ ಮತ್ತು ನಿಖರವಾದ ಅಳತೆ ತೂಕದಲ್ಲಿ ಸರಬರಾಜು ಮಾಡಲು ಅತ್ಯುತ್ತಮ ಪೋಷಕರಾಗಿ ಬಳಕೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಮೊಟ್ಟ ಮೊದಲ ಬಳಕೆದಾರರ ಸಹಕಾರ ಸಂಘವನ್ನು ರಾಕ್‌ಡೇಲ್ ಅಗ್ರಗಾಮಿಗಳು ಇಂಗ್ಲೆಂಡ್ ನ ಮ್ಯಾಂಚೆಸ್ಟರ್ ನಲ್ಲಿ ಸ್ಥಾಪಿಸಲಾಯಿತು.

ಭಾರತದಲ್ಲಿ ಬಳಕೆದಾರರ ಸಹಕಾರ ಚಳುವಳಿಯಲ್ಲಿ ಆಗಿನ ಮದ್ರಾಸ್ ರಾಜ್ಯವು ಅಗ್ರಗಣ್ಯವಾಗಿತ್ತು. 1904ರಲ್ಲಿ ಮದ್ರಾಸ್‌ನಲ್ಲಿ (ಚೆನ್ನೈ) ದಿ ಟ್ರಿಪ್ಲಿಕೇನ್ ಅರ್ಬನ್ ಕೋಆಪರೇಟಿವ್ ಸೊಸೈಟಿ ಎಂದು ಆರಂಭಿಸಲಾಯಿತು. ಸದಸ್ಯರ ಜೀವನಾವಶ್ಯಗಳ ವಸ್ತು ಸರಬರಾಜು ಉದ್ದೇಶದಿಂದ ಆರಂಭವಾಗಿ ಭಾರತದಲ್ಲಿಯೇ ಅತಿ ದೊಡ್ಡ ಬಳಕೆದಾರರ ಸಹಕಾರ ಸಂಘವಾಗಿ ಬೆಳೆದಿರುತ್ತದೆ. ಕಡಿಮೆ ದರದಲ್ಲಿ ಗೃಹ ಬಳಕೆ ವಸ್ತುಗಳನ್ನು ಖರೀದಿಸುವುದು ಪ್ರಮುಖ ಅಂಶವಾಗಿರುತ್ತದೆ. ಸಂಘಗಳು ವಸ್ತುಗಳನ್ನು ಅಥವಾ ಉತ್ಪನ್ನಗಳನ್ನು ಸಗಟುದರದಲ್ಲಿ ಒಟ್ಟಿಗೆ ಖರೀದಿಸಿ ಸದಸ್ಯರಿಗೆ ಮಾರಾಟ ಮಾಡಲಾಗುವುದು. ಬಳಕೆದಾರರ ಸಹಕಾರ ಸಂಘಗಳು ಅಂಗಡಿಗಳ ಮೂಲಕ ಮಾರಾಟ ಮಾಡಿ ಉತ್ಪಾದಕರಿಂದ ವ್ಯಾಪಾರ ರಿಯಾಯ್ತಿಯನ್ನು ಪಡೆಯುತ್ತವೆ. ಅತ್ಯುತ್ತಮ

ಉದಾಹರಣೆಗಳೆಂದರೆ ಕೇಂದ್ರೀಯ ಭಂಡಾರಗಳು ಮತ್ತು ಅಪ್ನಾಬಜಾರ್‌ಗಳು.

ರಾಷ್ಟ್ರೀಯ ಸಹಕಾರಿ ಬಳಕೆದಾರರ ಮಹಾಮಂಡಳವನ್ನು 16ನೇ ಅಕ್ಟೋಬರ್ 1965ರಲ್ಲಿ ಆರಂಭಿಸಲಾಯಿತು. ರಾಷ್ಟ್ರದ ಬಳಕೆದಾರರ ಉತ್ತುಂಗ ಸಂಸ್ಥೆಯಾಗಿದೆ. ಭಾರತಾದ್ಯಂತ ಎಸ್.ಸಿ.ಸಿ.ಎಫ್ 29 ಶಾಖಾ ಕಛೇರಿಗಳನ್ನು ಹೊಂದಿರುತ್ತದೆ. ಬಳಕೆದಾರರ ಸಹಕಾರ ಸಂಘಗಳಿಗೆ ಬಳಕೆದಾರ ವಸ್ತುಗಳನ್ನು ನ್ಯಾಯಯುತ ಬೆಲೆಗೆ ಒದಗಿಸುವ ಕಾರ್ಯನಿರ್ವಹಿಸುತ್ತದೆಯಲ್ಲದೆ ಅವಶ್ಯ ತಾಂತ್ರಿಕಮಾರ್ಗದರ್ಶನ ಒದಗಿಸುತ್ತದೆ. ರಾಷ್ಟ್ರದ ಬಳಕೆದಾರರ ಮುಖವಾಣಿಯಾಗಿ ಕೆಲಸ ಮಡುತ್ತಿದೆ. ಅದರ ಸದಸ್ಯ ಸಂಸ್ಥೆಗಳಿಗೆ ಮತ್ತು ಬಳಕೆದಾರರ ಸಹಕಾರ ಸಂಸ್ಥೆಗಳಿಗೆ ವರ್ಗೀಕರಣ, ಪ್ಯಾಕೇಜಿಂಗ್, ಸಗಟು ಖರೀದಿ, ಸಂಗ್ರಹಣೆ, ಬೆಲೆ ನಿಗದಿಮಾಡುವುದು, ಲೆಕ್ಕ ನಿರ್ವಹಣೆ ಬಗ್ಗೆ ತಾಂತ್ರಿಕ ಮಾರ್ಗದರ್ಶನ ನೀಡುತ್ತದೆ.

**ಸಹಕಾರ ಸಂಸ್ಕರಣೆ :**

ಸಹಕಾರ ಮಾರುಕಟ್ಟೆಯೊಡನೆ ಸಂಸ್ಕರಣೆಯು ಸಾಕಷ್ಟು ಪ್ರಗತಿ ಹೊಂದಿದೆ. ಎರಡು ರೀತಿಯ ರಚನೆಗಳನ್ನು ಕಾಣಬಹುದು. ಸ್ವತಂತ್ರ್ಯ ಘಟಕಗಳಾಗಿ ಸಕ್ಕರೆ ಕಾರ್ಖಾನೆಗಳು, ನೂಲಿನ ಗಿರಣಿಗಳು ಮತ್ತೊಂದು ಮಾರುಕಟ್ಟೆ ಸಹಕಾರ ಸಂಘಗಳೇ ಸಂಸ್ಕರಣಾ ಘಟಕಗಳನ್ನು ಹೊಂದಿರುವುದು ಉದಾಹರಣೆಗೆ, ಸಣ್ಣ ಮತ್ತು ಮಾಧ್ಯಮ ಸಂಸ್ಕರಣಾ ಘಟಕಗಳು, ಅವುಗಳೆಂದರೆ ಅಕ್ಕಿ ಗಿರಣಿಗಳು ಸೆಣಬು ಗಿರಣಿಗಳು, ಹತ್ತಿ ಗಿರಣಿಗಳು.

**ಮೌಲ್ಯ ವರ್ಧನೆ :** ಉತ್ಪನ್ನದ ಮೊದಲ ಸ್ಥಿತಿಗಿಂದ ಮತ್ತೊಂದು ಸ್ಥಿತಿಗೆ ಬದಲಾವಣೆ ಮಾಡುವುದು ಇದರಿಂದ ಹೆಚ್ಚು ಬೆಲೆಯುಳ್ಳ ವಸ್ತುವಾಗಿ ಮಾರ್ಪಾಡಾಗುವುದು ಇದಕ್ಕೆ ಮೌಲ್ಯವರ್ಧನೆ ಎಂದು ಕರೆಯಲಾಗುತ್ತದೆ. ಅನೇಕ ಕಚ್ಚಾ ವಸ್ತುಗಳು ತಮ್ಮ ಅಸಲು ಸ್ಥಿತಿಯಲ್ಲೇ ಬೆಲೆ ಹೊಂದಿರುತ್ತದೆ. ಉದಾಹರಣೆ ಮಸುಕಿನ ಜೋಳ, ಕಟಾವಿನ ನಂತರ ದಾಸ್ತಾನು ಮಾಡಲಾಗುವುದು. ಪ್ರಾಣಿಗಳ ಅದನ್ನು ಮೇಯಿಸುವುದರಿಂದ ಅದು ಹೆಚ್ಚು ಬೆಲೆಯುಳ್ಳ ಪ್ರೋಟೀನ್ (ಸಾರಜನಕ) ಮಾಂಸವಾಗಿ ಪರಿವರ್ತನೆ ಹೊಂದುತ್ತದೆ.

ಪ್ರಾಥಮಿಕ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ ತಯಾರಿಸುವ ಉತ್ಪನ್ನಗಳಿಗೆ ಮೌಲ್ಯವರ್ಧನಗೆ ಎನ್ನಲಾಗುವುದು. ಅದರ ಕಚ್ಚಾ ವಸ್ತು ರೂಪವನ್ನು ಸಂಸ್ಕರಿಸಿ ಹೊಸ ಉತ್ಪನ್ನಮಾಡಿ ಪ್ಯಾಕೇಜಿಂಗ್ ಒಣಗಿಸುವುದು ತಣ್ಣಗಾಗಿಸುವುದು. ಅಥವಾ ಅದರಿಂದ ಹೊರತೆಗೆಯುವ ಕ್ರಿಯೆಯನ್ನು ಮಾಡಲಾಗುವುದು. ಈ ಬದಲಾವಣೆಯಿಂದಾಗಿ ಹತ್ತಿರವಾಗಿ ಉತ್ಪಾದಕರಿಗೆ ಹೆಚ್ಚಿನ ಬೆಲೆ ದೊರೆಯುವಂತಾಗುತ್ತದೆ.

ಈ ತಂತ್ರಗಾರಿಕೆಯಲ್ಲಿ ಅತಿ ಹೆಚ್ಚು ಪ್ರದೇಶದಲ್ಲಿ ಕೃಷಿ ಮಾಡಬೇಕೆಂದೇನಿಲ್ಲ ನೇಮಿತ ಪ್ರದೇಶದಲ್ಲಿಯೇ ಹೆಚ್ಚು ಪ್ರಾಣಿಗಳ ಸಾಕಾಣೆ ಮಾಡಬಹುದಾಗಿದೆ. ಚಿಕ್ಕ ಪ್ರದೇಶದಲ್ಲಿಯೇ ಅದರ ಉಪಯುಕ್ತತೆಯನ್ನು ಹೆಚ್ಚಿಸಿ ಉತ್ಪನ್ನ ಪಡೆಯಬಹುದಾಗಿದೆ. ಉದಾಹರಣೆಗೆ ಸ್ಟ್ರಾಬೆರ್ರಿ ಉತ್ಪಾದನೆ ಮಾಡುವುದು ಮತ್ತು ಸಂಸ್ಕರಿಸಿ ಜೆಲ್ಲಿ, ಜಾಮ್ ತಯಾರಿಸುವುದು.

ಮೌಲ್ಯವರ್ಧಿತ ಕೃಷಿ ಅಭಿವೃದ್ಧಿಯ ಪ್ರಮುಖ ತಂತ್ರಗಾರಿಕೆಯಾಗಿದೆ. ಸಣ್ಣ ಪ್ರಮಾಣದ, ಸಾವಯಾವ ಆಹಾರ ಸಂಸ್ಕರಣೆ, ಅಸಂಪ್ರದಾಯಿತ ಬೆಳೆ ಉತ್ಪನ್ನ, ಕೃಷಿ ಪ್ರವಾಸ ಮತ್ತು ಜೈವಿಕ ಇಂಧನ ಅಭಿವೃದ್ಧಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ನೂತನ ಉದ್ಯೋಗ ಸೃಷ್ಟಿಗೆ ಕಾರಣವಾಗಿರುತ್ತದೆ.

ದೊಡ್ಡ ವ್ಯವಹಾರಗಳಿಂದ ಆವೃತವಾಗಿರುವ ಜಗತ್ತಿನಲ್ಲಿ ಎಲ್ಲಿ ಕೆಲವೇ ಜನಗಳಲ್ಲಿ ಆರ್ಥಿಕ ನಿಯಂತ್ರಣ ಕೇಂದ್ರಿಕೃತವಾಗಿರುತ್ತದೆ. ಹಣವನ್ನು ಮತ್ತಷ್ಟು ಹಣಗಳಿಸಲು ಉಪಯೋಗಿಸಲಾಗುತ್ತಿದೆ. ಪರಿಸರದ ಸ್ವಚ್ಚತೆ ಇಲ್ಲದೆ ಜನಗಳ ಗೌರವಕ್ಕೆ ಧಕ್ಕೆಯಾಗುತ್ತಿದೆ. ಇದರಿಂದ ಬದಲಾಗುವ ಪರಿಸ್ಥಿತಿಗೆ ಭವಿಷ್ಯದ ಸುಸ್ಥಿರತೆಗೆ ಸಹಕಾರವೇ ಕಾರಣವಾಗಬಲ್ಲದು. ಭಾರತದಲ್ಲಿ ಕೋವೀಡ್ ನಂತರದ ಸ್ಥಿತಿಯಲ್ಲಿ ಸಹಕಾರ ಮಾರುಕಟ್ಟೆ, ಸಂಸ್ಕರಣೆ ಮೌಲ್ಯವರ್ಧಿಕರಣ ಅತಿಪ್ರಮುಖ್ಯತೆಯನ್ನು ಪಡೆಯುತ್ತದೆ. ಭಾರತ ಸರ್ಕಾರವು ಆತ್ಮ ನಿರ್ಭರ ಪ್ಯಾಕೇಜ್ ಘೋಷಣೆಯ ಅವಕಾಶವನ್ನು ಸಹಕಾರ ಸಂಸ್ಥೆಗಳು ಸುಪಯೋಗ ಪಡಿಸಿಕೊಳ್ಳಬೇಕಾಗಿದೆ. ಲೋಕಸಭೆಯು ಅಂಗೀಕರಿಸಿರುವ ಕೃಷಿ ಮಾರಾಟ ಸಂಬಂಧಿ ಕಾಯ್ದೆಗಳಿಂದ ರೈತರು ತಮ್ಮ ಉತ್ಪನ್ನವನ್ನು ಯಾವುದೇ ಅಡೆತಡೆಯಿಲ್ಲವೇ ಮಾರಾಟ ಮಾಡಬಹುದಾದರಿಂದ ಇದರ ಅವಕಾಶವನ್ನು ಸಹಕಾರ ಸಂಘಗಳು ರೈತರೊಡನೆ ತಮ್ಮ ಬಾಂಧವ್ಯ ವೃದ್ಧಿಗೊಳಿಸಿ ಅವಕಾಶವನ್ನು ಬಳಸಿಕೊಳ್ಳಬೇಕಾಗಿದೆ.

ಸಹಕಾರ ಸಪ್ತಾಹದ ಅಂಗವಾಗಿ ಸಹಕಾರ ಸಂಸ್ಥೆಗಳು ಈ ಕೆಳಕಂಡ ಚಟುವಟಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

1. ಕೊರೋನ ಸಾಂಕ್ರಮಿಕವು ಒಡ್ಡಿರುವ ಸವಾಲುಗಳನ್ನು ಎದರಿಸಲು ಸಮ್ಮೇಳನಗಳು ಕಾರ್ಯಗಾರಗಳನ್ನು ಸಹಕಾರ ಮಾರುಕಟ್ಟೆ, ಸಂಸ್ಕರಣೆ, ಬಳಕೆದಾರರ, ಮತ್ತು ಮೌಲ್ಯವರ್ಧೀಕರಣ, ವಿಷಯದಲ್ಲಿ ಏರ್ಪಡಿಸುವುದು.

2. ಸಹಕಾರ ಮಾರುಕಟ್ಟೆ, ಸಂಸ್ಕರಣೆ, ಬಳಕೆದಾರರ ಮತ್ತು ಮೌಲ್ಯವರ್ಧಿಕರಣ ವಿಷಯದಲ್ಲಿ ಯಶೋಗಾಥೆಗಳನ್ನು ಸಂಗ್ರಹಿಸುವುದು. ಎಲ್ಲ ಪ್ರದೇಶಗಳಿಗೂ ಈ ಮಾಹಿತಿಗಳನ್ನು ಪ್ರಸಾರಮಾಡುವುದು

3. ಮಾರುಕಟ್ಟೆ, ಸಂಸ್ಕರಣೆ ಮತ್ತು ಮೌಲ್ಯವರ್ಧೀಕರಣ ವೃತ್ತಿಪರರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

# 16ನೇ ನವೆಂಬರ್ 2020
# ಆನ್‌ಲೈನ್ ಸಂಹವನ ಮುಖಾಂತರ ತರಬೇತಿ ಶಿಕ್ಷಣವನ್ನು ಪುನರ್ ರೂಪಿಸುವುದು.

– ಡಾ॥ ವಿ.ಕೆ. ಧುಬೆ, ನಿರ್ದೇಶಕರು, ಎಸ್.ಸಿ.ಸಿ.ಇ.          ಕನ್ನಡ ಅನುವಾದ : ಶ್ರೀ ಶಶಿಧರ್ ಎಲೆ

ಒಂದು ಸಂಸ್ಥೆಯ ಯಾವ ವ್ಯಕ್ತಿಯು ಆ ಸಂಸ್ಥೆಯು ತನಗೆ ನಿಗದಿಪಡಿಸಿದ ಗುರಿ ತಲುಪಲು ಕಷ್ಟ ಪಟ್ಟು ಕೆಲಸ ಮಾಡುತ್ತಾನೋ ಆವ್ಯಕ್ತಿಯು ತನ್ನ ಜ್ಞಾನವನ್ನು ನೈಪುಣ್ಯತೆಯನ್ನು ಮತ್ತು ಆಸಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾನೆ. ತನ್ಮೂಲಕ ಅವನ ಸ್ವರ್ಧಾತ್ಮಕ ಮಟ್ಟ ಉನ್ನತೀಕರಣ ಗೊಳ್ಳುತ್ತದೆ. ತರಬೇತಿ ಮತ್ತು ಶಿಕ್ಷಣ ಮಾನವನ ಜ್ಞಾನ ವೃದ್ಧಿ, ನೈಪುಣ್ಯತೆಯ ಹೆಚ್ಚಳ ಅಲ್ಲದೆ ಅವನ ನಡತೆಯಲ್ಲಿಯೂ ಅವಶ್ಯ ಬದಲಾವಣೆಯನ್ನು ತರುತ್ತದೆ. ಇವುಗಳು ಸಾಮಾಥ್ಯಭಿವೃದ್ಧಿಗೆ ಅತಿ ಅವಶ್ಯ ಮತ್ತು ವ್ಯಕ್ತಿಗಳ ಚಿಂತನಾಕ್ರಮ ಮತ್ತು ನಡತೆಯಲ್ಲಿ ಬದಲಾವಣೆ ತರುವುದು ಮತ್ತು ಅಂತಿಮವಾಗಿ ಅವರ ಕಾರ್ಯಕ್ಷಮತೆಯನ್ನು ವೃದ್ಧಿಸುತ್ತದೆ. ಏನೇ ಆದರೂ ತರಬೇತಿ ಮತ್ತು ಶಿಕ್ಷಣವು ಈ ಕೆಳಕಂಡ ಉದ್ದೇಶಗಳನ್ನು ಹೊಂದಿರುತ್ತದೆ.

ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮದ ಉದ್ದೇಶವು ಕೆಲಸಗಾರ ಮತ್ತು ಕೆಲಸದ ನಡುವೆ ಉತ್ತಮ ಬಾಂಧವ್ಯತರುವುದು.

1. ಸಿಬ್ಬಂದಿ / ಕೆಲಸಗಾರರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು.

2. ಕಾರ್ಯನಿರತ ಸಿಬ್ಬಂದಿಯು ನೂತನ ಜವಾಬ್ದಾರಿಗಳನ್ನು ಹೊರುವಂತೆ ಮಾಡುವುದು ಮತ್ತು ಇತ್ತೀಚಿಗಿನ ತಾಂತ್ರಿಕ ಬದಲಾವಣೆಗೆ ಹೊಂದಿಕೊಳ್ಳುವಂತೆ ಮಾಡುವುದು.

3. ಪ್ರತಿ ವ್ಯಕ್ತಿಯ ಉತ್ಪಾದನ ಶಕ್ತಿ ವೃದ್ಧಿಸುವುದು ಮತ್ತು ಅಪಘಾತ/ ತಪ್ಪುಗಳು ಆಗುವ ಸಾಧ್ಯತೆಗಳನ್ನು ಕಡಿಮೆಗೊಳಿಸುವುದು ಇದರಿಂದ ಸಂಸ್ಥೆಯ ಕಾರ್ಯಕ್ಷಮತೆ ಉತ್ತಮಗೊಳ್ಳುತ್ತದೆ.

ಶಿಕ್ಷಣ ಮತ್ತು ತರಬೇತಿಯ ಉದ್ದೇಶವು ಒಬ್ಬ ನೌಕರನ ಹಾಲಿ ಕಾರ್ಯಕ್ಷಮತೆ ಮಟ್ಟ ಮತ್ತು ಅವಶ್ಯ ಕಾರ್ಯಕ್ಷಮತೆ ಮಟ್ಟ ಮತ್ತು ಅವಶ್ಯ ಕಾರ್ಯಕ್ಷಮತೆ ಮಟ್ಟದಲ್ಲಿನ ಅಂತರವನ್ನು ಕಡಿಮೆಗೊಳಿಸುವುದಾಗಿದೆ. ಇದು ನಿರಂತರವಾದ ಮತ್ತು ಎಂದಿಗೂ ಕೊನೆಯಾಗದ ವಿಧಿ, ಕಾಯಕ ಸಂಸ್ಕೃತಿಯನ್ನು ಉತ್ತಮಗೊಳಿಸಿಕೊಳ್ಳುವಲ್ಲಿ ಅಂತಿಮ ಎಂಬುದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಸ್ವರ್ಧಾತ್ಮಕ ಆರ್ಥಿಕತೆಯಲ್ಲಿ ಸಂಸ್ಥೆಗಳು ತಮ್ಮ ಇರುವಿಕೆಗಾಗಿ ಅತ್ಯಧಿಕ ಹೂಡಿಕೆಗಳನ್ನು ಮಾಡುತ್ತಿವೆ. ಪರಿಣಾಮಕಾರಿ ತರಬೇತಿಯ ನೌಕರರ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಅವರ ಪ್ರೇರಣಾ ಮಟ್ಟವನ್ನು ಉದ್ದೀಪನ ಗೊಳಿಸುತ್ತದೆ. ತಂಡವಾಗಿ ಕೆಲಸ ಮಾಡುವುದನ್ನು ರೂಪಿಸಿ ಸಂಸ್ಥೆಯ ಸ್ವರ್ಧಾತ್ಮಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

ಇತ್ತೀಚಿಗಿನ ದಿನಗಳಲ್ಲಿ ಕೋವೀಡ್–19 ವಿಶ್ವದ ಆರ್ಥಿಕತೆಯನ್ನು ಬುಡಮೇಲು ಮಾಡಿದೆ. ಭಾರತವನ್ನು ಒಳಗೊಂಡ ಅನೇಕ ರಾಷ್ಟ್ರಗಳು ರಕ್ಷಣಾತ್ಮಕ ಕ್ರಮವಾಗಿ ಲಾಕ್‌ಡೌನ್ ಮುಂದುವರೆದು ಸಾಮಾಜಿಕ ಅಂತರ ಮತ್ತು ಅನೇಕ ಎಚ್ಚರಿಗೆ ಕ್ರಮಗಳನ್ನು ತೆಗೆದುಕೊಂಡವು.

ಸಾಂಪಾದಾಯಿಕವಾಗಿ ನಡೆಯುತ್ತಿದ್ದ ತರಬೇತಿ ಕಾರ್ಯಕ್ರಮಗಳಲ್ಲಿ ಭೌತಿಕ ಹಾಜರಾತಿಯ ಅವಶ್ಯಕತೆ ಇದ್ದು ಈ ಕಾರ್ಯಕ್ರಮ ನಡೆಸಲಾಗಿದೆ. ತರಬೇತಿ ಶಿಕ್ಷಣ ಸಂಸ್ಥೆಗಳ ಕಾರ್ಯಾಚರಣೆಗೆ ಅತೀವ ಬಿಕ್ಕಟ್ಟು ಉಂಟಾಗಿದೆ. ನಿಗದಿಪಡಿಸಿದ ಸಮಯಕ್ಕೆನುಗುಣವಾಗಿ ಕಾರ್ಯಕ್ರಮ ನಡೆಸುವುದು. ಪರೀಕ್ಷೆ ನಡೆಸುವುದು ಮೌಲ್ಯಮಾಪನ ಮುಂತಾದ ಕೆಲಸ ಕಾರ್ಯಗಳಿಗೂ ತೀವ್ರ ಅಡಚಣೆಯಾಗಿದೆ. ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದ ಆಡಳಿತ ಸಿಬ್ಬಂದಿ ಕೂಡ ಅನೇಕ ಅಡಚಣೆಗಳನ್ನು ಎದುರಿಸುವಂತಾಯ್ತು. ಸಹಕಾರಿ ತರಬೇತಿ ಸಂಸ್ಥೆಗಳಿಗೆ ನೂತನ ಸವಾಲಾಗಿ ಪರಿಣಾಮಿಸಿದ್ದು ನೂತನ ವಿಧಾನಗಳನ್ನು ಕಂಡು ಹಿಡಿಯುವುದು ಮತ್ತು ಅಡಚಣೆಗಳನ್ನು ನಿವಾರಿಸಿ ಕೋವೀಡ್–19 ರ ಬೆದರಿಕೆಯನ್ನು ಅವಕಾಶವಾಗಿ ಪರಿವರ್ತಿಸಬೇಕಾಯಿತು.

ಈ ಕಷ್ಟಕರ ಪರಿಸ್ಥಿತಿಯನ್ನು ನಿಭಾಯಿಸಲು ಅನೇಕ ಸಹಕಾರ ತರಬೇತಿ ಮತ್ತು ಶಿಕ್ಷಣ ಸಂಸ್ಥೆಗಳು ನೂತನ ತಂತ್ರಗಾರಿಕೆ ರೂಪಿಸಿ ಡಿಜಿಟಲ್ ತಾಂತ್ರಿಕತೆ ಮೂಲಕ ಆನ್‌ಲೈನ್ ತರಬೇತಿ ಶಿಕ್ಷಣ ಕಾರ್ಯಕ್ರಮ ರೂಪಿಸಿದೆ. ಏನೇ ಆದರೂ ತಾಂತ್ರಿಕತೆಯ ದೋಷಗಳಿಂದಾಗಿ ತರಬೇತಿ ಪಡೆಯುವವರಿಗೆ ಅಡಚಣೆ ಉಂಟಾಗಿ ತರಬೇತಿ ತರಗತಿ ನಡೆಸಲು ಅನಾನುಕೂಲಗಳಾಗುತ್ತವೆ. ತರಬೇತಿ ಪಡೆಯುವವರು ಜಡಸ್ಥಿತಿ, ವಕನಾತತೆ, ತೊಂದರೆಗಳಲ್ಲದೆ ಕಣ್ಣಿನ ತೊಂದರೆ ಮೆದುಳಿನ ಕ್ರಿಯೆ ನಿಲ್ಲುವ ಮತ್ತಿನ್ನಿತರೆ ತೊಂದರೆಗಳನ್ನು ಅನುಭವಿಸುತ್ತಿರುತ್ತಾರೆ. ಆದುದರಿಂದ ಪರಿಣಾಮಕಾರಿ ತರಬೇತಿ ಕಾರ್ಯಕ್ರಮ ನಡೆಸುವುದು ಅತ್ಯಂತ ಸವಾಲಿನದೇ ಆಗಿದೆ. ಆನ್‌ಲೈನ್ ಸಾಮಥ್ಯಭಿವೃದ್ಧಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಯಾತನ ಮಯವಾಗಿದೆ. ಆದರೆ ಇದನ್ನು ಕೆಲವು ವೈಜ್ಞಾನಿಕ ಮತ್ತು ನಡೆತೆಯ ತಂತ್ರಗಾರಿಕೆಯಿಂದ ಅವಕಾಶವಾಗಿ ಪರಿವರ್ತಿಸಬಹುದಾಗಿದೆ.

**ಆನ್‌ಲೈನ್ ತರಬೇತಿ ಕಾರ್ಯಕ್ರಮಗಳು ಒಂದು ಅವಕಾಶ :**

- ಊಟ, ವಸತಿ ಆಡಳಿತ ವೆಚ್ಚ ಇತರೆ, ಖರ್ಚುಗಳು ಕಡಿತಗೊಳ್ಳುತ್ತದೆ. ಸಂಸ್ಥೆಗಳು ಶುಲ್ಕವನ್ನು ಕಡಿತಗೊಳಿಸಬಹುದು. ಇದು ತರಬೇತಿ ಪಡೆಯುವುವವರಿಗೆ ಸಹಾಯವಾಗುತ್ತದೆ.

- ತರಗತಿಗಳಿಗೆ ಭೌತಿಕ ಹಾಜರಾತಿ ಅವಶ್ಯವಿಲ್ಲ. ಶಿಕ್ಷಣಾರ್ಥಿಗಳು ಎಲ್ಲಿಂದಲಾದರೂ. ಯಾವುದೇ ಸಮಯದಲ್ಲಿ ಹಾಜರಾಗಬಹುದು. ಆದುದ–ರಿಂದ ತರಬೇತಿ ಪಡೆಯುವವರು ಶಿಕ್ಷಣಾರ್ಥಿಗಳು/ಅಭ್ಯರ್ಥಿಗಳು ಪ್ರವಾಸದ ವೆಚ್ಚ ಮತ್ತು ಸಮಯವನ್ನು ಉಳಿಸಬಹುದು.

- ಯಾವುದೇ ತೊಂದರೆಗಳಾದರೆ, ಕೊನೆಗಳಿಗೆಯಲ್ಲಿ ಕಾರ್ಯಕ್ರಮವನ್ನು ಪುನರ್ ರೂಪಿಸಬಹುದಾಗಿದೆ.

- ಅತ್ಯುತ್ತಮ ತರಬೇತಿದಾರರು/ ಅನುಭವಸ್ಥರು ಭಾಗವಹಿಸುವ ಸಾಧ್ಯತೆ ಇದೆ. ಏಕೆಂದರೆ ತರಗತಿಗಳನ್ನು ಎಲ್ಲಿಂದಲಾದರೂ ನಡೆಸಬಹುದು. ಇದರಿಂದಾಗಿ ತರಬೇತಿ ಕಾರ್ಯಕ್ರಮದ ಗುಣಮಟ್ಟವನ್ನು ಹೆಚ್ಚಿಸಬಹುದು.

- ತರಬೇತಿ ತರಗತಿಗಳಿಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬಹುದು.

ಭೌತಿಕ ಹಾಜರಾತಿಯಲ್ಲಿ ಬಳತೆಗೆದು ಕೊಳ್ಳಬಹುದಾದ ಸಾಮರ್ಥ್ಯಕ್ಕನುಗುಣವಾಗಿ ಸಂಖ್ಯೆಯನ್ನು ಮಿತಗೊಳಿಸಲಾಗುವುದು.

- ತರಬೇತಿ ಕಾರ್ಯಕ್ರಮಗಳನ್ನು 2 ಅಥವಾ 3 ಗಂಟೆಗಳೊಗೆ ಮಿತಿಗೊಳಿಸಬಹುದು. ಶಿಬಿರಾರ್ಥಿಗಳು ತಮ್ಮ ಮನೆ ಕಛೇರಿಯಲ್ಲಿ ಇತರೆ ಕೆಲಸಗಳಿಗೂ ಗಮನ ಕೊಡಬಹುದು. ಸಂಸ್ಥೆಗಳು ಕಾರ್ಯಕ್ರಮ ಶುಲ್ಕವನ್ನು ಕಡಿಮೆಗೊಳಿಸುವುದರಿಂದ ತರಬೇತಿ ಪಡೆಯುವವರಿಗೆ ಅನುಕೂಲವಾಗುತ್ತದೆ.
- ಈ ದಿನಗಳಲ್ಲಿ ಜೀವನ ಶೈಲಿಯ ಒಂದು ಭಾಗವೇ ಆಗಿರುವ ಮೊಬೈಲ್ / ಲ್ಯಾಪ್‌ಟಾಪ್ / ಡೆಸ್ಕ್ ಟಾಪ್ ಗಳ ಮೂಲಕ ಸುಲಭವಾಗಿ ಸಂಪರ್ಕ ಸಾಧಿಸಬಹುದು.
- ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಹಂಚಿಕೊಳ್ಳಬಹುದಾಗಿದ್ದು ಹಣ ಮತ್ತು ಮಾನವ ಶ್ರಮವನ್ನು ಉಳಿಸುತ್ತದೆ.

**ಪರಿಣಾಮಕಾರಿ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ನಡೆಸುವುದು ಹೇಗೆ ?**

ತರಬೇತಿದಾರರ ಮತ್ತು ತರಬೇತಿ ಪಡೆಯುವವರ ನಡುವೆ ಅರ್ಥಪೂರ್ಣ ಪರಸ್ಪರ ಸಂಹವನಕ್ಕೆ ತಕ್ಕ ಅನುಕೂಲಕರ ವಾತಾವರಣ ನಿರ್ಮಾಣ ಕಲ್ಪಿಸುವುದೇ ಉತ್ತಮ ಕಲಿಕೆಯ ಪರಿಸರ ನಿರ್ಮಾಣದ ಫಲಿತಾಂಶವಾಗಿರುತ್ತದೆ. ತರಬೇತಿ ತರಗತಿಗಳಲ್ಲಿ ಅನೂಕಲಕರ ವಾತಾವರಣವು ತರಬೇತಿ ಪಡೆಯುವವರು ತಮ್ಮ ಅತ್ಯುತ್ತಮ ಪ್ರದರ್ಶನ ನೀಡುವಂತೆ ಮಾಡುತ್ತದೆ. ಆದುದರಿಂದ ಆರೋಗ್ಯಪೂರ್ಣ ತರಬೇತಿ ವಾತಾವರಣವನ್ನು ವೈಜ್ಞಾನಿಕ ಮತ್ತು ನಡುವಳಿಕೆ ಆಧಾರಿತ ತಂತ್ರಗಾರಿಕೆ ಮೂಲಕ ಪರಿಣಾಮಕಾರಿ ತರಬೇತಿ ಶಿಕ್ಷಣ ಒದಗಿಸುವುದು ಒಳ್ಳೆಯ ತರಬೇತಿಧಾರನ ಕರ್ತವ್ಯವಾಗಿರುತ್ತದೆ.

ಉಪನ್ಯಾಸ ಅಥವಾ ತರಬೇತಿ ನೀಡುವ ನೈಪುಣ್ಯವಷ್ಟೇ ಸಾಲದು. ತರಬೇತಿದಾರರು ತರಬೇತಿ ಪಡೆಯುವವರು ಕಲಿಕೆದಾರರಾಗಿರುತ್ತಾರೆ. ಎಂಬುದನ್ನು ಅರಿತಿರಬೇಕು. ಕಲಿಕೆಯ ವಿಧಿಯಲ್ಲಿ ಬದಲಾವಣೆಗಳಿಗೆ ಒಳಾಗಾಗಬಲ್ಲ ಕೆಲವು ಹೆಬ್ಬೆರಳು ನಿಮಯಗಳಲ್ಲಿ ಅವಲಂಭಿಸಿರುತ್ತವೆ. ಎಂಬುದನ್ನು ಅವರು ತಿಳಿದಿರಬೇಕು. ಪ್ರತಿಯೊಬ್ಬ ತರಬೇತಿ ಪಡೆಯುವವರು ಪರಿಣಾತ್ಮಕವಾಗಿ ತರಬೇತಿ ಪಡೆಯುವಂತಾಗಲು ತರಬೇತಿದಾರರು ತರಬೇತಿ ಪಡೆಯುವವರ ಗುಣಗಳಲ್ಲಿ ಅರಿಯಬೇಕಾದ ಮಹತ್ವವನ್ನು ಅರಿಯಬೇಕು.

ಪರಿಣಾಮಕಾರಿ ಆನ್‌ಲೈನ್ ತರಬೇತಿ ಕಾರ್ಯಕ್ರಮ ನಡೆಸಲು ತೆಗೆದುಕೊಳ್ಳಬೇಕಾದ ಪ್ರಮುಖ ಅಂಶಗಳು.

**ತರಬೇತಿ ವಿವರ ಪ್ರಸಾರ/ಕಾರ್ಯಕ್ರಮದ ಪ್ರಕಟಣೆ :**

- ಸಾಮಾಜಿಕ ಜಾಲವನ್ನು ಉಪಯೋಗಿಸುವುದು.
- ವಲಯವಾರು ವಾಟ್ಸಪ್ ಗಂಪು ರಚನೆ
- ವಿದ್ಯುನ್ಮಾನ ಅಂಚೆ (ಇ-ಮೇಲ್) (ವೆಬ್‌ಸೈಟ್) ಜಾಲತಾಣ, ಎಸ್.ಎಂ.ಎಸ್. ಮತ್ತು ಇತರೆ ಸಮೂಹ ಮಾಧ್ಯಮ.
- ಸಾಂಪ್ರದಾಯಿಕವಾದ ದೂರವಾಣಿ ಸಂಪರ್ಕ

**ತರಬೇತಿ ಕಾರ್ಯಕ್ರಮ ನಡೆಸಲು ಸಲಕರಣೆಗಳು, ತರಬೇತಿ ಪಡೆಯುವವರ ಅನಿಸಿಕೆಗಳನ್ನು ಪಡೆಯುವುದು.**

1. ಒಂದು ಸಂಸ್ಥೆಯ ಸಿಬ್ಬಂದಿಗೆ ಪ್ರಾಯೋಗಾತ್ಮಕವಾಗಿ 2-3 ತರಗತಿಗಳನ್ನು ಮಾಡಿ ತೊಂದರೆಗಳನ್ನು ಗುರುತಿಸಿ ಅದಕ್ಕೆ ಪರಿಹಾರೋಪಾಯಗಳನ್ನು ಕಂಡು ಹಿಡಿಯುವುದು.

2. ತರಬೇತಿ ಕಾರ್ಯಕ್ರಮಗಳಿಗೆ ಹಾಜರಾತಿ ಆಸಕ್ತಿ ಉಳ್ಳವರಿಗೆ ಆಹ್ವಾನಿಸಿ, ಆನ್‌ಲೈನ್ ಪ್ರವೇಶ ಪತ್ರ ಒದಗಿಸಿ ಯಾವುದೇ ತೊಂದರೆಗಳನ್ನು ಹಿಮ್ಮಾಹಿತಿ ಪಡೆಯುವುದು.

3. ತರಬೇತಿದಾರರ ತರಬೇತಿ ಕಾರ್ಯಕ್ರಮಗಳನ್ನು ನಡೆಸಿ ಅಭ್ಯರ್ಥಿಗಳಿಗೆ ಒಳ್ಳೆಯ ಸಲಹೆಗಳನ್ನು ನೀಡಲು ಉತ್ತೇಜಿಸುವುದು.

4. ಸುಲಭವಾಗಿ ಕಾರ್ಯಕ್ರಮಕ್ಕೆ ಹಾಜರಾಗಲು ಸರಳ ಸಭೆ ಗುರುತು (ಮೀಟಿಂಗ ಐಡಿ) ಪಾಸ್‌ವರ್ಡ್ ಸಹಿತ ಅಥವಾ ರಹಿತವಾಗಿ ಹಾಜರಾಗುವಂತೆ ಕಾರ್ಯಕ್ರಮ ರೂಪಿಸುವುದು.

5. ತರಬೇತಿ ಪಡೆಯುವವರು ಎದುರಿಸುವ ಏಕಾಗ್ರತೆಯನ್ನು ನಿವಾರಿಸಲು ವೈಜ್ಞಾನಿಕ ಮತ್ತು ನಡೆತೆ ಆಧಾರಿತ ಸಲಕರಣೆಗಳನ್ನು ಉಪಯೋಗಿಸುವುದು. ತರಬೇತಿ ಪಡೆಯುವವರ ಅನಿಸಿಕೆ ಅಥವಾ ಹಾಜರಾಗಲು ಇರುವ ಅವರ ಕಷ್ಟಗಳನ್ನು ಅವರಿಂದ ತಿಳಿಯುವುದು.

**ಮೆದಳು ನಿಷ್ಕ್ರತೆಯನ್ನು ತಡೆಯುವ ಬಗ್ಗೆ ಪ್ರಮುಖ ಅಂಶಗಳು :**

1. ವಿಷಯ ನಿರೂಪಣೆ 45 ನಿಮಿಷಗಳಿಗಿಂತ ಹೆಚ್ಚಿಗೆ ಇರಬಾರದು. 15 ನಿಮಿಷಗಳು ತಾತ್ಪರ್ಯ ಮತ್ತು ಪ್ರಶ್ನೋತ್ತರ (1 ಗಂಟೆ ತರಗತಿ)

2. ಪ್ರಮುಖ ಅಂಶಗಳನ್ನು ಚಿಕ್ಕದಾಗಿ ಬರೆದುಕೊಳ್ಳುವಂತೆ ಸಲಹೆ ನೀಡುವುದು. ಇದರಿಂದ ಮೆದುಳು ಸಕ್ರಿಯವಾಗಿರುತ್ತದೆ.

3. ಉಪನ್ಯಾಸದಲ್ಲಿ ಪ್ರತಿ ಸ್ಲೈಡ್ (ಫಲಕ) ಪ್ರದರ್ಶನ ಆದರಂತೆ 2 ಅಥವಾ 3 ಸೆಕೆಂಟ್‌ಗಳ ಕಾಲ ಕಣ್ಣು ಮುಚ್ಚಿ ತೆಗೆಯುವಂತೆ ಮಾಡುವುದು.

4. ಕಣ್ಣಿನ ತಾಪಮಾನ ಮತ್ತು ತೇವಾಂಶ ಕಾಪಾಡಲು ಆಗಿಂದಾಗ್ಯೆ ಕಣ್ಣಿನ ರೆಪ್ಪೆಗಳನ್ನು ಮುಚ್ಚುವುದು ಮತ್ತು ತೆಗೆಯುವಂತೆ ಸೂಚಿಸುವುದು.

5. ಪ್ರತಿ ಐದು ನಿಮಿಷಗಳಿಗೆ ಹತ್ತು ಅಡಿ ಅಂತರದ ಯಾವುದೇ ವಸ್ತುವನ್ನು ವೀಕ್ಷಿಸುವುದು.

6. ಅವರು ಅರಿತಿರುವ ಜ್ಞಾನ ತಿಳಿಯಲು ಹತ್ತು ಬಹುಆಯ್ಕೆ ಪ್ರಶ್ನೋತ್ತರಗಳನ್ನು ತರಬೇತಿ ಕಾರ್ಯಕ್ರಮದ ನಂತರ ನೀಡುವುದು.

**ಸಹಕಾರ ಸಪ್ತಾಹದ ಸಮಯದಲ್ಲಿ ಈ ಕೆಳಕಂಡ ಕಾರ್ಯಕ್ರಮ/ ಚಟುವಟಿ-ಕೆಗಳನ್ನು ಹಮ್ಮಿಕೊಳ್ಳಬಹುದು.**

1. ಕೋವೀಡ್ ನಂತರ ತರಬೇತಿ ಶಿಕ್ಷಣದ ಪಾತ್ರ ವಿಷಯದಲ್ಲಿ ಆನ್‌ಲೈನ್ ವೇಬಿನಾರ್ ತಂತ್ರಗಾರಿಕೆ ಮತ್ತು ಕ್ರಿಯಾತ್ಮಕ ಅಂಶಗಳ ಬಗ್ಗೆ ಚರ್ಚಿಸಿ ಯಶಸ್ವಿ ತರಬೇತಿ ಶಿಕ್ಷಣ ನಡೆಸುವ ಬಗ್ಗೆ ಕಾರ್ಯಕ್ರಮ ರೂಪಸುವುದು.

2. ಕೋವೀಡ್-19 ತಡೆಗಟ್ಟುವ ಕ್ರಮಗಳ ಬಗ್ಗೆ ಸಮೂಹದಲ್ಲಿ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಏರ್ಪಡಿಸುವುದು.

3. ಕೋವೀಡ್-19ರಿಂದಾಗಿ ತರಬೇತಿ ಸಂಸ್ಥೆಗಳಿಗೆ ಇರುವ ಬೆದರಿಕೆಗಳು ಅವಕಾಶಗಳ ಬಗ್ಗೆ ಚರ್ಚಿಸುವುದು/ಸಮ್ಮೇಳನ ಏರ್ಪಡಿಸುವುದು.

4. ಸಹಕಾರ ಶಿಕ್ಷಣ ಶಿಕ್ಷಕರಿಗೆ/ಅಧಿಕಾರಿಗಳಿಗೆ/ವಿಸ್ತರಣಾಧಿಕಾರಿಗಳನ್ನು ಪರಿಣಾಮಕಾರಿ ಆನ್‌ಲೈನ್ ತರಬೇತಿ ನೀಡುವ ಬಗ್ಗೆ ವಿವಿಧ ಲಭ್ಯ ನಮೂನೆಗಳ ಬಗ್ಗೆ ತರಬೇತಿ ನಡೆಸುವುದು.

5. ಆನ್‌ಲೈನ್ ತರಬೇತಿ ಮತ್ತು ಶಿಕ್ಷಣ ಕಾರ್ಯಕ್ರಮಗಳಿಂದ ದೊರೆತ ಫಲಿತಾಂಶಗಳ ಬಗ್ಗೆ ಸಹಕಾರ ತರಬೇತಿ ಸಂಸ್ಥೆ/ಸಂಸ್ಥೆಗಳಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

# 17ನೇ ನವೆಂಬರ್ 2020
# ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು

– ಶ್ರೀಮತಿ ಮೋನಿಕಾ ಖನ್ನಾ, ಉಪನಿರ್ದೇಶಕರು, ಭಾ.ರಾ.ಸ ಒಕ್ಕೂಟ. ಕನ್ನಡ ಅನುವಾದ : ಶ್ರೀ ಶಶಿಧರ್ ಎಲೆ

ಅಂತರಾಷ್ಟ್ರೀಯ ಮೈತ್ರಿ ಸಂಸ್ಥೆ (ICA) ಯುರೂಪಿಸಿರುವವಳು ಸಹಕಾರ ತತ್ವಗಳಲ್ಲಿ ಅತ್ಯಂತ/ಮೂಲಭೂತ ತತ್ವವೆಂದರೆ ಸಹಕಾರ ಸಂಸ್ಥೆಗಳ ನಡುವೆ ಸಹಕಾರ, ತತ್ವಗಳ ಸಂಖ್ಯೆಯಲ್ಲಿ ಆರನೇಯದಾದರೂ ಅದರ ಮಹತ್ವವನ್ನು ಅಲ್ಲಗಳೆಯಲಾಗುವುದಿಲ್ಲ. ವಿಶ್ವದೆಲ್ಲೆಡೆ ಎಲ್ಲಾ ಸಹಕಾರ ಸಂಸ್ಥೆಗಳು ಏಳೂ ಸಹಕಾರ ತತ್ವಗಳನ್ನು ಪಾಲಿಸುವುದರಲ್ಲಿ ಅರಿತು ರಚಿಸಲಾಗಿದೆ. ತಾತ್ವಿಕವಾಗಿ ಇದು ದಿಟವಾದರೂ ಪಾಲಿಸುವುದರಲ್ಲಿ ಭಾಧಿತವಾಗಿದೆ. ಸಹಕಾರದಲ್ಲಿ ನಂಬುಗೆಯಿರಿಸಿರುವ ಅದರಲ್ಲಿ ತಮ್ಮ ಬೇರು ಹುದುರಿಗುವ ಎಲ್ಲ ಸಹಕಾರ ಸಂಸ್ಥೆಗಳು ತಮ್ಮ ನಡುವೆ ಸಹಕರಿಸಬೇಕು. ಇದರಿಂದ ಅವುಗಳನ್ನು ಇತರೆಯವರು ಮಾದರಿಯಾಗಿ ಸ್ವೀಕರಿಸುತ್ತಾರೆ. ಈ ತತ್ವವನ್ನು ಸಹಕಾರ ಸಂಸ್ಥೆಗಳು ಪಾಲಿಸುವುದು ಅವುಗಳಿಗೆ ಒಂದು ಪರೀಕ್ಷೆ ಇದ್ದಂತೆ ಎಂದರೆ ತಪ್ಪಾಗಲಾರದು. ಅವು ಸಹಕಾರ ವ್ಯವಸ್ಥೆಯಲ್ಲಿ ನಂಬುಗೆ ಇರಿಸಿವೆಯೇ ಅಥ–'ವಾ ನಾಮಮಾತ್ರಕ್ಕೆ ಸಹಕಾರ ಎಂದಿದ್ದು ವ್ಯವಹಾರಗಳನ್ನು ನಡೆಸುತ್ತವೆಯೇ ಎಂಬುದು ಪ್ರಸ್ಥುತವಲ್ಲ. ಒಂದು ಸಹಕಾರ ಸಂಸ್ಥೆಯು ಮತ್ತೊಂದು ಸಹೋದರ ಸಹಕಾರ ಸಂಸ್ಥೆಯೊಡನೆ ಸಹಕರಿಸದಿದ್ದಲ್ಲಿ ತಾನು ತನ್ನನ್ನು ಸಹಕಾರ ಸಂಸ್ಥೆ ಎಂದು ಕರೆದುಕೊಳ್ಳಲು ಹಕ್ಕು ಇರುವುದಿಲ್ಲ.

ಈಗ ಚರ್ಚಿಸುತ್ತಿರುವ ವಿಷಯವು ಕಪೋಲಕಲ್ಪಿತವಾದುದಲ್ಲಿ ಗಾಳಿಗೋಪುರವೂ ಅಲ್ಲ. ಅದು ಒಂದು ಉದ್ದೇಶವನ್ನು ಹೊಂದಿದೆ. ಇಡೀ ವಿಶ್ವವೇ ಒಂದು ಮಾರುಕಟ್ಟೆಯಾಗಿ ಕುಬ್ಜಗೊಂಡಿದೆ. ಈ ದಿನದ ಅವಶ್ಯಕತೆ ವಿಶೇಷತೆ ಮಾರುಕಟ್ಟೆಯ ಅವಶ್ಯಕತೆಗಳನ್ನು ಯಾವುದೇ ವ್ಯವಹಾರ ಘಟಕ ಒಬ್ಬಂಟಿಯಾಗಿ ಪೂರೈಸುವ ಸಾಮಾರ್ಥ್ಯ ಹೊಂದಿರುವುದಿಲ್ಲ. ಅಧಿಕವಾಗಿ ಒಂದು ಮತ್ತೊಂದನ್ನು ಅವಲಂಭಿಸಿದೆ. ಅತಿದೊಡ್ಡ ವ್ಯಾಪಾರಿ ಸಂಸ್ಥೆಗಳಿರಬಹುದು ಅಥವಾ ದೊಡ್ಡ ಪ್ರಮಾಣದ ತಯಾರಕರು ಉದಾ: ನಾಲ್ಕು ಚಕ್ರವಾಹನ ತಯಾರಕರು, ವಿಮಾನ ತಯಾರಕರು ಅಥವಾ ಸಣ್ಣ ಸಕ್ಕರೆ ಕಾರ್ಖಾನೆ, ಗೋದಿ ಹಿಟ್ಟಿನ ಗಿರಣಿ ಅಥವಾ ಪೆಟ್ಟಿಗೆ ಅಂಗಡಿಯಾಗಿರಬಹುದು ತಮಗೆ ಅವಶ್ಯ ಎಲ್ಲ ಸಾಮಾಗ್ರಿಗಳನ್ನು ಅವರೇ ತಯಾರಿಸಲಾರರು. ವಾಹನ ತಯಾರುಮಾಡುವುವರು ಸಣ್ಣ ಉಪಭಾಗಗಳನ್ನು ತಯಾರಿಸುವ ಅನೇಕ ಸಣ್ಣ ತಯಾರಿಕೆದಾರರನ್ನು ಅವಲಂಭಿಸಿರುತ್ತಾರೆ. ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಲು ರೈತರನ್ನು ಅವಲಂಭಿಸಿರುತ್ತಾರೆ. ಅತಿ ಸಣ್ಣ ಪೆಟ್ಟಿಗೆ ಅಂಗಡಿಯವರಾಗಲಿ/ ವ್ಯಾಪಾರಸ್ಥರಾಗಲಿ ಮಾರುಕಟ್ಟೆ ಮಾಡಲು ಇತರೆ ಸರಬರಾಜು ದಾರರನ್ನು ಅವಲಂಬಿಸಬೇಕಾಗಿರುತ್ತದೆ. ಈ ರೀತಿಯಲ್ಲಿ ಬಳಕೆದಾರರ / ಮಾರುಕಟ್ಟೆ ಬೇಡಿಕೆ ಈಡೇರಿಸಲು ಹಲವಡೆಯಿಂದ ಪೂರೈಕೆಮಾಡಬೇಕಾಗುತ್ತದೆ. ಒಬ್ಬರನ್ನು ಮತ್ತೊಬ್ಬರು ಅವಲಂಭಿಸುವುದು ಅನಿವಾರ್ಯ ಎಂದು ಅನುಮಾನವಿಲ್ಲದೇ ಹೇಳಬಹುದು.

ಸಹಕಾರ ಸಂಸ್ಥೆಗಳ ದುರ್ಬಲರ ಕೈಯಲ್ಲಿನ ಸಲಕರಣೆ ಎಂದು ಪರಿಗಣಿಸಲಾಗಿದೆ. ಬಹುತೇಕ ಸಹಕಾರ ಸಂಘಗಳಲ್ಲಿ ಬಂಡವಾಳದ ಬಗ್ಗೆ ನಾವು ಕೊಚ್ಚಿಕೊಳ್ಳುವಂತಿಲ್ಲ. ಅವುಗಳು ಒಬ್ಬೋರನ್ನೊಬ್ಬರು ಸಹಕರಿಸದಿದ್ದಲ್ಲಿ ಅವುಗಳ ಅಸ್ತಿತ್ವವೇ ಅನುಮಾನಾಸ್ಪದ ಇರುವ ವಾಸ್ತವವನ್ನು ನಾವು ಒಪ್ಪಿಕೊಳ್ಳಲೇ ಬೇಕು.

ಸಹಕಾರ ಸಂಘಗಳ ನಡುವೆ ಸಹಕಾರವು ಲಂಬವಾಗಿ (vertical) ಮತ್ತು ಅಡ್ಡವಾಗಿಯೂ (Horizontal) ಇರತಕ್ಕದ್ದು. ಮೊದಲಿಗೆ ಲಂಬವಾದ ಸಂಯೋಜನೆ (ಕೊಂಡಿ)ಯನ್ನು ಪರಿಶೀಲಿಸೋಣ. ಭಾರತದಲ್ಲಿ ನಾವು ತ್ರಿಭುಜಾಕೃತಿ ರಚನೆಯನ್ನು ಹೊಂದಿರುತ್ತೇವೆ. ಗ್ರಾಮ ಅಥವಾ ಪ್ರಾಥಮಿಕ ಸಂಘಗಳು ಕೆಳಮಟ್ಟದಲ್ಲಿದು ಪ್ರಾಥಮಿಕ ಸಂಘಗಳ ಸದಸ್ಯತ್ವವನ್ನು ಹೊಂದಿದೆ. ಉದಾಹರಣೆಗೆ ರಾಜ್ಯ ಮಟ್ಟದ ಉತ್ತುಂಗದಲ್ಲಿ ರಾಜ್ಯ ಸಹಕಾರ ಬ್ಯಾಂಕ್, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮತ್ತು ತಳಮಟ್ಟದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪ್ಯಾಕ್ಸ್) ಇವು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರನ್ನು ಹೊಂದಿರಬಹುದು. ಇದೇ ತೆರೆನಾದ ರಚನೆಯು ಮಾರುಕಟ್ಟೆ, ಬಳಕೆದಾರರ ಹೈನುಗಾರಿಕೆ ಸಹಕಾರ ಸಂಘಗಳು, ಇತರೆ ಇವೆ. ಕೆಲವು ವಲಯಗಳಲ್ಲಿ ರಾಷ್ಟ್ರ ಮಟ್ಟದಲ್ಲಿ ಉತ್ತುಂಗ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಉದಾ: ನ್ಯಾಫೆಡ್ ಎಸ್.ಸಿ.ಸಿ.ಎಫ್

ವಿವಿಧ ಹಂತದಲ್ಲಿನ ಸಂಸ್ಥೆಗಳಲ್ಲಿ ಪರಪೂರ್ಣ ಸಹಕಾರ ಸಮನ್ವಯ ವಿರುತ್ತದೆ ಎಂದು ನಿರೀಕ್ಷಿಸಿದೆ. ಇದರ ಪ್ರಮುಖ ಗುರಿಯೇ ಅತ್ಯಂತ ಕೆಳಮಟ್ಟದ ಸಂಸ್ಥೆಯನ್ನು ಬಲಗೊಳೀಸುವುದಾಗಿದೆ ಏಕೆಂದರೆ ಇದರ ಫಲಾನುಭವಿಗಳು ವ್ಯಕ್ತಿಗತ ಸದಸ್ಯರ ಸಾಮಾಜಿಕ ಆರ್ಥಿಕ ಏಳ್ಗೆ ರೂಡಿಗತವಾಗಿ ಎಷ್ಟರ ಮೆಟ್ಟಿಗೆ ಇದು ಆಚರಣೆಯಲ್ಲಿದೆ. ಎಂಬುದೇ ಈಗಿನ ಪ್ರಶ್ನೆ. ಇದು ಕೇವಲ ಚರ್ಚಿಸಬೇಕಾದ ವಿಷಯದಲ್ಲಿ ಅದರೆ ಕಳವಳಪಡಬೇಕಾದ ವಿಷಯ ಪ್ರಾಥಮಿಕ ಸಂಸ್ಥೆಗಳ ಅಸಕ್ತಿಯನ್ನು ಉತ್ತೇಜಿಸುವ ಬದಲಿಗೆ ಅದರೊಡನೆ

ಸ್ಪರ್ಧೆಗೆ ಇಳಿದಿವೆ. ಈ ರೀತಿಯ ಅನೇಕ ಉದಾಹರಣೆಗಳಿವೆ. ರಾಜ್ಯ ಸಹಕಾರ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಪ್ಯಾಸ್‌ಗೆ ಸಹಾಯ ಹಸ್ತ ನೀಡದೆ ಇರುವುದು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳೇ ದುಡಿಯಲಾರದ ಆಸ್ತಿಯ ಹೊರೆ ಹೊತ್ತು ನಷ್ಟಕ್ಕೆ ಈಡಾಗಿರುತ್ತದೆ. ಸರ್ಕಾರವು ಯಾವುದೇ ಪ್ಯಾಕೇಜ್ ನೀಡಿದಲ್ಲಿ ಅದು ಪ್ರಾಥಮಿಕ ಹಂತವನ್ನು ತಲುಪುವ ಬದಲಿಗೆ ತನ್ನ ಆರ್ಥಿಕ ಸುಸ್ಥಿತಿ ಆರೋಗ್ಯಕಾಪಾಡಿ ಕೊಳ್ಳಲು ಯತ್ನಿಸುತ್ತದೆ. ಇದೇ ರೀತಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮತ್ತು ಮಾರುಕಟ್ಟೆ ಸಹಕಾರ ಸಂಘಗಳಲ್ಲಿ ಸಮನ್ವಯತೆ ಇರುವುದಿಲ್ಲ.

ರಾಜ್ಯ ಮಾರಾಟ ಮಹಾಮಂಡಳಗಳು ಪ್ರಾಥಮಿಕ ಮಾರುಕಟ್ಟೆ ಸಹಕಾರ ಸಂಘಗಳನ್ನು ಸ್ಪರ್ಧಾತ್ಮಕ ಶತ್ರುಗಳೆಂದು ಪರಿಗಣಿಸಿವೆ. ಉನ್ನತ ಸಂಸ್ಥೆಗಳು ಇವುಗಳನ್ನು ವ್ಯವಹಾರಿಕ ಪಾಲುಗಾರರೆಂದು ಪರಿಗಣಿಸಿ ಪೋಷಿಸುವುದಿಲ್ಲ ಇದರಿಂದಾಗಿ ಕೃಷಿ ಕ್ಷೇತ್ರದಲ್ಲಿ ವ್ಯವಹಾರವನ್ನು ಹಿಗ್ಗಿಸಿ ಏಕಸ್ವಾಮ್ಯತ್ವ ಸಾಧಿಸುವ ಬದಲಿಗೆ ತಳ್ಳು ಏಳಿಯುವ ಕ್ರಿಯೆಯಿಂದಾಗಿ ಖಾಸಗಿಯವರಿಗೆ ವ್ಯವಹರಿಸಲು ಅವಕಾಶ ಕಲ್ಪಿಸಿದಂತಾಗಿದೆ. ಪತ್ತು(ಸಾಲ)ಮತ್ತು ಸಂಗ್ರಹಣೆಯಲ್ಲಿ ಸಹಕಾರ ವಲಯ ಏಕಸ್ವಾಮ್ಯ ಸಾಧಿಸಲುಗದೇ ತನ್ನ ಬಿಗಿತನವನ್ನು ಕಳೆದುಕೊಳ್ಳುತ್ತದೆ. ಅತ್ಯಂತ ದುಃಖದ ಸಂಗತಿಯೆಂದರೆ ಖಾಸಗಿ ವಲಯದೊಡನೆ ಪೈಪೋಟಿ ನಡೆಸಲು ಈ ಸಂಸ್ಥೆಗಳು ವೃತ್ತಿಪರವಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಸದಸ್ಯರ ಮತ್ತು ಸಾಮಾನ್ಯ ಜನತೆಯ ಸಾಮಾಜಿಕ ಆರ್ಥಿಕ ಅಭ್ಯುದಯಕ್ಕಾಗಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಎಂಬುದನ್ನು ಸಾಬೀತು ಪಡಿಸುವುದೇ ಆದಲ್ಲಿ ಕೆಳಹಂತದ ಸಂಸ್ಥೆಗಳಿಗೆ ಉನ್ನತ ಸಂಸ್ಥೆಗಳು ಪೋಷಕರಾಗಿ ಕಾರ್ಯನಿರ್ವಹಿಸುವಂತೆ ವ್ಯವಸ್ಥೆಯಲ್ಲಿ ತುರ್ತಾಗಿ ಸುಧಾರಣೆಗಳನ್ನು ತರಬೇಕಾಗಿದೆ. ತ್ರಿಭುಜಾಕೃತಿಯಲ್ಲಿ ಅಡ್ಡಲಾಗಿ (ಸಮತಲ ಹಂತ) ವೀಕ್ಷಿಸಿದಾಗ್ಯಾ ಉತ್ತೇಜನಕಾರಿಯಾಗಿ ಕಂಡು ಬರುತ್ತಿಲ್ಲ. ಬಹುತೇಕ ಸಹಕಾರ ಸಂಘಗಳು ತಮ್ಮ ಕಾರ್ಯವ್ಯಾಪ್ತಿಗೆ ಸೀಮಿತವಾಗಿ ಕರ್ತವ್ಯ ನಿರ್ವಹಿಸುತ್ತವೆ. ವಿನಃ ಸಾಮಾನ್ಯ ವಿಷಯಗಳ ಚರ್ಚೆಗೆ ಅವುಸೇರುವುದಿಲ್ಲ ಎಂದೇ ಹೇಳಬೇಕು. ಮೇಲಿನ ಹಂತದ ಸಂಸ್ಥೆ ಸಭೆಯನ್ನು ಕರೆದಾಗ ಮಾತ್ರ ಅವು ಸೇರುತ್ತವೆ. ವ್ಯಾಪಾರಿ ಸಮುದಾಯದಲ್ಲಿ ಸಮಾನಂತರವಾಗಿರುವ ವ್ಯಾಪಾರಿ ಸಂಸ್ಥೆಗಳಲ್ಲಿ ಸಹಕರಿಸುವುದನ್ನು ನಾವು ಕಾಣುತ್ತೇವೆ.

ನೀವೇನಾದರೂ ಒಂದು ಅಂಗಡಿಗೆ ಹೋಗಿ ಯಾವುದಾದರೂ ವಸ್ತು/ ಸೇವೆ ಕೇಳಿದರೆ ಅವರಲ್ಲಿಲ್ಲದಿದರೆ ಅವರು ಇಲ್ಲ ಎಂದು ಹೇಳುವುದಿಲ್ಲ ಅಕ್ಕ ಪಕ್ಕದ ಅಂಗಡಿಯಿಂದ ಅದನ್ನು ಪಡೆದು ಒದಗಿಸುತ್ತಾರೆ ಈ ರೀತಿಯ ರೂಢಿಗಳನ್ನು ಪ್ರವಾಸ ಮತ್ತು ಸಾಗಾಣೆ ವಲಯದಲ್ಲಿ ಕಾಣುತ್ತೇವೆ. ಇದರ ಫಲಿತಾಂಶವೆಂದರೆ ಖಾಸಗಿ ವಲಯವು ಏಳ್ಗೆಯಾಗುತ್ತದೆ. ಸಹಕಾರ ವಲಯವು ಕ್ಷೀಣಿಸುತ್ತಿದೆ. ಅಥವಾ ನಿಂತನೀರಾಗಿದೆ ಅಥವ ಬೆಳವಣಿಗೆ ಆಮೆಯ ನಡಿಗೆ ಯಾಗಿದೆ.

ಅಮೂಲ್ ನ ಯಶಸ್ಸು ನಾವು ಹೇಳಿಕೊಳ್ಳಬಲ್ಲಂತಹ ಉದಾಹರಣೆ ಗುಜರಾತ್ ವಿವಿಧ ಹಾಲು ಒಕ್ಕೂಟಗಳು ಒಂದರ ಕೊರತೆಯನ್ನು/ ಹೆಚ್ಚಿನ ಉತ್ಪನ್ನವನ್ನು ಸರಿದೂಗಿಸಲು ತಮ್ಮದೇ ಕಾರ್ಯವಿಧಾನವನ್ನು ರೂಪಿಸಿಕೊಂಡಿವೆ. ಇದರಿಂದ ಸಾಮಾನ್ಯ ಜನತೆಗೆ ಸದಾ ಕಾಲ ಹಾಲ, ಹಾಲಿನ ಉತ್ಪನ್ನ ದೊರೆಯುವಂತಾಗಿದೆ. ಸಾಮಾನ್ಯ ಜನತೆಗೆ ಸದಾಕಾಲ ಹಾಲು, ಹಾಲಿನ ಉತ್ಪನ್ನ ದೊರೆಯುವಂತಾಗಿದೆ. ಸಾಮಾನ್ಯ ಜನತೆ ಸೇವೆಯ ಉದ್ದೇಶವನ್ನು ಈಡೇರಿಸಬೇಕೆಂದಾದರೆ ಇತರೆ ವಲಯಗಳು ಇದನ್ನು ಅನುಸರಿಸಬೇಕಾಗಿದೆ.

ನಮ್ಮ ಆರ್ಥಿಕತೆಯ ಅಭಿವೃದ್ಧಿಗೆ ಸಹಕಾರ ಸಂಸ್ಥೆಗಳ ನಡುವೆ ಸಹಕಾರ ಅತ್ಯಂತ ಅವಶ್ಯವಾದ ಮಹತ್ವವಾದ ಅಂಶವಾಗಿದೆ. ಸಮಾಜದ ಎಲ್ಲ ವರ್ಗದ ಜನರ ಜನತೆಯ ಕಲ್ಯಾಣದ ಮೇಲೆ ಇದು ಪರಿಣಾಮ ಬೀರುತ್ತದೆ. ಕೋವೀಡ್‌ನಿಂದ ಆಗಿರುವ ಅನಾಹುತವು ಈ ತತ್ವದ ಪ್ರತಿಪಾದನೆಯನ್ನು ಮತ್ತಷ್ಟು ಪುಷ್ಠೀಕರಿಸುತ್ತದೆ. ಸದೃಢ ಸಹಕಾರ ಸಂಸ್ಥೆಗಳು ದುರ್ಬಲ ಸಹಕಾರ ಸಂಸ್ಥೆಗಳಿಗ ಪ್ರೋತ್ಸಾಹ ನೀಡದಿದ್ದಲ್ಲಿ ಅವುಗಳೂ ತಮ್ಮ ವ್ಯವಹಾರವನ್ನು ಕಳೆಕುಕೊಳ್ಳುತ್ತವೆ.

ಅಂತಿಮವಾಗಿ ಕಳೆದುಕೊಳ್ಳುವುವರೆಂದರೆ ಬಡರೈತರು ಕಾರ್ಮಿಕರು ಕುಶಲ ಕರ್ಮಿಗಳು ಅಥವಾ ಸಣ್ಣ ವ್ಯಾಪಾರಸ್ಥರು, ಇವರ ಒಂದೇ ಆಶಾಕಿರಣವೆಂದರೆ ಸಹಕಾರ ಸಂಘ. ಸಹಕಾರ ವಲಯವು ಎಚ್ಚೆತ್ತುಕೊಳ್ಳಲು ಇದನ್ನು ಕಹಳೆಯ ಧ್ವನಿ ಎಂದು ಪರಿಗಣಿಸಿ ರಾಷ್ಟ್ರದ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಕಾರ್ಯನಿರ್ವಹಿಸಬೇಕು. ಇಲ್ಲವೆಂದರೆ ಸಹಕಾರ ವಲಯವು ತನ್ನ ಪ್ರಸ್ತುತೆಯನ್ನು ಕಳೆದುಕೊಳ್ಳುತ್ತದೆ.

**ಸಹಕಾರ ಸಪ್ತಾಹದ ಸಮಯದಲ್ಲಿ ಸಹಕಾರ ಸಂಸ್ಥೆಗಳು ಈ ಕೆಳಕಂಡ ಚಟುವಟಿಕೆ/ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು.**

- ಕಾರ್ಯಗಾರ/ವಿಚಾರಗೋಷ್ಠಿ/ಸಮ್ಮೇಳನಗಳನ್ನು ಈ ವಿಷಯದಲ್ಲಿ ಏರ್ಪಡಿಸಿ ಕೊರೋನಾ ಸಾಂಕ್ರಮಿಕತೆಯ ಪರಿಣಾಮವನ್ನು ಇದರೊಡನೆ ಸೇ-ರಿಸುವುದು.
- ಸಹಕಾರ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರು ಅಧಿಕಾರಿಗಳಿಗೆ ಪ್ರಬಂಧ/ಚರ್ಚಾ ಸ್ಪರ್ಧೆ ಏರ್ಪಡಿಸಬಹುದಾಗಿದೆ.
- ಈ ವಿಷಯದ ಮಹತ್ವ ಪ್ರಾಮುಖ್ಯತೆ ಬಗ್ಗೆ ಡಿಜಿಟಲ್ ಪ್ರಚಾರವನ್ನು ಕೈಗೊಳ್ಳುವುದು.

# 18ನೇ ನವೆಂಬರ್ 2020
# ವ್ಯವಹಾರ/ಉದ್ಯೋಗ ಕಳೆದುಕೊಂಡವರು ಬಾಧಿತರುಗಳನ್ನು ಪುನರುದ್ಯೋಗಸ್ಥರಾಗಲು ಕೌಶಾಲ್ಯಾಭಿವೃದ್ಧಿ.

– ರಜನಿ ಶರ್ಮ, ಸಲಹೆಗಾರರು, ಎನ್.ಸಿ.ಸಿ.ಇ. ಕನ್ನಡ ಅನುವಾದ : ಶ್ರೀ ಶಶಿಧರ್ ಎಲೆ

ಕೋವೀಡ್ ಸಾಂಕ್ರಮಿಕವು ಅನೇಕ ಸವಾಲುಗಳನ್ನು ಒಡ್ಡಿರುತ್ತದೆ. ಪರಿಸರದಲ್ಲಿ ಅನೇಕ ಅನಿಶ್ಚೇತತೆಯನ್ನು ಸೃಷ್ಠಿಸಿರುತ್ತದೆ. ಇದಕ್ಕಾಗಿ ಸಹಕಾರ, ಸಂಸ್ಥೆಗಳ ಸಾಮಾಜಿಕ ಸೃಷ್ಠಿಸಿರುತ್ತದೆ. ಇದಕ್ಕಾಗಿ ಸಹಕಾರ ಸಂಸ್ಥೆಗಳ ಸಾಮಾಜಿಕ ಆರ್ಥಿಕ ಸುಸ್ಥಿರತೆಯ ಅವಶ್ಯಕತೆ ಇದೆ ಸಹಕಾರ ಸಂಘಗಳಲ್ಲಿ ಸದಸ್ಯರು ರೈತರು, ಮಹಿಳೆಯರು ಮತ್ತು ಯುವಜನ ಉದ್ಯೋಗರಸ್ಥರಾಗಿ ಕೌಶಾಲ್ಯಾಭಿವೃದ್ಧಿ ಹೊಂದಲು ಮತ್ತು ಅದಾಯ ಉತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಒಂದು ಸೃಜನಶೀಲ ವಿಧಾನದ ಅವಶ್ಯಕತೆ ಇದೆ. ಈ ದಿಸೆಯಲ್ಲಿ ಸಹಕಾರ ಸಂಸ್ಥೆಗಳು ಪರಿಣಾಮಕಾರಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ವೃತಿಪರತೆಯನ್ನು ವೃದ್ಧಿಗೊಳಿಸಲು ಸಾಮಾಜಿಕ ರಕ್ಷಣೆ ಮತ್ತು ಉದ್ಯೋಗ ಸೃಷ್ಠಿಸಲು ನೂತನ ವಿಧಾನಗಳನ್ನು ಪೋಷಿಸಲು ಲಾಭದಾಯಕ ಯೋಜನೆಗಳನ್ನು ಹಮ್ಮಿಕೊಳ್ಳುವುದು.

ಭಾರತದಲ್ಲಿ ಉದ್ಯೋಗ ಸೃಷ್ಠಿ ಮತ್ತು ಸಾಮಾಜಿಕ ರಕ್ಷಣೆ ವಿಷಯಗಳು ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಪ್ರಮುಖ ಚರ್ಚಾಸ್ಪರ್ಧೆ, ವಿಷಯಗಳಾಗಿವೆ. ಕೋವೀಡ್ ಸಾಂಕ್ರಾಮಿಕ ಅವಧಿಯಲ್ಲಿ ಸಹಕಾರ ಸಂಘಗಳ ತಮ್ಮ ಸದಸ್ಯರ ರೈತರ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಬೇಕು. ಸ್ವ–ಉದ್ಯೋಗ, ಸ್ವಯಂ ಜವಾಬ್ದಾರಿ ಮತ್ತು ಸ್ವ ಸಹಾಯ ಪಡೆಯುವಂತರಾಗಲು ಗ್ರಾಮಾಂತರ ಬಡಜನರ ಬಡತನದ ಅಂಚಿನಲ್ಲಿರುವವರನ್ನು ಸಂಘಟಿತರನ್ನಾಗಿ ಮಾಡುವ ಅವಶ್ಯಕತೆಯಿದೆ. ಇದರಿಂದ ಕೋವೀಡ್ ನಂತರದಲ್ಲಿ ಸ್ವಾವಲಂಬಿಗಳಾಗಿ ಸಮರ್ಥರಾಗಿರುತ್ತಾರೆ.

ಕೋವೀಡ್ ನಂತರದ ಸ್ಥಿತಿಯಲ್ಲಿ ಸಹಕಾರ ಮೌಲ್ಯವರ್ಧನೆ ಸಂಪನ್ಮೂಲ ಕೇಂದ್ರಗಳನ್ನು ಮತ್ತು ಪ್ರಾದೇಶಿಕ ತರಬೇತಿ ಕೇಂದ್ರಗಳನ್ನು ಕೌಶಲ್ಯಾಭಿವೃದ್ಧಿಗಾಗಿ ಸ್ಥಾಪಿಸಿ ಸ್ಥಾಪಿತ ಕೃಷಿ ಉತ್ಪನ್ನ ತಾಂತ್ರಿಕತೆಗಳಲ್ಲಿ ಸದಸ್ಯರು ಮತ್ತು ರೈತರಿಗಾಗಿ ತರಬೇತಿ ನೀಡುವುದು ಇದರಿಂದ ಗ್ರಾಮೀಣ ಭಾರತಾದ್ಯಂತ ಸಹಕಾರ ಚಳುವಳಿಗೆ ಇಂಬು ಕೊಟ್ಟಂತಾಗುತ್ತದೆ. ಇದರಿಂದ ಇಳುವರಿ ಹೆಚ್ಚಾಗುವುದಲ್ಲದೆ ಕೃಷಿ ಆದಾಯ ಹೆಚ್ಚುತ್ತದೆ. ಇದರ ಪರಿಣಾಮವಾಗಿ ಶೇ. ನೂರರಷ್ಟು ಕೃಷಿ ಆದಾಯ ಹೆಚ್ಚಳಗೊಂಡು 1.00.000/– ಕೋಟಿ ವಾರ್ಷಿಕ ಆದಾಯ ಹೆಚ್ಚಳಗೊಂಡು ಜಿ.ಡಿ.ಪಿ ಗೆ ಅಧಿಕ ಕೊಡುಗೆ ನೀಡುತ್ತದೆ. ಸಹಕಾರ ಸಂಘಗಳ ಮೂಲಕ ಕೃಷಿ ಆಧಾರಿತ ಯೋಜನೆಗಳನ್ನು ಕೈಗೊಂಡರ ಅಧಿಕ ಅದಾಯ ಗಳಿಸಬಹುದಾಗಿದೆ. ಅಲ್ಲದೇ ಶಕ್ತಿ ಉತ್ಪಾದಕ ತೋಟಗಾರಿಕೆ ಎಣ್ಣೆ, ಬೀಜಗಳ, ತೋಟಗಾರಿಕೆಯ, ಔಷದೋಪಯೋಗಿ ಸಸ್ಯಗಳ, ಎಥೆನಾಲ್ ಉತ್ಪಾದಿಸಬಲ್ಲ ಕಾರ್ಯಕ್ರಮಗಳಿಂದ ನೂತನ ಉದ್ಯೋಗ ಸೃಷ್ಠಿಸಬಹುದಾಗಿದೆ.

ಭಾರತದ ಶೇ.90% ಗ್ರಾಮಗಳಲ್ಲಿ ಎಂಟು ಲಕ್ಷಕ್ಕೂ ಅಧಿಕ ಸಹಕಾರ ಸಂಘಗಳಿದ್ದು ತನ್ನ ಸದಸ್ಯರ ಆದಾಯ ಹೆಚ್ಚಳಗೊಳಿಸುವುದರಲ್ಲಿ ತನ್ನ ಸದಸ್ಯರ ಆದಾಯ ಹೆಚ್ಚಳಗೊಳಿಸುವುದರಲ್ಲಿ ಸಾಕಷ್ಟು ಇದರ ಕೊಡುಗೆ ಇರುತ್ತದೆ. ಕೃಷಿ ಮತ್ತು ಸಂಬಂಧಿತ ವಲಯದ ತೊಡಕುಗಳನ್ನು ನಿವಾರಿಸಲು ಮತ್ತು ಗ್ರಾಮೀಣ ಕ್ಷೇಮಾಭಿವೃದ್ಧಿ ಸಾಕಷ್ಟು ಕೊಡುಗೆ ನೀಡಿದೆ.

ಹೈನುಗಾರಿಕೆ ಪತ್ತು (ಸಾಲ) ಪಾಕ್ಸ್, ಮೀನುಗಾರಿಕೆ, ಸಹಕಾರ ಸಂಘಗಳ, ವಿಮೆ ಸಹಕಾರಿ ಸಂಘಗಳು, ಬಹುರಾಜ್ಯ ಸಹಕಾರ ಸಂಘಗಳು ಮತ್ತು ಬಳಕೆದಾರರ ಸಹಕಾರ ಸಂಘಗಳು ಸರಿಯಾದ ಮತ್ತು ವಿನೂತನವಾಗಿ ಸಮಸ್ಯೆಗೆ ಪರಿಹಾರ ಕಂಡುಹಿಡಿಯ ಎದುರಿಸುವಲ್ಲಿ, ಕಾರ್ಮಿಕರ ಕೊರತೆ, ಆಹಾರ ಮತ್ತು ಪೌಷಿಕ ಕೊರತೆ ನೀಗಿಸುವಲ್ಲಿ ಇವು ರಕ್ಷಣಾ ಕವಚವಾಗಿ ಕಾರ್ಯನಿರ್ವಹಿಸಿವೆ. ಸದಸ್ಯರು ಸ್ವಯಂ ಉದ್ಯೋಗರಸ್ಥರಾಗಿದ್ದು, ಉತ್ಪಾದಕರಾಗಿದ್ದು ಈ ಸಂಸ್ಥೆಗಳ ಸದಸ್ಯರಾಗಿದ್ದು ಸಾಂಕ್ರಮಿಕದ ವಿಪತ್ತನ್ನು ಸಮಾನ ಭಾಗವಿಸುವಿಕೆಯಿಂದ ಎದುರಿಸುತ್ತಿದ್ದು ಸ್ವಾಯುತ್ತತೆ, ಅಂತರ ಸಹಯೋಗದಿಂದ ನಿರೀಕ್ಷಿಸಿದ ಆರ್ಥಿಕ ಪ್ರಗತಿ ಮತ್ತು ಅದಕ್ಕೆ ತಕ್ಕ ಪರಿಸರ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ.

ಲಾಕ್‌ಡೌನ್‌ನ ಪರಿಣಾಮವಾಗಿ ಲಕ್ಷಾಂತರ ವಲಸೆ ಕಾರ್ಮಿಕರು ತಮ್ಮ ಕೆಲಸ ಕಳೆದುಕೊಂಡು ಹಿಂತಿರುಗುತ್ತಿದ್ದಾರೆ. ಕೋವೀಡ್ ನಂತರದ ಪರಿಸ್ಥಿತಿಗನುಗುಣವಾಗಿ ಸರ್ಕಾರವು ಅನೇಕ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜಿಸಿ ಅವರ ನೈಪುಣ್ಯತೆ ಹೆಚ್ಚಿಸಲು ಆಯೋಜಿಸಿದೆ. ಗ್ರಾಮೀಣ ಅಭಿವೃದ್ಧಿ ಸಚಿವಾಲಯ ಉದ್ಯೋಗ ಸೃಷ್ಠಿಗಾಗಿ ಮತ್ತು ಕೌಶಲ್ಯಾವೃದ್ಧಿಗಾಗಿ ಜಿಲ್ಲಾವಾರು ಲಭ್ಯ ಕೆಲಸಗಾರರು ಮತ್ತು ಅವರು ಹಾಲಿ ಹೊಂದಿರುವ ಕುಶಲತೆ(ನೈಪುಣ್ಯ) ಗುರುತಿಸುವುದನ್ನು ಒಳಗೊಂಡಿರುತ್ತದೆ. ಭಾರತ ಕೌಶಾಲ್ಯಾಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಕುಶಲತೆ ಹೊಂದಿರದ

ಕೆಲಸಗಾರರು (ಸ್ಟೈಫಂಡ್) ಶಿಷ್ಯ ವೇತನ ಸಹಿತ ಅಲ್ಪಾವಧಿ ತರಗತಿಗಳಲ್ಲಿ ಭಾಗವಹಿಸಬಹುದಾಗಿದೆ. ಅನೇಕ ಮ.ನರೇಗಾ ಕೆಲಸಗಾರರು ಕಟ್ಟಡ ನಿರ್ಮಾಣದ ಕೆಲಸದ ತರಬೇತಿ ಪಡೆದಿರುತ್ತಾರೆ. ಸಹಕಾರ ಸಂಘಗಳು ಈ ಯೋಜನೆಗಳೊಡನೆ ಸಂಯೋಜಿಸಬೇಕಾಗಿದೆ.

ಕೌಶಲ್ಯ ಮನಃಕೌಶಲ್ಯ ಮತ್ತು ಅಪಕೌಶಲ್ಯ" ಘೋಷಣೆಯನ್ನು ನಮ್ಮ ಪ್ರಧಾನಿಯವರು ಮಾಡಿರುತ್ತಾರೆ. ಇದರ ಪ್ರಾಮುಖ್ಯತೆಯು ಕೋವೀಡ್ ನ ಪರಿಣಾಮವಾಗಿ ಜನ ನಿರುದ್ಯೋಗಿಗಳಾಗುತ್ತಿರುವ ಸಮಯದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದೆ. ವೃತ್ತಿನಿರತ ತರಬೇತಿ ಸಂಸ್ಥೆಗಳು ಪುನರ್ ರೂಪಿಸುವ ಬಗ್ಗೆ ಆಲೋಚಿಸಬೇಕಿದೆ. ಹಾಲಿ ತರಬೇತಿ ಸಂಸ್ಥೆಗಳು ಕೈಗಾ–ರಿಕೆಗಳೊಡನೆ ಸಂಬಂಧವಿರಿಸಕೊಂಡಿರುವುದಿಲ್ಲ ಪ್ರಯೋಗಿಕ ತರಬೇತಿ ಇಲ್ಲದೆ ತರಬೇತಿ ಅಪೂರ್ಣವಾದಂತಾಗುತ್ತದೆ. ಪರಿಹಾರಗಳನ್ನು ನೋಡುವುದೇ ಆದರೆ ಕೆಲಸ ಮಾಡುತ್ತಾರೆ. ಕಲಿಯುವ ಅಪ್ರೆಂಟೀಸ್‌ಗಳನ್ನು 1–3 ವರ್ಷ ಗಳವರೆಗೆ ಕೈಗಾರಿಕೆಗಳೇ ಕೆಲಸ ನೀಡಬೇಕು. ಅದರಲ್ಲಿಯೂ ಶಿಕ್ಷಣಾ ವೇತನದ ಶೇ.25 ನ್ನು ಸರ್ಕಾರವೇ ನೀಡುತ್ತಿದೆ. ತರಬೇತಿ ಸಂಸ್ಥೆಗಳು ಶಿಬಿರಾರ್ಥಿಗಳಿಗೆ ಅರ್ಧ ದಿನ ತರಗತಿ ಮತ್ತು ಅರ್ಧ ದಿನ ಕಾರ್ಖಾನೆಯಲ್ಲಿ ಕೆಲಸ ಮಾಡುವಂತಾಗಬೇಕು ಕುಶಲತೆ ಮತ್ತು ಕೆಲಸಕ್ಕೆ ಸರಿಹೊಂದುವಂತೆ ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡಬೇಕು.

ವಲಸೆ ಕಾರ್ಮಿಕರು ತಮ್ಮ ವಾಸಸ್ಥಳದಲ್ಲಿಯೇ ಕಾರ್ಯ ನಿರ್ವಹಿಸುವಂತಾಗಲು ಲಭ್ಯ ಉದ್ಯೋಗಳ ಬಗ್ಗೆ ಕೌಶಾಲ್ಯಾಭಿವೃದ್ಧಿ ಇಲಾಖೆಯು ನಕಾಶೆ ತಯಾರಿಸಲಾರಂಭಿಸಿದೆ. ರಾಷ್ಟ್ರೀಯ ಕಾರ್ಯಕ್ರಮವಾಗಿ ಸಂಯೋಜಿತ ಕೌಶಲ್ಯವ್ಯವಸ್ಥೆಯ ಮಾಹಿತಿ ವ್ಯವಸ್ಥೆಯನ್ನು ಸರ್ಕಾರ ಕೈಗೊಂಡಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಸ್.ಓ) ಭಾರತದಲ್ಲಿ 2030ರವೇಳೆಗೆ 29 ದಶಲಕ್ಷ್ಮ ಕೌಶಲ್ಯಾ ಕೊರತೆ ಉಂಟಾಗುತ್ತದೆ ಎಂದು ಅಂದಾಜಿಸಿದೆ. ಈ ಕೋವೀಡ್ ಉಂಟಾಗುತ್ತದೆ ಎಂದು ಅಂದಾಜಿಸಿದೆ. ಈ ಕೋವಿಡ್ ಪರಿಸ್ಥಿತಿಯಲ್ಲಿ ಉದ್ಯೋಗ ಸೃಷ್ಟಿಯಾಗದಿದ್ದಲ್ಲಿ ಈ ಸಂಖ್ಯೆ ಮತ್ತು ಅಧಿಕಗೊಳ್ಳುತ್ತದೆ. ಭಾರತ ಸರ್ಕಾರದೊಡನೆ ಸಹಕಾರ ಸಂಸ್ಥೆಗಳು ಕೈ ಜೋಡಿಸಿ ಕೌಶಲ್ಯ ಕೊರತೆಯನ್ನು ನೀಗಿಸಬಹುದಾಗಿದೆ. ಭಾರತದ ಅನೇಕ ಸಹಕಾರ ತರಬೇತಿ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ಸಹಯೋಗಗೊಂಡಿದೆ. ಈಗಿನ ಉದ್ಯೋಗ ನಷ್ಟದ ಬಿಕ್ಕಟ್ಟನ್ನು ಅತ್ಯಂತ ಉತ್ಕೃಷ್ಟ ರೀತಿಯಲ್ಲಿ ಬಗೆಹರಿಸುವುದು ಒಂದು ಸವಾಲಾಗಿ ಪರಿಣಮಿಸಿದೆ.

ಹಿಂತಿರುಗಿ ಬಂದಿರುವ ವಲಸೆ ಕಾರ್ಮಿಕರಿಗೆ ನಬಾರ್ಡ್ ಕೌಶಾಲ್ಯಾಭಿವೃದ್ಧಿ ಕಾರ್ಯಕ್ರಮ ಆರಂಭಿಸಿ ಅವರಿಗೆ ತಕ್ಷಣ ಉದ್ಯೋಗ ದೊರುಕುವಂತಾಗಲು ಉದ್ದೇಶಿಸಿದೆ. ಇದು ಅತ್ಯಂತ ಬೃಹತ್ ಕಾರ್ಯಕ್ರಮವಾಗಿದ್ದು ನಿಧಿಯನ್ನು ನಬಾರ್ಡ್ ಒದಗಿಸುತ್ತದೆ. ಜಿಲ್ಲೆಯ ಅಗ್ರಗಣ್ಯ ಬ್ಯಾಂಕ್‌ಗಳ ಮೂಲಕ ಜಿಲ್ಲೆಯ ಎಲ್ಲ ಕೌಶಾಲ್ಯಾಭಿವೃದ್ಧಿ ಮೂಲಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಪ್ರತಿ ಜಿಲ್ಲೆಯಲ್ಲಿಯೂ ಒಂದೊಂದು ಬ್ಯಾಂಕ್‌ನ್ನು ಅಗ್ರಗಣ್ಯ ಬ್ಯಾಂಕ್ ಆಗಿ ಗುರುತಿಸಲಾಗಿದೆ. ಇದು ಸಹಕಾರ ಬ್ಯಾಂಕ್ ಗಳಿಗೂ ಕಾರ್ಯಕ್ರಮ ಅನುಷ್ಠಾನಗೊಳಿಸಲು ಸದಾವಕಾಶವನ್ನು ಒದಗಿಸಿದೆ.

ಕೃಷಿ, ಆಹಾರ ಸಂಸ್ಕರಣೆ, ಕೃಷಿ ಮೂಲಭೂತ ಸೌಕರ್ಯ ವಲಯಕ್ಕೆ ನಿರಂತರ ಹಣ ಒದಗುವಂತೆ ಸರ್ಕಾರ ಖಾತ್ರಿಗೊಳಿಸಿಕೊಂಡಿದೆ. ಇದರಿಂದ ಹಿಂತಿರುಗಿ ಬಂದಿರುವ ವಲಸೆ ಕಾರ್ಮಿಕರಿಗೆ ಮರು ಉದ್ಯೋಗ ಸೃಷ್ಟಿಸಲು ಸಾಧ್ಯವಾಗಿದೆ. ರೂ. 1 ಲಕ್ಷ ಕೋಟಿ ಕೃಷಿ ಮೂಲಭೂತ ಸೌಕರ್ಯ ನಿಧಿಯೋಜನೆ ರೂ. 15000 ಕೋಟಿ ಪಶುಸಂಗೋಪನೆ ಮೂಲಭೂತ ಸೌಕರ್ಯ ನಿಧಿ ಯೋಜನೆ ರೂ. 60.000 ಕೋಟಿ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಮತ್ತು ಆತ್ಮನಿರ್ಭರ ಪ್ಯಾಕೇಜ್ ನಡಿಯಲ್ಲಿ ಅನೇಕ ಗ್ರಾಮೀಣ ವಲಯ ಕಾರ್ಯಕ್ರಮಗಳು ವಲಸೆ ಕಾರ್ಮಿಕರನ್ನು ಮರು ಉದ್ಯೋಗದಲ್ಲಿ ತೊಡಗಿಸಲು ಸಾಧ್ಯವಾಗಿಸಿವೆ. ಮತ್ತು ಹೊಸ ಉದ್ಯೋಗ ಸೃಷ್ಟಿಗೆ ಅವಕಾಶ ಕಲ್ಪಿಸಿವೆ. ಪಾಕ್ಸ್, ರೈತ ಉತ್ಪಾದನಾ ಸಂಸ್ಥೆ, ಗ್ರಾಮೀಣ ಬ್ಯಾಂಕ್‌ಗಳು ಸಹಕಾರ ಬ್ಯಾಂಕ್‌ಗಳಿಗೆ, ವಿಶೇಷ ದ್ರವ್ಯಾಸ್ತಿ ಅನುಕೂಲತೆಗಳನ್ನು ನಬಾರ್ಡ್ ಕಲ್ಪಿಸಿದೆ. ಇದರಿಂದ ರೈತರಿಗೆ ನಿರಂತರವಾಗಿ ಸಾಲದ ಅನುಕೂಲತೆ ದೊರೆಯುವಂತಾಗಿದೆ. ಈ ಎಲ್ಲ ಯೋಜನೆಗಳಲ್ಲಿ ಸಹಕಾರ ಸಂಸ್ಥೆಗಳು ಲಾಭ ಪಡೆಯುವುದಲ್ಲದೆ ಕೆಲಸ ಕಳೆದುಕೊಂಡವರಿಗೆ ಮರು ಉದ್ಯೋಗ ಕಲ್ಪಿಸಲು ಸಾಧ್ಯವಾಗಿದೆ.

ಸಹಕಾರ ಸಪ್ತಾಹದ ವೇಳೆ ಈ ಕೆಳಕಂಡ ಚಟುವಟಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ.

- ಕೋವಿಡ್ ಸಾಂಕ್ರಮಿಕ ಪರಿಣಾಮವಾಗಿ ಸಹಕಾರ ಸಂಸ್ಥೆಗಳು ಮರು ಉದ್ಯೋಗ ಸೃಷ್ಟಿ ಸಂಬಂಧ ವಿಚಾರ ಸಂಕಿರಣ/ ಕಾರ್ಯಾಗಾರ/ಸಮ್ಮೇಳನ ನಡೆಸಬಹುದು.
- ಸರ್ಕಾರದ ಮರು ಉದ್ಯೋಗ ಯೋಜನೆಗಳನ್ನು ಸಹಕಾರ ಸಂಸ್ಥೆಗಳು ಪಾಲ್ಗೊಳ್ಳುವಂತಾಗಲು ಅವಶ್ಯ ಬಲಿಷ್ಠ ಪ್ರಭಾವ ಬೀರುವ/ವಕಾಲತು ವಹಿಸುವ ಪ್ರಚಾರ ಮಾಡುವ ಕಾರ್ಯಕ್ರಮಗಳನ್ನು ಮಾಡುವುದು.
- ಕೋವಿಡ್ ಸಾಂಕ್ರಾಮಿಕದಿಂದಾಗಿ ಉದ್ಯೋಗ ನಷ್ಟ ಆದವರಿಗೆ ಮರು ಉದ್ಯೋಗ ಸೃಷ್ಟಿ ಮಾಡಿರುವ ಬಗ್ಗೆ ಯಶೋಗಾಥೆಗಳನ್ನು ರಚಿಸಿ ಪ್ರಚಾರ ಮಾಡುವುದು.

# 19ನೇ ನವೆಂಬರ್ 2020
# ಯುವಜನ, ಮಹಿಳಾ ಮತ್ತು ಅಬಲವರ್ಗದವರಿಗಾಗಿ ಸಹಕಾರ ಸಂಸ್ಥೆಗಳು

– ಶ್ರೀಮತಿ ಸಂಧ್ಯಾಕಪೂರ್, ನಿರ್ದೇಶಕರು, ಎನ್.ಸಿ.ಸಿ.ಇ    ಕನ್ನಡ ಅನುವಾದ : ಶ್ರೀ ಶಶಿಧರ್ ಎಲೆ

ಪರಿಣಾಮ ಬೀರಬಹುದಾದ ಯಾವುದೇ ಚಳುವಳಿಯಲ್ಲಿ ಯುನಜನತೆ ಮತ್ತು ಮಹಿಳೆಯರ ಸಕ್ರಿಯ ಪಾತ್ರವಿದ್ದಾಗ ಮಾತ್ರ ಅದು ಪ್ರಾಮುಖ್ಯತೆಯನ್ನು ಗಳಿಸುತ್ತದೆ. ರಾಷ್ಟ್ರದ ಸಾಮಾಜಿಕ ಆರ್ಥಿಕ ಬೆಳವಣಿಗೆ ಬಹುಮುಖ್ಯ ಪಾತ್ರವಹಿಸಿರುವ ಸಹಕಾರ ಚಳುವಳಿಗೂ ಇದು ಅನ್ವಯವಾಗುತ್ತದ. ಅದರಲ್ಲಿಯೂ ಕೋವೀಡ್‌ನಂತರ ದೃಶ್ಯದಲ್ಲಿ ವಿಶ್ವವೇ ಮರುಸೃಷ್ಠಿಯಾಗಬೇಕಾದವರು ಬೇಕೆಂದಿರುವಾಗ ಸಹಕಾರ ಚಳುವಳಿಯ ಪಂಜು ಹಿಡಿಯು ಯುನಜನತೆ ಮತ್ತು ಮಹಿಳಿಯರೇ ಆಗಬೇಕಿದೆ.

ಈಗ ಉದ್ಭವಿಸುವ ಪ್ರಶ್ನೆಯೆಂದರೆ ಚಳುವಳಿಗೆ ಯುವ ಜನತೆಯನ್ನು ಹೇಗೆ ಆಕರ್ಷಿಸುವುದು? ಇದಕ್ಕೆ ಉತ್ತರವೆಂದರೆ ಈ ದಿನದ ಯುವಜನರ ಅವಶ್ಯಕತೆಯಂತೆ ನಾವೇ ಮಾರ್ಪಾಡು ಆಗಬೇಕಿದೆ ಅದಕ್ಕಾಗಿ ಸಹಕಾರಿ ಉತ್ಪನ್ನ ಸೇವೆಗಳಿಗೆ ಒಂದು (ಗುರುತು) ಬ್ರ್ಯಾಂಡ್ ಮೌಲ್ಯವನ್ನು ಸೃಷ್ಠಿಸಬೇಕಾಗಿದೆ. ಸರ್ಕಾರವು ಸ್ಥಳೀಯವೇ ಧ್ವನಿ ಎಂಬುದಕ್ಕೆ ಒತ್ತು ಕೊಡುತ್ತಿದ್ದು, ಸಹಕಾರ ಸಂಸ್ಥೆಗಳೂ ಸ್ಥಳೀಯ ಸಂಸ್ಥೆಗಳಾಗಿರುವುದರಿಂದ ಸ್ಥಳೀಯ ಜನರನ್ನೇ ಹೊಂದಿರುವುದರಿಂದ ಅವರು ರೈತರು, ಕುಶಲಕರ್ಮಿಗಳು, ನೇಕಾರರು ಇತರೆ ರವರಾಗಿರಬಹುದು. ಇದರ ಯಶಸ್ವಿನ ಕಥೆಗಳನ್ನು ಪ್ರಚಾರ ಪಡಿಸುವುದು ಸುಲಲಿತವಾಗುತ್ತದೆ. ಕಚ್ಚಾ ವಸ್ತುಗಳನ್ನು ಸ್ಥಳೀಯವಾಗಿ ಶೇಖರಿಸಿ ಮಾರಾಟ ಮಾಡುವುದು ಮತ್ತು ನಮ್ಮ ಉತ್ಪನ್ನಗಳನ್ನು ಪ್ರಚಾರ ಮಾಡುವುದು ಮತ್ತು ಮಾರುಕಟ್ಟೆ ಮಾಡುವುದಾಗಬೇಕು ಅದನ್ನ ವಿಶೇಷ ಮಾರುವ ಬಿಂದು (Unique selling point USP) ಎಂದು ಪರಿಗಣಿಸಬೇಕುವನೇ ಆದರೂ ಉತ್ಪನ್ನದ ವಿನ್ಯಾಸ ಮತ್ತು ತಲುಪುವ ಸೇವೆಯನ್ನು ಕಾಲಕಾಲಕ್ಕೆ ಸುಧಾರಿಸುತ್ತಿರಬೇಕಾಗಿರುತ್ತದೆ ಇದಕ್ಕಾಗಿ ನಾವು ಆ ಕ್ಷೇತ್ರದ ತಜ್ಞರನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಯುವಕ ಮತ್ತು ಮಹಿಳೆಯರಲ್ಲಿ ಪ್ರಸಿದ್ಧರನ್ನು ವಕ್ತಾರರಾಗಿ ಅಥವಾ ಬ್ರಾಂಡ್ ರಾಯಭಾರಿಯಾಗಿ ನೇಮಿಸಿಕೊಳ್ಳುವುದು ಒಳ್ಳೆಯದು.

ಎರಡನೆಯದಾಗಿ, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಒಂದು ವಿಶ್ವವಿದ್ಯಾಲಯಗಳಲ್ಲಿ ಒಂದು ಅಧ್ಯಯನಾ ವಿಷಯವಾ ಸಹಕಾರವನ್ನು ಅಧ್ಯಯನ ಮಾಡುವಂತಾಗಬೇಕು. ಇದನ್ನು ಮೆಟ್ಟಿಲಾಗಿಸಿ ಅವರು ಸಹಕಾರಿ ಔದ್ಯೋಗಿಕ ಸಂಸ್ಥೆ (enterprise) ನಿರ್ಮಿಸಲು ಸಾಧ್ಯವಾಗುತ್ತದೆ. ಕಾಲೇಜಿನಿಂದ ಹೊರಬಂದ ವಿದ್ಯಾರ್ಥಿಗಳು ಸ್ವ-ಉದ್ಯೋಗ ಹೊಂದಲು ಉದ್ಯೋಗ ಸೃಷ್ಟಿಸಲು ಅವಕಾಶ ಕಲ್ಪಿಸಿ ಕೊಟ್ಟಂತಾಗುತ್ತದೆ. ಅದರಲ್ಲಿಯೂ ಈಗ ನಿರುದ್ಯೋಗ ವೆಂಬುದು ಜಾಗತಿಕ ಮಟ್ಟದಲ್ಲಿ ವಿಷಯವಾಗಿರುವಾಗ ಈ ವಿಧಾನವು ವೇಗ ವರ್ಧಕವಾಗಿ ಕೆಲಸಮಾಡಬಲ್ಲದು. ಯುನಜನತೆ/ ಮಹಿಳೆಯರನ್ನು ಹುರಿದುಂಬಿಸಬಹುದಾಗಿದೆ. ವಿಶ್ವಾದ್ಯಂತ 100 ದಶಲಕ್ಷ ಉದ್ಯೋಗಗಳನ್ನು ಸಹಕಾರ ವಲಯ ಒದಗಿಸಿದೆ ಎಂಬ ಒಂದು ಅಂದಾಜು ಇದೆ. ಉದ್ಯೋಗ ಸೃಷ್ಟಿಗೆ ಸಹಕಾರ ಸಂಸ್ಥೆಗಳು ಪ್ರಮುಖ ಸಂಪನ್ಮೂಲವೆಂದು ಹೇಳುವುದರಲ್ಲಿ ಯಾವುದೇ ಅನುಮಾನವಿಲ್ಲ.

ಯುವಜನರು ಸಹಕಾರಿ ಔದ್ಯೋಗಿಕ ಸಂಸ್ಥೆಯ ಆಯ್ಕೆಮಾಡಿಕೊಳ್ಳುವಂತಾಗಲು ಅನೇಕ ಸವಾಲುಗಳನ್ನು ಸರಿಪಡಿಸಲು ಅವಶ್ಯಕತೆ ಇದೆ. ಅನೇಕ ರಾಷ್ಟ್ರಗಳಲ್ಲಿ ಶಾಲೆಯ ಪಠ್ಯಗಳಲ್ಲಿ ಸಹಕಾರದ ವಿಷಯದ ಪ್ರಸ್ತಾಪವಿಲ್ಲ ಅದುದರಿಂದ ಈ ತೆರವಾದ ಔದ್ಯೋಗಿದ ಸಂಸ್ಥೆಯ ಬಗ್ಗೆ ಅವರಿಗೆ ಪರಿಚಯವಿರುವುದಿಲ್ಲ. ಅದುದರಿಂದ ಯುನಜನತೆಗೆ ಇದರ ಬಗ್ಗೆ ತಿಳಿಯಲು ಅವಕಾಶವೇ ಇಲ್ಲ. ಹಾಲಿ ವಿಶ್ವವಿದ್ಯಾಲಯದ ಮುಖ್ಯವಾಹಿನಿ ಪಠ್ಯಕ್ರಮಗಳಲ್ಲಿನ ವ್ಯವಹಾರಿಕ ವಾಣಿಜ್ಯ ವಿಷಯಗಳಲ್ಲಿಯೂ ಸಹಕಾರ ಮಾದರಿಯನ್ನು ನಿರ್ಲಕ್ಷ್ಯ ಮಾಡಲಾಗಿದೆ. ಸಹಕಾರದ ವ್ಯವಹಾರವನ್ನು ಸಾಂಭವ್ಯ ಸದಸ್ಯರು ಪ್ರವರ್ತಕರುಗಳಿಗೆ ಪರಿಚಯಿಸಿದಾಗ ಅವರು ಸಾಮರ್ಥ್ಯಾಭಿವೃದ್ಧಿ, ವ್ಯಾಪಾರ ನಿರ್ವಹಣಾ ಕೌಶಲ್ಯ ಮತ್ತು ಸಹಕಾರ ಆಡಳಿತದ ಬಗ್ಗೆ ತರಬೇತಿ/ಶಿಕ್ಷಣದ ಅವಶ್ಯಕತೆಯನ್ನು ಅವರು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹಾಲಿ ಇರುವ ನೀತಿ ಮತ್ತು ಕಾಯ್ದೆ ಸಹಕಾರ ಸಂಸ್ಥೆಗಳು ಔದ್ಯೋಗಿಕ ಸಂಸ್ಥೆಗಳಾಗಿ ಬೆಳೆಯಲು ಪ್ರೋತ್ಸಾಹದಾಯಕ ಪರಿಸರ ನೀಡುತ್ತಿಲ್ಲ. ಇದನ್ನು ಸಾಮಾಜಿಕ ಸಂಸ್ಥೆಗಳು ಎಂದು ನೋಡಲಾಗುತ್ತಿದೆ. ಇದು ಯುವಜನರನ್ನು ಚಳುವಳಿಕೆ ಸೇರಲು ಹಿಂಜರಿಯುವಂತೆ ಮಾಡುತ್ತದೆ. ಅಲ್ಲದೆ ಸಹಕಾರ ಕಾಯ್ದೆಯು ಯುವ ಸಹಕಾರಿಗಳಿಗೆ ಪ್ರತಿಬಂಧಿಸುತ್ತದೆ. ಶಾಲೆಯಲ್ಲಿ ಸಹಕಾರ ಸಂಘ ಆರಂಭಿಸಲು ಕನಿಷ್ಠ ವಯಸ್ಸು ಮುಂತಾದ ವಿಷಯಗಳು ಅಡಚಣೆಯಾಗಿರುತ್ತದೆ.

ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಓ) ತನ್ನ ಶಿಫಾರಸ್ಸು 193ರಂತೆ ಯಾವಕ್ರಮಗಳನ್ನು ಸಹಕಾರ ಪಾಲುದಾರರು ಸಹಕಾರ ಪ್ರೋತ್ಸಾಹಿಸಲು ತೆಗೆದುಕೊಳ್ಳಬೇಕು ಎಂಬುದನ್ನು ತಿಳಿಸುತ್ತದೆ. ಇದು 2030ರ ಸುಸ್ಥಿರ ಅಭಿವೃದ್ಧಿ ಗುರಿಗೆ ಅನುಗುಣವಾಗಿದೆ. ಇವುಗಳನ್ನು ಮುಟ್ಟಲು ಎಲ್ಲ ರಾಷ್ಟಗಳು ಶ್ರಮಿಸುತ್ತಿವೆ. ಜನತೆಯ ಜೀವನವನ್ನು ಉತ್ತಮಗೊಳಿಸಲು ಎದು-ರಿಗೆ ಸವಾಲುಗಳಿಗೆ ಪರಿಹಾರ ಕಂಡುಕೊಂಡು, ಸೂಕ್ತ ವಾತಾವಾರಣ ನಿರ್ಮಿಸಿ

ಅಗತ್ಯ ಬೆಂಬಲ ನೀಡಿದಲ್ಲಿ ಸಹಕಾರ ಮಾದರಿಯು ಅತ್ಯುತ್ತಮ ಮಾದ–ರಿಯಾಗಿ ಕಾರ್ಯನಿರ್ವಹಿಸುತ್ತದೆ. ಇದರಿಂದ ಯುಜನತೆಗಿರುವ ಅಡಚಣೆಯನ್ನು ನಿವಾರಿಸಿ ಯುವ ಜನತೆ ಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಅವರ ಕೊಡುಗೆಯನ್ನು ನೀಡಬಹುದಾಗಿದೆ. ಸಹಕಾರ ಸಂಸ್ಥೆಗಳು ಯುಜ ಜನತೆಗೆ ಉತ್ತಮ ಭವಿಷ್ಯ ಒದಗಿಸುವಲ್ಲಿ ಅನುಮಾನವಿಲ್ಲ.

ಮಹಿಳೆಯರ ಬಗ್ಗೆ ಹೇಳುವುದಾದರೆ ಅವರ ಅಡಿಯಾಳು ತನ ಇನ್ನು ನೀಗಿಲ್ಲ. ಸಹಕಾರ ಸಂಸ್ಥೆಗಳು ಲಿಂಗ ತಾರತಮ್ಯ ನೀಗಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸದಿದ್ದಲ್ಲಿ ಮಹಿಳೆಯರು ಸಂಪನ್ಮೂಲಗಳ ನಿಯಂತ್ರಣ ಮತ್ತು ಲಭ್ಯತೆಯಲ್ಲಿ ಅವರ ಪಾತ್ರ ಪುರಷರಿಗೆ ಹೋಲಿಸಿದಲ್ಲಿ ತಾಣವಾಗಿರುತ್ತದೆ. ಮತ್ತು ಸಹಕಾರ ನಾಯಕತ್ವ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಅವರನ್ನು ಒದಗಿಸಲಾಗುವುದು.

ಜಾಗತಿಕ ಮಟ್ಟದಲ್ಲಿ ನಾಯಕತ್ವ ಮತ್ತು ನಿರ್ಧಾರತೆಗೆದುಕೊಳ್ಳುವ ವಿಧಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಇದೇ ತರನಾಗಿದೆ. ಪೆಸಿಫಿಕ್ ಪ್ರದೇಶದಲ್ಲಿ ಇದು ಮತ್ತು ಕೆಳಮಟ್ಟದಲ್ಲಿದೆ. ಆಡಳಿತ ಮಂಡಲಿಗಳಲ್ಲಿ ಅಂಚಿನ ಪ್ರಾತಿನಿಧ್ಯ ಮಾತ್ರ ಕಂಡು ಬರುತ್ತದೆ. ರಾಷ್ಟಮಟ್ಟದಲ್ಲಿ ಅತ್ಯಂತ ಕಡಿಮೆ. ನಾರ್ಡಿಕ್(ಸ್ಕಾಂಡವೇನಿಯ ಫಿನ್‌ಲ್ಯಾಂಡ್) ದೇಶಗಳಲ್ಲಿ ಸ್ವಲ್ಪ ಉತ್ತಮವಾಗಿದೆ. ಆಡಳಿತ ಮಂಡಲಿಗಳಲ್ಲಿ ಪ್ರತಿನಿಧಿಸಿದರೂ ಅವರು ಕಾರ್ಯದರ್ಶಿ ಅಥವಾ ಖಜಾಂಚಿಯಾಗಿದ್ದು ಅನುಷ್ಠಾನಗೊಳಿಸುವ ಮಟ್ಟದಲ್ಲಿರುತ್ತಾರೆ ವಿನಃ ನಿರ್ಧಾರ ತೆಗೆದುಕೊಳ್ಳುವ ಮಟ್ಟದಲ್ಲಿರುವುದಿಲ್ಲ.

ಆಡಳಿತ ಮಂಡಲಿಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಕಡಿಮೆ ಇರಲು ಜಗತ್ತಿನಾದ್ಯಂತ ಹಲವು ಕಾರಣಗಳನ್ನು ಹೇಳಲಾಗುತ್ತಿದೆ. ಅವುಗಳು ಸಹಕಾರ ಸಂಘಗಳಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಸ್ವಯಂ ಸೇವಕರಾಗಿ ಸಮೂಹದ ಕೆಲಸಗಳಾಗಿದ್ದು ಅವರ ಪಾಕೃತಿಕ ಸಹಜ ಮಕ್ಕಳ ಹೇರುವ, ಪೋಷಿಸುವ ಪಾತ್ರ ನಿರ್ವಹಣೆಯಲ್ಲಿ ಸಮಯ ವ್ಯಯವಾಗುತ್ತಿದೆ. ಸಾರ್ವಜನಿಕ ವಲಯದಲ್ಲಿ ಪುರುಷರು, ಖಾಸಗಿ ಕೆಲಸಗಳು/ಸ್ವಯಂ/ಗೃಹಕೃತ್ಯಕೆಲಸಗಳಲ್ಲಿ ಮಹಿಳೆಯರು ತೊಡಗಿಸಕೊಳ್ಳುವುದನ್ನು ಸ್ವಾಭಾವಿಕವಾಗಿ ಪರಿಗಣಿಸಲಾಗಿದೆ. ಸಹಕಾರ ಕಾಯ್ದೆ ಕಾನೂನುಗಳಲ್ಲಿ ಮಹಿಳೆಯರ ಸದಸ್ಯತ್ವಕ್ಕೆ ಅನುಕೂಲಕರವಾಗಿಲ್ಲ. ಉದಾಹರಣೆಗೆ ಆಸ್ತಿಗಳು ಮಹಿಳೆಯರ ಹೆಸರಿನಲ್ಲಿ ಇಲ್ಲದೇ ಇರುವುದು ಅದೂ ಅಲ್ಲದೆ ಸಾಂಪ್ರಾದಾಯಿಕವಾಗಿ ಮತ್ತು ಸಾಂಸ್ಕೃತಿಕ ರೂಡಿಗಳು ಮಹಿಳೆಯನ್ನು ಪುರಷರ ಅಡಯಾಳುಗಳಂತೆ ಕಾಣಲು ಕಾರಣವಾಗಿರುತ್ತದೆ. ಏನೇ ಆದರೂ ಅನೇಕ ಸಹಕಾರ ಸಂಘಗಳು ಮಹಿಳೆಯರಿಂದಲೇ ಸ್ಥಾಪಿಸಿ ಅವರೇ ನಡೆಸುತ್ತಿರುವ ಅತ್ಯುತ್ತಮವಾಗಿ ನಿರ್ವಹಿಸುತ್ತಿರುವ ಅನೇಕ ಉದಾಹರಣೆಗಳು ಲಭ್ಯವಿದೆ. ವಿಶ್ವಾದ್ಯಾಂತ ಮಹಿಳೆಯರ ನಾಯಕತ್ವದಲ್ಲಿ ಮತ್ತು ನಿರ್ವಹಣೆಯಲ್ಲಿ ಅನೇಕ ಸಹಕಾರ ಸಂಘಗಳು ಯಶಸ್ವಿಯಾಗಿದ್ದು ಸಾಮಾನ್ಯ ಜನರ ಸೇವೆಯಲ್ಲಿ ತೊಡಗಿವೆ. ಸಹಕಾರ ಸಂಘಗಳಲ್ಲಿ ಮಹಿಳೆಯರ ನಾಯಕತ್ವ ಮತ್ತು ವ್ಯವಸ್ಥಾಪನಾ ಹುದ್ದೆಗಳನ್ನು ಹೆಚ್ಚಳಗೊಳಿಸುವ ಅವಶ್ಯಕತೆಯಿದೆ. ಸಹಕಾರ ಸಂಘಗಳಲ್ಲಿ ಮಹಿಳೆಯರು ನಾಯಕತ್ವ ವಹಿಸುವುದು ಮತ್ತು ನಿರ್ಧಾರ ತೆಗೆದುಕೊಳ್ಳುವ ಸ್ಥಾನದಲ್ಲಿರಬೇಕಾಗಿರುವುದು ಕೇವಲ ನೈತಿಕ ಪ್ರಶ್ನೆಯಾಗಿರದೇ ಆರ್ಥಿಕವಾಗಿಯೂ ಕೂಡ ಅಗತ್ಯತೆಯಿದೆ.

ಭಾರತದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ.45 ಮಹಿಳೆಯರು ಶೇ.35ಕ್ಕೂ ಅಧಿಕ ಯುವಜನತೆ ಇರುವಾಗ, ಭಾರತದ ಸಹಕಾರ ಚಳುವಳಿಯು ಈ ಜನತೆಯನ್ನು ತನ್ನ ತೆಕ್ಕೆಗೆ ಆಕರ್ಷಿಸಿ ತೆಗೆದುಕೊಂಡು ತರಬೇತಿ ನೀಡಿ ಉಳಿಸಿಕೊಂಡಲ್ಲಿ ಸಹಕಾರ ಚಳುವಳಿಯ 21ನೇ ಶತಮಾನದಲ್ಲಿಯೂ ಮುಂದುವರೆದು ಯಶಸ್ವಿಯಾಗಬಲ್ಲದು.

ಸಹಕಾರ ಸಂಘಗಳಿಗೆ ಅಬಲವರ್ಗದವರು ಕೂಡ ಅಷ್ಟೇ ಪ್ರಮುಖರು, ಇತ್ತೀಚಿಗಿನ ವರ್ಷಗಳಲ್ಲಿ ಮೀನುಗಾರಿಕೆ ಮತ್ತು ಗಿರಿಜನರ ಸಹಕಾರ ಚಳುವಳಿ ಅತ್ಯಂತ ಪ್ರಬಲಯುತವಾಗಿ ಬೆಳೆದಿದೆ. ಪರಿಶಿಷ್ಟ ವರ್ಗ ಮತ್ತು ಜಾತಿ ಜನರು ಸಹಕಾರ ಚಳುವಳಿಯಲ್ಲಿ ಭಾಗವಹಿಸುತ್ತಿರುವುದು ಉತ್ತಮಗೊಂಡಿದೆ. ರಾಷ್ಟ್ರೀಯ ಮೀನುಗಾರಿಕೆ ಸಹಕಾರ ಮಹಾಮಂಡಳ ಬಡ ಮೀನುಗಾರ ಜೀವ ವಿಮೆಯಲ್ಲಿ ತೊಡಗಿಸುವಲ್ಲಿ ಅತ್ಯಂತ ಶ್ಲಾಘನೀಯ ಕಾರ್ಯವೆಸಗುತ್ತದೆ. ಅದೇ ರೀತಿಯಲ್ಲಿ ಗಿರಿಜನರ ಸ.ಸಂ ಮಹಾಮಂಡಳ, ಪ್ರಾಥಮಿಕ ಸಂಘಗಳನ್ನು ಬಲಪಡಿಸುವಲ್ಲಿ ಮತ್ತು ಅವುಗಳ ಮಹತ್ತರ ಪಾತ್ರ ನಿರ್ವಹಿಸುತ್ತಿದೆ. ಇದರಿಂದ ಅವರಿಗೆ ನ್ಯಾಯಯುತ ಬೆಲೆ ಸಿಗುವಂತಾಗಿದೆ. ಅನೇಕ ಕಾರ್ಮಿಕರ ಸಹಕಾರ ಸಂಘಗಳು ಬಡ ಮತ್ತು ದುರ್ಬಲ ವರ್ಗದವರಿಗೆ ಉದ್ಯೋಗ ದೊರಕಿಸುವಲ್ಲಿ ಮತ್ತು ಅವರ ಅವರ ಸಾಮಾಜಿಕ ಮತ್ತು ಆರ್ಥಿಕ ಏಳ್ಗೆಗೆ ಶ್ರಮಿಸುತ್ತಿವೆ. ಇದಕ್ಕೆ ಅತ್ಯಂತ ಯಶಸ್ವಿ ಸಹಕಾರ ಸಂಘವೆಂದು ಊರಳುಂಗಲ್ ಕಾರ್ಮಿಕ ಒಪ್ಪಂದ ಸಹಕಾರ ಸಂಘವನ್ನು ಉದಹರಿಸಬಹುದು.

**ಸಹಕಾರ ಸಪ್ತಾಹದ ಸಮಯದಲ್ಲಿ ಈ ಕೆಳಕಂಡ ಚಟುವಟಿಕೆ/ಕಾರ್ಯಕ್ರಮಗಳನ್ನು ಕೈಗೊಳ್ಳಬಹುದಾಗಿದೆ.**

- ಸಮ್ಮೇಳನಗಳು/ವಿಚಾರಸಂಕಿರಣಗಳು/ಕಾರ್ಯಗಾರಗಳನ್ನು ಯುವಜನತೆ, ಮಹಿಳೆ ಮತ್ತು ಅಬಲವರ್ಗದವರು ಸಹಕಾರ ವಲಯದಲ್ಲಿ ತೊಡಗಿಸಿಕೊಳ್ಳುವ ವಿಷಯದಲ್ಲಿ ಆಯೋಜಿಸುವುದು.
- ಕ್ವಿಜ್, ಚಾರ್ಚಸ್ವರ್ಧೆ, ಪ್ರಬಂಧ ಸ್ವರ್ಧೆಗಳನ್ನು ಸಹಕಾರ ಸಂಸ್ಥೆಯ ವರ್ಗದವರಿಗೆ, ಶಾಲೆ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಏರ್ಪಡಿಸುವುದು.
- ಸಾಮಾಜಿಕ ಮಾಧ್ಯಮ ವಿಡಿಯೋ ಸ್ವರ್ಧೆಗಳನ್ನು ಯುವಜನತೆಯನ್ನು ಒಳಗೊಳ್ಳುವಂತೆ ಸಾಂಪ್ರಾದಾಹಿಕ ವಿಷಯಗಳಲ್ಲಿ ಏರ್ಪಡಿಸುವುದು.

# 20ನೇ ನವೆಂಬರ್ 2020
# ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ಡಿಜಟಲೀಕರಣ ಮತ್ತು ಸಾಮಾಜಿಕ ಮಾಧ್ಯಮ

– ಸಂಜಯ್ ವರ್ಮಾ, ಉಪನಿರ್ದೇಶಕರು,ಭಾ.ರಾ.ಸ. ಒಕ್ಕೂಟ. ಕನ್ನಡ ಅನುವಾದ : ಶ್ರೀ ಶಶಿಧರ್ ಎಲೆ

ಭಾರತದ ಆರ್ಥಿಕತೆ 2024ಕ್ಕೆ 5 ಟ್ರಿಲಿಯನ್ ಆರ್ಥಿಕತೆ ಸಾಧಿಸುವಲ್ಲಿ, ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಎಂಟು ಲಕ್ಷ ಸಹಕಾರ ಸಂಸ್ಥೆಗಳು ಪ್ರಮುಖ ಸ್ಥಾನ ಪಡೆದಿವೆಯಾಗಿದ್ದು ಡಿಜಟಲೀಕರಣ ಮತ್ತು ಇತ್ತೀಚಿಗಿನ ತಾಂತ್ರಿಕತೆ ಅಳವಡಿಸಿಕೊಂಡು ಕಾರ್ಯನಿರ್ವಹಿಸುವುದು ಬಹುಮುಖ್ಯ ಅವಶ್ಯಕತೆಯಾಗಿದೆ. ಇತ್ತೀಚಿಗಿನ ತಾಂತ್ರಿಕತೆ ಆಧಾರಿತ ಸಂವಹನ ವ್ಯವಸ್ಥೆ ಸಹಕಾರ ಸಂಘಗಳಿಗೆ ಅತಿ ದೊಡ್ಡ ಸವಾಲಾಗಿ ಪರಿಣಮಿಸಿದೆ. ತನ್ನ ಆಡಳಿತ ವ್ಯವಸ್ಥೆ ಸುಧಾರಿಸಲು ಮತ್ತು ಸದಸ್ಯರೊಡನೆ ಸಂವಾದಿಸಲು ಇದು ಅಗತ್ಯವಾಗಿದೆ. ಇದರಿಂದ ಸ್ವಯಂ ಸ್ಥಿರತೆ ಮತ್ತು ಸ್ವಾಯತ್ತತೆ ಸಾಧಿಸಬಹುದಾಗಿ–ತ್ತದೆ. ಇದಲ್ಲದೆ ಸ್ವರ್ಧಾತ್ಮಕ ಮಾರುಕಟ್ಟೆ ಆರ್ಥಿಕತೆಯಲ್ಲಿ ತನ್ನ ಪಾತ್ರ ಸುಧಾ–ರಿಸಲು, ಸ್ವಾಯತ್ತತೆಗಾಗಿ ತನ್ನ ಪರ ವಕೀಲಿಕೆಗಾಗಿ ಇದರ ಅವಶ್ಯಕತೆಯಿದೆ.

### ಸಹಕಾರ ಬ್ಯಾಂಕ್‌ಗಳ ಡಿಜಟಲೀಕರಣ :

ಬದಲಾಗುತ್ತಿರುವ ಮಾರುಕಟ್ಟೆ ಆರ್ಥಿಕತೆಗುಣವಾಗಿ ಸಹಕಾರ ಬ್ಯಾಂಕುಗಳು ಅತಿವೇಗವಾಗಿ ಡಿಜಟಲೀಕರಣ ಗೊಳ್ಳುತ್ತಿವೆ. ಬಳಕೆದಾರರ ಏರುತ್ತಿರುವ ನಿರೀಕ್ಷೆಗನುಗುಣವಾಗಿ, ಕಾರ್ಯನಿರತವಲ್ಲದ ಆಸ್ತಿ (ಎಸ್.ಪಿ.ಎ) ಏರಿಕೆ, ಪ್ರಮುಖ ಗ್ರಾಹಕರ ಸೇವೆ ನೀಡುವ ಅವಶ್ಯಕತೆ ಸಮಾಜದ ಬಡ ಮತ್ತು ಅಬಲರ ಸೇವೆ ನೀಡುವ ಸಲುವಾಗಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆ (ಸಿ.ಬಿ.ಎಸ್) ಎ.ಟಿ.ಎಂ ನೆಟ್ ಬ್ಯಾಂಕಿಂಗ್ ಮತ್ತು ಇತರೆ ಡಿಜಿಟಲ್ ವ್ಯವಹಾರಗಳನ್ನು ಅಳವಡಿಸಿ ಕೊಳ್ಳುತ್ತವೆ. ಈ ಸಂಸ್ಥೆಗಳ ಸುಲಭ ಸರಳ ವ್ಯವಹಾರಗಳ ವೆಚ್ಚ ದಕ್ಷತೆಯಿಂದ ಡಿಜಟಲೀಕರಣ ಅತಿ ಅವಶ್ಯ ಎಂಬುದನ್ನು ಗ್ರಹಿಸಿಕೊಂಡಿದ್ದಾರೆ. ಕಾಗದ ರಹಿತ ವ್ಯವಹಾರ ವೆಚ್ಚಗಳನ್ನು ಕಡಿತಗೊಳಿಸಲು, ಗ್ರಾಹಕರ ತ್ವರಿತ ಸೇವೆ, ರಕ್ಷಣೆಗಳನ್ನು ಬಲಪಡಿಸುವುದು ಮತ್ತು ಅನುಪಾಲನೆಗಾಗಿ ಡಿಜಟಲೀಕರಣ ವ್ಯವಸ್ಥಾಪನಾ ಅವಶ್ಯಕತೆಯನ್ನು ಗ್ರಹಿಸಿವೆ. ಭಾ.ರಾ.ಸ. ಒಕ್ಕೂಟವು ವೈಕುಂಠಬಾಯ್ ಮೆಹ್ತಾ ಸ್ವಾರಕ ಉಪನ್ಯಾಸ ಅಂಗವಾಗಿ ನಬಾರ್ಡ್ ಚೇರ್‌ಮೆನ್‌ರಾದ ಶ್ರೀ ಗೋವಿಂದ ರಾಜುಲು ಚಿಂತಾಲ ಇವರು ನೀಡಿದ ಉಪನ್ಯಾಸದಲ್ಲಿ ಉನ್ನತ ತಾಂತ್ರಿಕತೆಯನ್ನು ಸಹಕಾರ ಬ್ಯಾಂಕಿಂಗ್ ವಲಯದ ಅಳವಡಿಸಿಕೊಳ್ಳಬೇಕಾದ ಅವಶ್ಯಕತೆ ಕೃತಕಜ್ಞಾನ ಮತ್ತು ಸರಪಳಿ ತಾಂತ್ರಿಕತೆ ಇತರೆಗಳ ಬಗ್ಗೆ ಒತ್ತಿ ಹೇಳಿರುತ್ತಾರೆ.

ಅಲ್ಪಾವಧಿ ಸಾಲ ರಚನೆಯ ತಳಹದಿ ಹಂತವಾದ ಪ್ರಾ.ಕೃ.ಪ.ಸ. ಸಂಘಗಳನ್ನು ಕಂಪ್ಯೂಟರೀಕರಣ ಗೊಳಿಸಲು ಭಾರತ ಸರ್ಕಾರ ದವರು ರೂ. 1900 ಕೋಟಿಯ ಬಜೆಟ್ ಅವಕಾಶ ಕಲ್ಪಿಸಿದೆ. ವಾಣಿಜ್ಯ ಬ್ಯಾಂಕ್‌ಗಳ ಸರಿಸಮವಾಗಿ ಸಹಕಾರ ಬ್ಯಾಂಕಿಂಗ್ ವಲಯವು ಬೆಳೆಯುವಂತೆ ಸಹಕರಿಸಲು ಸರ್ಕಾರದ ಆಶಯವನ್ನು ಇದು ವ್ಯಕ್ತಪಡಿಸುತ್ತದೆ. ಪಿ.ಎಂ.ಸಿ ಬ್ಯಾಂಕಿನಲ್ಲಿ ಆದ ಹಣ ದುರುಪಯೋಗ ಪ್ರಕರಣವು ನಿಯಂತ್ರಣ ವ್ಯವಸ್ಥೆಯಲ್ಲಿನ ಲೋಪವನ್ನು ತೋರಿಸಿದೆ. ಇದರಿಂದ ಭಾರತೀಯ ರಿಸರ್ವ್ ಬ್ಯಾಂಕ್ ಮೇಲ್ವಿಚಾರಣಾ ಯಾಂತ್ರಿಕತೆಯನ್ನು ಬಲ ಪಡಿಸಲು ಕ್ರಮ ತೆಗೆದುಕೊಳ್ಳುವಂತೆ ಮಾಡಿದೆ. ಇದರಿಂದಾಗಿ ಬ್ಯಾಂಕಿಂಗ್ ಚಟುವಟಿಕೆಗಳನ್ನು ಸಹಕಾರ ಬ್ಯಾಂಕ್ ಗಳು ಸುವ್ಯವಸ್ಥಿತಗೊಳಿಸುವ ಬಗ್ಗೆ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಅದರಲ್ಲಿಯೂ ಅಳವಡಿಸಕೊಂಡಿರುವ ಡಿಜಟಲೀಕರಣ ಕ್ರಮಗಳನ್ನು ಪರಿಶೀಲನೆಗೆ ಒಳಪಡಿಸಬೇಕಾಗಿದೆ.

### ಸಹಕಾರ ಸಂಸ್ಥೆಗಳ ಒಳಗೊಳ್ಳುವ ಸಂಸ್ಥೆಗಳು :

ಬೆಳೆಯುತ್ತಿರುವ ಆರ್ಥಿಕತೆಯ ಲಾಭ ಸಮಾಜದ ಎಲ್ಲ ವರ್ಗದವರಿಗೆ ದೊರೆಯುವುದನ್ನು ಒಳಗೊಂಡ ಬೆಳವಣಿಗೆಯು ಖಾತ್ರಿಗೊಳಿಸಕೊಳ್ಳುತ್ತದೆ. ಒಳಗೊಳ್ಳುವ ಬೆಳವಣಿಗೆಯಲ್ಲಿ ಆರ್ಥಿಕ ಸೇವೆಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ. ರೈತರು, ಗ್ರಾಮೀಣ ಕುಶಲ ಕರ್ಮಿಗಳು, ಭೂರಹಿತ ಕಾರ್ಮಿಕರು ಮತ್ತು ಮಹಿಳೆಯರು ಸಮಾಜದ ಸವಲತ್ತು ರಹಿತ ಸಮಾಜದ ಸ್ಥರಗಳಿಗೆ ಸಹಕಾರ ಬ್ಯಾಂಕುಗಳು ಆರ್ಥಿಕ ಸೇವೆ ಒದಗಿಸುವ ಮುಖಾಂತರ ಒಳಗೊಳ್ಳುವ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಆರ್ಥಿಕ ಸೇವೆಯ ಲಭ್ಯತೆ ಮತ್ತು ಸಮ ಅವಕಾಶಗಳು ಸೃಷ್ಠಿ ಆ ಜನತೆಯನ್ನು ಆರ್ಥಿಕತೆಯನ್ನು ಉತ್ತಮ ರೀತಿಯಲ್ಲಿ ಪಾಲ್ಗೊಳ್ಳಲು ಅವಕಾಶ ಒದಗಿಸುತ್ತದೆ. ಬಡತನ ನಿರ್ಮೂಲನೆಯಲ್ಲಿ ತನ್ನ ಸಹಾಯ ಹಸ್ತಚಾಚಲಾಗುತ್ತಿದೆ.

ಸಹಕಾರ ಬ್ಯಾಂಕ್‌ಗಳು ಅತಿ ಹೆಚ್ಚಿನ ಗ್ರಾಹಕರನ್ನು ಹೊಂದಿದೆ. ಆದರೆ ಸಾಂಸ್ಥಿಕ ಸಾಲ(ಪತ್ತು)ದಲ್ಲಿ ಸಹಕಾರ ಬ್ಯಾಂಕ್‌ಗಳ ಪಾಲು ವಾಣಿಜ್ಯ ಬ್ಯಾಂಕುಗಳಿಗಿಂತ ಕಡಿಮೆ ಇದೆ. ವಾಣಿಜ್ಯ ಬ್ಯಾಂಕ್‌ಗೆ ಹೋಲಿಸಿದಲ್ಲಿ ಸಹಕಾರ ಬ್ಯಾಂಕಿನ ಸಾಲದ ಗಾತ್ರ ಕಿರಿದು, ಅನುಮಾನವಿಲ್ಲ. ಸಹಕಾರ ಬ್ಯಾಂಕಿನ ಗ್ರಾಹಕ ಸಣ್ಣ, ಮಾಧ್ಯಮಿಕ ರೈತರು ಮತ್ತು ಬಡವರು, ಅವರೇ ಆರ್ಥಿಕ ಸೇರ್ಪಡೆಯ ಪ್ರಮುಖ ಗುರಿ.

ಸಹಕಾರ ಬ್ಯಾಂಕ್‌ಗಳು ಸಹಕಾರ ತತ್ವಗಳನ್ನನುಸರಿಸಿ ಉತ್ತಮ ಸಹಕಾರ ಆಡಳಿತ ತತ್ವಗಳನ್ನು ಪಾಲಿಸುತ್ತವೆ. ಇವು ಪ್ರಜಾಪ್ರಭುತ್ವ ತತ್ವಗಳ ಅವಲಂಭಿತವಾಗಿದೆ. ಸಹಕಾರ ಸಂಘಗಳು ಗ್ರಾಮೀಣ ಪ್ರದೇಶಗಳಲ್ಲಿ ಲೇವಾದೇವಿಗಾರರ ಹಿಡಿತದಿಂದ ತಪ್ಪಿಸಿಕೊಳ್ಳಲು ಜನರಿಗೆ ಸಹಾಯ ಮಾಡುತ್ತಿವೆ. ಅವುಗಳ ಪ್ರಜಾಸತ್ತಾತ್ಮಕ ರಚನೆಯೇ ಆರ್ಥಿಕ ಸೇರ್ಪಡೆಗೆ ಹೇಳಿ ಮಾಡಿಸಿದಂತಿದೆ. ಇತರೆ ಬ್ಯಾಂಕಿಂಗ್ ಸಂಸ್ಥೆಗಳಿಗಿಂತ ಉದ್ಯೋಗ ಒದಗಿಸುವ ಅವಕಾಶ ಕಲ್ಪಿಸಲು ಮತ್ತು ಆದಾಯ ಹೆಚ್ಚಳಗೊಳಿಸಲು ಸ್ಪಷ್ಟ ಅನುಕೂಲಗಳಿವೆ. ಆದುದರಿಂದ ರಾಷ್ಟ್ರದ ಒಳಗೊಂಡ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಲು ಅವುಗಳ ಒದಗಿಸುವ ಅವಶ್ಯಕತೆ ಇದೆ. ಒಳಗೊಂಡ ಬೆಳವಣಿಗೆಯು ವಾಸ್ತವಿಕತೆಯ ಜಾಲ, ಭೌತಿಕ ಜಾಲ ಮತ್ತು ಸಾಮಾಜಿಕ ಜಾಲ ಇದು ಡಿಜಿಟಲ್ ವೇದಿಕೆಯನ್ನು ಅತಿ ಅಗತ್ಯತೆ ಹೊಂದಿದೆ. ಸಹಕಾರ ಸಂಸ್ಥೆಗಳ ಮುಖೇನ ಒಳಗೊಂಡ ಬೆಳವಣಿಗೆಯ ಪ್ರಮುಖ ಭಾಗ ಡಿಜಟಲೀಕರಣ.

**ಡಿಜಿಟಲ್ ಅಸ್ಮಿತೆ ಮತ್ತು ಆರ್ಥಿಕ ಸೇರ್ಪಡೆ :**

ಡಿಜಿಟಲ್ ಅಸ್ಮಿತೆಗಳು ಒದಗಿಸುವ ಡಿಜಿಟಲ್ ಆರ್ಥಿಕ ಸೇವೆಗಳು ಆರ್ಥಿಕ ವ್ಯವಸ್ಥೆಯಿಂದ ಹೊರಗಿರುವವರನ್ನು ಒಳಗೊಳ್ಳುವಂತೆ ಮಾಡಲು ಸಶಕ್ತವಾಗಿವೆ. ಅಂದರೆ ಬಡವ ಮತ್ತು ನಿರ್ಲಕ್ಷ್ಯಕ್ಕೆ ಒಳಗಾದವರನ್ನು ಒಳಗೊಳ್ಳುತ್ತದೆ. ಮಾಕ್‌ಕಿನ್ಸ್ ಇವರ ಪ್ರಕಾರ 2025ರ ವೇಳೆಗೆ ಡಿಜಿಟಲ್ ಆರ್ಥಿಕತೆಯ ಎಲ್ಲ ಆರ್ಥಿಕತೆಗಳ ವಾರ್ಷಿಕ ಜಿ.ಡಿ.ಪಿಯನ್ನು 3.7 ಟ್ರಿಲಿಯನ್ ಡಾಲರ್‌ಗಳನ್ನು ಏರಿಸಬಲ್ಲದಾಗಿದೆ. ಜನತೆಯು ತಮ್ಮ ಅಸ್ಮಿತೆಯನ್ನು ಅನೂಕೂಲಕರವಾಗಿ ಸಾಬೀತು ಪಡಿಸಲು, ಡಿಜಿಟಲ್ ಅಸ್ಮತೆಯು ನಂಬಿಕೆಯನ್ನು ಸೃಷ್ಟಿಸುತ್ತದೆ. ಸುಲಭ ಉಪಯುಕ್ತತೆಯನ್ನು ಖಾತ್ರಿ ಪಡಿಸುತ್ತದೆ. ಮತ್ತು ವೆಚ್ಚ ತಗ್ಗಿಸುತ್ತದೆ. ಇವುಗಳು ಆರ್ಥಿಕ ಸೇವೆಗೆ ಅಳವಡಿಸಿಕೊಳ್ಳುವ ಅತ್ಯಂತ ಅವಶ್ಯ ಅಂಶಗಳಾಗಿವೆ. ವೈಯಕ್ತಿಕ ದತ್ತಾಂಶವನ್ನು ಕಳ್ಳತನದಿಂದ ತಪ್ಪಿಸುತ್ತದೆ. ಅಧಿಕೃತವಲ್ಲದ ಹಂಚಿಕೆ ಮತ್ತು ಉಪಯೋಗ ಮತ್ತು ವಿಶೇಷ ಉಪಯೋಗಕ್ಕೆ ಅವಶ್ಯ ಮಾಹಿತಿಯನ್ನು ಮಾತ್ರ ಒದಗಿಸುತ್ತದೆ.

ಸಹಕಾರ ಬ್ಯಾಂಕ್‌ಗಳಿಗೆ ಅನತಿದೂರದಲ್ಲಿರುವ ಗ್ರಾಮಂತರ ಪ್ರದೇಶ ಮುಟ್ಟುವುದು ಗ್ರಾಹಕರ ಸೇವೆ ನೀಡುವುದು ಒಂದು ಸವಾಲು ವಾಣಿಜ್ಯ ಬ್ಯಾಂಕ್‌ಗಳು ಸರ್ಕಾರದ ನೆರವಿನಿಂದ ಅನೇಕ ಗ್ರಾಮಂತರ ಶಾಖೆಗಳನ್ನು ತೆರೆದು ನಡೆಸುತ್ತಿರುತ್ತಾರೆ.

ಸಹಕಾರ ಬ್ಯಾಂಕ್‌ಗಳಲ್ಲಿ ಆಗಿರುವ ಅಪವ್ಯಯಗಳು ಸಾರ್ವಜನಿಕರ ದೃಷ್ಟಿಯಲ್ಲಿ ನಂಬಿಕೆ ಕಳೆದುಕೊಳ್ಳುತ್ತಿವೆ. ಈ ದೃಷ್ಟಿಯಲ್ಲಿ ಡಿಜಟಲೀಕರಣವನ್ನು ಗುರುತಿಸುವುದು ಪ್ರಮುಖ ಕಾರ್ಯವಾಗಿರುತ್ತದೆ. ಅತ್ಯಂತ ಉತ್ಕೃಷ್ಟ ಆಯ್ಕೆಯನ್ನು ಮಾಡಿಕೊಳ್ಳಬೇಕು. ಕೆಲವು ಅತಿ ಮುಖ್ಯ ಸಂಗತಿಗಳು ಉದಾ : ಸ್ಥಳೀಯ ಅವಶ್ಯಕತೆ, ಸಹಕಾರ ಸಂಸ್ಥೆಗಳ ಅವಶ್ಯಕತೆಯಾದ ಸಮೂಹ ಮುಟ್ಟುವ ಉದ್ದೇಶ ಸಾಧನೆಯಾಗುವಂತಿರಬೇಕು ಮತ್ತು ಸದೃಢ ಮೇಲ್ವೀಚಾರಣೆ ವ್ಯವಸ್ಥೆಯನ್ನು ಹೊಂದಿರಬೇಕು. ಇದರಿಂದ ಆಗಬಹುದಾದ ಅನಾಹುತಗಳು, ಅಪವ್ಯಯಗಳನ್ನು ತಪ್ಪಿಸಬಹುದಾಗಿದೆ.

ಜಾರ್ಕಂಡ್ ರಾಜ್ಯ ಸಹಕಾರ ಬ್ಯಾಂಕ್ ದೂರದ ಪ್ರದೇಶಗಳಲ್ಲಿನ ಗಿರಿಜನರ ಬಳಕೆದಾರರನ್ನು ತಲುಸಲು ಆಧುನಿಕ ತಂತ್ರಾಂಶ ಗಿರಿಜನರ ಬಳಕೆದಾರರನ್ನು ತಲುಪಲು ಆಧುನಿಕ ತಂತ್ರಾಂಶ ಅಭಿವೃದ್ಧಿ ಪಡಿಸಿದ್ದು, ಬೆರಳಚ್ಚು ಮೂಲಕ ಮೈಕ್ರೋ ಎಟಿಎಂಗಳು ಮೂಲಕ ಕಾರ್ಯನಿರ್ವಹಿಸುವಂತೆ ರೂಪಿಸಿದೆ. ಇದರಿಂದ ಬಳಕೆದಾರ ಹೆಬ್ಬೆರಳು ಗುರುತಿಸಿ ನಗದು ಹಿಂಪಡೆಯುವುದು, ನಗದು ಠೇವಣಿ ಮಾಡುವುದು, ಶಿಲ್ಕು ವಿಚಾರಣೆ, ಚಿಕ್ಕ ಲೆಕ್ಕ ತಖ್ತೆ, ಲೆಕ್ಕ ತೆರೆಯುವಿಕೆ, ಇತರೆ ಸೇವೆಗಳನ್ನು ಪಡೆಯಬಹುದಾಗಿದೆ. ನಲವತ್ತು ಸಾವಿರ ಗ್ರಾಮಗಳಲ್ಲಿ ಬ್ಯಾಂಕಿನ ಏಜೆಂಟರುಗಳು ಗ್ರಾಹಕರು ಮನೆ ಬಾಗಿಲಿನಲ್ಲಿ ಸೇವೆ ಒದಗಿಸುತ್ತಿರುತ್ತಾರೆ.

ಇತರೆ ಸಹಕಾರ ಬ್ಯಾಂಕ್‌ಗಳು ಈ ತಂತ್ರಾಂಶವನ್ನು ಅಳವಡಿಸಿಕೊಳ್ಳಬಹುದಾಗಿದೆ. ಈ ತಾಂತ್ರಿಕತೆ ಉಪಯೋಗಿಸಲು ತಕ್ಕ ತರಬೇತಿ ನೀಡುವುದು. ಬ್ಯಾಂಕಿಂಗ್ ಅನತಿದೂರ ಹೋಗುವುದನ್ನು ತಪ್ಪಿಸಬಹುದು. ಬ್ಯಾಂಕಿಗಳು ಏಜೆಂಟರ್‌ನ್ನು ನೇಮಿಸಿಕೊಂಡರೆ ವೆಚ್ಚವನ್ನು ತಗ್ಗಿಸಬಹುದಾಗಿದೆ.

**ಸಹಕಾರ ಸಂಸ್ಥೆಗಳು ಮತ್ತು ಸಾಮಾಜಿಕ ಮಾಧ್ಯಮ :**

ಸಹಕಾರ ಚಳುವಳಿಯು ಡಿಜಿಟಲ್ ಯುಗದಲ್ಲಿ ಎಲ್ಲ ಮಟ್ಟಗಳಲ್ಲಿ ತಲುಪಲು ಮತ್ತು ಸಹಯೋಗಗೊಳಿಸುವುದರಲ್ಲಿ ಅತಿದೊಡ್ಡ ಸವಾಲುಗಳನ್ನು ಎದುರಿಸುತ್ತಿದೆ (ಸದಸ್ಯರು ಆಂತರಿಕ ಮತ್ತು ಬಾಹ್ಯ ಭಾಗೀದಾರರು, ವಿಶಾಲ ಸಮೂಹ, ಸಾರ್ವಜನಿಕರು ಇತರೆ) ಸಾಮಾಜಿಕ ಒಳಿತನ್ನು ಉಂಟುಮಾಡಲು ವಿನೂತನ ವಿಧಾನಗಳನ್ನು ವೃದ್ಧಿಗೊಳಿಸಬೇಕಾಗಿದೆ. ಸ್ಪರ್ಧಾತ್ಮಕ ಆರ್ಥಿಕತೆಯಲ್ಲಿ ಸಹಕಾರ ವಲಯವು ಒಂದು ಪ್ರತಿಮೆಯಾಗಿ ಗುರುತಿಸಿಕೊಳ್ಳುವ ಅವಶ್ಯಕತೆ ಇದೆ.

ಸಹಕಾರ ಸಂಸ್ಥೆಗಳು ಮತ್ತು ಸಾಮಾಜಿಕ ಮಾಧ್ಯಮವು ತನ್ನದೇ ಆದ ರೀತಿಯಲ್ಲಿ ಜನತೆಯನ್ನು ಸಶಕ್ತರಾಗಿಸುತ್ತಿವೆ. ಸಾಮಾಜಿಕ ಮಾಧ್ಯಮದ ಸಲಕರಣಿಗಳು (ಫೇಸ್‌ಬುಕ್, ಟ್ವೀಟರ್) ಸಾಮಾಜಿಕ ಅವಿಷ್ಕಾರಗಳಿಗೆ ಒಬ್ಬರನ್ನೊಬ್ಬರು ಸಂಪರ್ಕಿಸಲು ಸಂಪರ್ಕವನ್ನು ಸದೃಡಗೊಳಿಸಲು ವೇದಿಕೆಯನ್ನು ಒದಗಿಸುತ್ತಿವೆ. ಅನೇಕ ಸಹಕಾರ ಸಂಸ್ಥೆಗಳು ಪರಿಣಾಮಕಾರಿ ಸಂವಹನಕ್ಕಾಗಿ, ಫೇಸ್‌ಬುಕ್, ಟ್ವಿಟರ್ ಮತ್ತು ಸಾಮಾಜಿಕ ಮಾಧ್ಯಮಗಳನ್ನು ಉಪಯೋಗಿಸಿಕೊಳ್ಳುತ್ತಿಲ್ಲ ಇದಕ್ಕೆ ಅಪವಾದಗಳೆಂದರೆ ಕೆಲವೇ ಸಂಸ್ಥೆಗಳಾದ

ಅಮೂಲ್, ಇಫ್ಕೋ, ನಾಫೆಡ್, ಸರಸ್ವತ್ ಸಹಕಾರ ಬ್ಯಾಂಕ್, ಬಾ.ರಾ.ಸ ಒಕ್ಕೂಟ ಮತ್ತು ಕೆಲವು ಇತರೆ ಸಂಸ್ಥೆಗಳು ಕೆಲವು ಸಂಸ್ಥೆಗಳು ಫೇಸ್‌ಬುಕ್ ಪುಟಗಳಲ್ಲಿದ್ದರೂ ನಿಶ್ಚಲವಾಗಿವೆ. ಅದನ್ನ ನಿರ್ವಹಿಸುವ ಕುಶಲ ಸಿಬ್ಬಂದಿ ಇಲ್ಲ ವೇದಿಕೆಯ ಉಪಯೋಗ ಪಡೆಯುತ್ತಿಲ್ಲ. ಅದೇ ರೀತಿಯಲ್ಲಿ ಸಂಸ್ಥೆಗಳು ಟ್ವಿಟರ್ ಖಾತೆಗಳನ್ನು ತರೆದಿರುವುದಿಲ್ಲ. ಆದರೆ ಟ್ವಿಟರ್ ಅತ್ಯಂತ ಪರಿಣಾಮಕಾರಿ ಮಾಧ್ಯಮವಾಗಿ ಹೊರಹೊಮ್ಮಿದೆ. ಜಾಗತಿಕ ವಿಷಯಗಳಾದ ಸುಸ್ಥಿರ ಅಭಿವೃದ್ಧಿ, ವಾತಾವರಣಾ ಬದಲಾವಣೆ ಇತರೆ ವಿಷಯಗಳ ಬಗ್ಗೆ ಕಾರಣಗಳು/ ಪ್ರಚಾರಗಳನ್ನು ಸರ್ಕಾರೇತರ ಸಂಸ್ಥೆಗಳು ಈ ವೇದಿಕೆಯಲ್ಲಿ ಕೈಗೊಳ್ಳುತ್ತಿವೆ. ಭಾರತದಲ್ಲಿನ ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರೊಡನೆ ಪರಿಣಾಮಕಾ-ರಿಯಾಗಿ ಸಂಹವನ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಇದರಿಂದ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದಿವೆ. ಬದ್ಧತೆಯೊಡನೆ ಹಂಚಿಕೊಂಡ ಚರ್ಚೆಗಳಾಗುತ್ತಿಲ್ಲ. ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡು ಹಿಡಿಯಲಾಗುತ್ತಿಲ್ಲ. ಭಾರತದ ಸಹಕಾರ ಸಂಸ್ಥೆಗಳು ಫೇಸ್‌ಬುಕ್ ಮತ್ತು ಇತರೆ ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡಲ್ಲಿ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಸಂಸ್ಥೆಗಳು ಒಂದರೊಡನೆ ಮತ್ತೊಂದು ಸಂವಾದ ನಡೆಸಿ ಸಮಸ್ಯೆಯನ್ನು ಅರಿತುಕೊಂಡಿಲ್ಲ ಒಟ್ಟಿಗೆ ಕಲಿತು ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಎಲ್ಲ ರೀತಿಯ ಸಹಕಾರ ಸಂಸ್ಥೆಗಳು/ ವಲಯವು ಸಾಮಾಜಿಕ ಮಾಧ್ಯಮವನ್ನು ಉಪಯೋಗಿಸಿಕೊಳ್ಳಬಹುದಾದರೂ ವ್ಯಾಪಾರಿ ಸಹಕಾರ ಸಂಸ್ಥೆಗಳು ಅದರಲ್ಲಿಯೂ ಪತ್ತಿನ ಮತ್ತು ಬ್ಯಾಂಕಿಂಗ್ ಸಂಸ್ಥೆಗಳಿಗೆ ಅತಿ ಹೆಚ್ಚಿನ ಉಪಯುಕ್ತತೆ ಇದೆ. ಇವು ತಾಂತ್ರಿಕತೆಯಿಂದ ಇತರೆ ಸಂಸ್ಥೆಗಳಿಗಿಂತ ಉತ್ತಮ ಸ್ಥಿತಿಯಲ್ಲಿವೆ. ಸಾಮಾಜಿಕ ಮಾಧ್ಯಮದ ಸದುಪಯೋಗದಿಂದ ಗ್ರಾಹಕರೊಡನೆ ಇನ್ನೂ ಹೆಚ್ಚಿನ ಉತ್ತಮ ಬಾಂಧವ್ಯ ಸಾಧಿಸಬಹುದು. ಸಹಕಾರವನ್ನು ಉದ್ದೀಪನ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಗಳು ಸಾಮಾಜಿಕ ಮಾಧ್ಯಮವನ್ನು ವಕೀಲಿಕೆ, ಶಿಕ್ಷಣ ಮತ್ತು ತರಬೇತಿ ಅವಶ್ಯಕತೆಗಳಿಗಾಗಿ ಬಳಸಿಕೊಳ್ಳಬಹುದು.

ಭಾರತದ ಸಹಕಾರ ಸಂಸ್ಥೆಗಳು ತಾವು ಪ್ರಚಾರಗೊಳ್ಳಬೇಕಾದ ವಿಷಯಗಳಲ್ಲಿ ಮೌನವಾಗಿರುವುದನ್ನು ಕಾಣುತ್ತಲಿದ್ದೇವೆ. ಉದಾಹರಣೆಗೆ ಪರಿಸರ ರಕ್ಷಣೆ, ಬಡತನ ನಿರ್ಮೂಲನೆ, ಲಿಂಗ ಸಮಾನತೆ ಇತರೆ, ಈ ದಿಸೆಯಲ್ಲಿ ಬಜೆಟ್ ಕೊರೆತೆಯನ್ನು ಎದುರಿಸುತ್ತಿವೆ. ಫೇಸ್‌ಬುಕ್ ಈ ದಿಸೆಯಲ್ಲಿ ತಂತ್ರಗಾರಿಕೆ ಅವಕಾಶವನ್ನು ತನ್ನ ಸದಸ್ಯರ ಮತ್ತು ವಿಶಾಲ ಸಮೂಹದೊಡನೆ ಸಂಪರ್ಕಿಸಿ ನೂತನ ಬೆಂಬಲಿಗರನ್ನು ಸೃಷಿಸಲು, ಹಣ ಸಂಗ್ರಹಿಸಲು ಸಹಾಯವಾಗುತ್ತದೆ. ಅನೇಕ ಸಹಕಾರ ಸಂಸ್ಥೆಗಳು ನಿಧಿ ಸಂಗ್ರಹಣೆಯೆಡೆಗೆ ಗಮನ ನೀಡುತ್ತಿಲ್ಲವಾದ್ದರಿಂದ ಅವಶ್ಯ ಸಂಪನ್ಮೂಲ ಕೊರತೆ ಎದುರುಸುತ್ತಿವೆ. ಗುಂಪು ನಿಧಿ ಸಂಗ್ರಹಣೆ ಜಾಲತಾಣಗಳನ್ನು ಉಪಯೋಗಿ ನಿಧಿ ಸಂಗ್ರಹಣೆ ಮಾಡುವುದು, ಸಾಮಾಜಿಕ ಬದ್ಧತೆಯ ಯೋಜನೆ ಆರಂಭಿಸುವುದು, ಸಹಕಾರ ವಲಯದಲ್ಲಿ ತಮ್ಮ ಛಾಪು ಮೂಡಿಸಿರುವುದಿಲ್ಲವೋ ಆ ವಲಯದಲ್ಲಿ ಪ್ರಮುಖ ಹೆಜ್ಜೆ ಇರಿಸುವುದು. ಇದರಿಂದ ಸಾಮಾಜಿಕ ವಿನೂತನ ಕಾರ್ಯಕ್ರಮಗಳಿಗೆ ನಾಂದಿಯಾಗಬಹುದಾಗಿದೆ.

ಪರಿಣಾಮಕಾರಿ ಸಂಹವನ ನಡೆಯದೇ ಇರುವುದರಿಂದ ಸಹಕಾರ ಸಂಸ್ಥೆಗಳ ನೂತನ ಉತ್ಪನ್ನಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿಲ್ಲ. ಇದು ಬಳಕೆದಾರರ ಹಿಮ್ಮಾಡಿಸಿ ಪಡೆಯಲು ಮತ್ತು ಬ್ರಾಂಡ್ ಆಗಿ ನಿರ್ಮಿಸಲು ಅಡಚಣೆಯಾಗುತ್ತಿದೆ. ಸಾಮಾಜಿಕ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡಲ್ಲಿ ಗ್ರಾಹಕರೊಡನೆ ಇರುವ ಸಂಬಂಧವನ್ನು ಪಾಲುಗಾರಿಕೆಯಾಗಿ ಪರಿವರ್ತಿಸಬಹುದು.

ಸಹಕಾರ ಸಂಸ್ಥೆಗಳು ಅವುಗಳ ವಿಡೀಯೋಗಳನ್ನು ಪ್ರಸಾರಗೊಳಿಸುವುದ-ರಿಂದ ಪರಿಣಾಮಕಾರಿಯಾಗಿ ತಲುಪಬಹುದು. ಜಾಗತಿಕವಾಗಿ ಮತ್ತು ರಾಷ್ಟ್ರಮಟ್ಟದಲ್ಲಿ ನೂತನ ಪ್ರೇಕ್ಷಕರನ್ನು ಮೇಲೆ ಪ್ರಭಾವ ಬೀರಬಲ್ಲದು. ನೂತನ ಅಂತರ್ಜಾಲ ವಿಧಗಳು ಹೊರಹೊಮ್ಮುತ್ತಿವೆ. ಇವು ಹೊಸ ಅವಿಷಾರಗಳಿಗೆ ದಾರಿದೀಪವಾಗಿದೆ. ಸಹಕಾರಗಳು ತಮ್ಮದೇ ಪ್ರಪಂಚ ಸೃಷ್ಟಿಸಿಕೊಂಡು ಅದರಿಂದ ಹೊರ ಬಂದು ಸಹಕಾರೇತರ ಸಂಸ್ಥೆಗಳ ಚಟುವಟಿಕೆಗಳನ್ನು ಅರಿಯುತ್ತಿಲ್ಲ. ಸಹಕಾರ ಸಮಾರಂಭಗಳ/ನೂತನ ಉತ್ಪನ್ನಗಳ ಬಿಡುಗಡೆ ಅಥವಾ ಬ್ರಾಂಡ್‌ಗಳ ಬಿಡುಗಡೆಯ ವಿಡಿಯೋ ಪ್ರಸಾರಗಳು ಸಾಮಾಜಿಕ ಅವಿಷ್ಕಾರಗಳಲ್ಲಿ ನೂತನ ಅನುಭವವನ್ನು ಒದಗಿಸಬಲ್ಲವು. ಈ ಪ್ರಸಾರ ವಿಧಾನಗಳು ಗಡಿ, ಎಲ್ಲೆಗಳನ್ನು ಮಿರುವುದರಿಂದ ಇದರಿಂದ ಪ್ರೇಕ್ಷಕರ ಹಿಮ್ಮಾಹಿತಿ ಬಹುಪ್ರಾಮುಖ್ಯತೆಯನ್ನು ಗಳಿಸಬಲ್ಲದು.

**ಸಹಕಾರ ಸಪ್ತಾಹದ ಸಮಯದಲ್ಲಿ ಈ ಕೆಳಗಿನ ಚಟುವಟಿಕೆ / ಕಾರ್ಯಕ್ರಮಗಳನ್ನು ಕೈಗೊಳ್ಳಬಹುದಾಗಿದೆ.**

- ಸಮ್ಮೇಳನಗಳು ವಿಚಾರ ಸಂಕಿರಣ ಮತ್ತು ಕಾರ್ಯಗಾರ ಸಹಕಾರ ವಲಯದಲ್ಲಿ ಕಾರ್ಯನಿರತರಿಗೆ ಆರ್ಥಿಕ ಸೇರ್ಪಡೆ ಸಾಮಾಜಿಕ ಮಾಧ್ಯಮ ಮತ್ತು ಡಿಜಟಲೀಕರಣ ವಿಷಯದಲ್ಲಿ ಏರ್ಪಡಿಸುವುದು.
- ಸಹಕಾರ ವಲಯದಲ್ಲಿ ಕಾರ್ಯನಿರತರಿಗೆ ಸಾಮಾಜಿಕ ಮಾಧ್ಯಮದ ಬಗ್ಗೆ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು.
- ಸಾಮಾಜಿಕ ಮಾಧ್ಯಮ, ಡಿಜಟಲೀಕರಣ, ಆರ್ಥಿಕ ಸೇರ್ಪಡೆಗಳಲ್ಲಿ ಸಾಧನೆಮಾಡಿರುವ ಸಹಕಾರ ಸಂಸ್ಥೆಗಳಿಗೆ ಪಾರಿತೋಷಕ ನೀಡುವುದು.
- ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿನ ಯುವ ಜನರಿಗೆ ಸಹಕಾರ ಸಂಬಂಧಿ ವಿಷಯಗಳ ಬಗ್ಗೆ ಸಾಮಾಜಿಕ ಮಾಧ್ಯಮ ಸ್ಪರ್ಧೆಗಳನ್ನು ಏರ್ಪಡಿಸುವುದು.

## 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಭೆ - ಚಿಕ್ಕಬಳ್ಳಾಪುರ



**ಚಿಕ್ಕಬಳ್ಳಾಪುರ :** ದಿನಾಂಕ 22.10.2020ರಂದು 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಭೆಯನ್ನು ಉಪನಿಬಂಧಕರ ಕಚೇರಿ ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಯಿತು. ಈ ಸಭೆಯಲ್ಲಿ ಶ್ರೀ ಎಂ.ಡಿ ನರಸಿಂಹಮೂರ್ತಿ ಜಂಟಿ ನಿಬಂಧಕರು, ಕಾನೂನು ಕೋಶ ಬೆಂಗಳೂರು, ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಶರಣಗೌಡ ಜಿ ಪಾಟೀಲ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಬಿ, ಗೋವಿಂದಗೌಡ ಡಿಸಿಸಿ ಬ್ಯಾಂಕ್ ಅಧ್ಯಕ್ಷರು ಕೋಲಾರ ಹಾಗೂ ಚಿಕ್ಕಬಳ್ಳಾಪುರ, ಶ್ರೀ ನಾಗರಾಜು ಹೆಚ್.ವಿ ಅಧ್ಯಕ್ಷರು, ಚಿಕ್ಕಬಳ್ಳಾಪುರ ಸಹಕಾರ ಒಕ್ಕೂಟ, ಹಾಗೂ ವಿವಿಧ ಸಹಕಾರ ಮಂಡಳಿಯ ಅಧ್ಯಕ್ಷರು ಉಪಸ್ಥಿತರಿದ್ದರು.


67ನೇ ಅಖಿಲ ಭಾರತ ಸಹಕಾರ ಸಪ್ತಾಹದ ದ್ವಿತೀಯ ಪೂರ್ವಭಾವಿ ಸಭೆ ದಿನಾಂಕ 02.11.2020ರಂದು ಉಪನಿಬಂಧಕರ ಕಚೇರಿ, ಚಿಕ್ಕಬಳ್ಳಾಪುರ ಇಲ್ಲಿ ಜರುಗಿತು. ಈ ಸಭೆಯಲ್ಲಿ ಶ್ರೀ ಎಂ.ಡಿ ನರಸಿಂಹಮೂರ್ತಿ ಜಂಟಿ ನಿಬಂಧಕರು, ಕಾನೂನು ಕೋಶ ಬೆಂಗಳೂರು, ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಅಧ್ಯಕ್ಷರು, ಸಂಯುಕ್ತ ಸಹಕಾರಿ, ಶ್ರೀ ಶರಣಗೌಡ ಜಿ ಪಾಟೀಲ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿ,ಶ್ರೀ ಮಹೇಂದ್ರ ನಿರ್ದೇಶಕರು ಕರ್ನಾಟಕ ರಾಜ್ಯ ಪತ್ತಿನ ಮಹಾಮಂಡಳ, ಶ್ರೀ ನಾಗರಾಜು ಹೆಚ್.ವಿ. ಅಧ್ಯಕ್ಷರು ಚಿಕ್ಕಬಳ್ಳಾಪುರ ಸಹಕಾರ ಒಕ್ಕೂಟ ಹಾಗೂ ವಿವಿಧ ಸಹಕಾರ ಮಂಡಳಿಯ ಮುಖ್ಯಸ್ಥರು ಉಪಸ್ಥಿತರಿದ್ದರು.



## ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾಗಿ ಶ್ರೀ ಹೆಚ್.ವಿ. ರಾಜೀವ್ ಆಯ್ಕೆ

**ಮೈಸೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್ ಇವರು ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾಗಿ ಸತತ 4ನೇ ಭಾರಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಮತ್ತು ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.

## ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿ ಶ್ರೀ ಲಕ್ಷ್ಮಣ ಮಾರುತಿ ಪವಾರ್ ಮತ್ತು ಶ್ರೀ ಸದಾಶಿವ ಶೆಟ್ಟಿ ಆಯ್ಕೆ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿ ಶ್ರೀ ಲಕ್ಷ್ಮಣ ಮಾರುತಿ ಪವಾರ್ ಇವರು ಆಯ್ಕೆಯಾಗಿರುತ್ತಾರೆ. ಇವರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಅಭಿನಂದಿಸಿದರು.



**ಉಡುಪಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿ ಶ್ರೀ ಸದಾಶಿವ ಶೆಟ್ಟಿ ಇವರು ಆಯ್ಕೆಯಾಗಿರುತ್ತಾರೆ. ಇವರನ್ನು ಸಂಯುಕ್ತ ಸಹಕಾರಿಯ ಉಡುಪಿ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ಇವರು ಅಭಿನಂದಿಸಿದರು.

## ಸಹಕಾರಿ ಕಾಯಿದೆ ತಿದ್ದುಪಡಿ ಕುರಿತು ಸಭೆ



**ಬೆಂಗಳೂರು :** ದಿನಾಂಕ 06.10.2020 ರಂದು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಾಯಿದೆ ತಿದ್ದುಪಡಿ ಸಭೆಯು ವಿಧಾನಸೌಧದಲ್ಲಿ ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಸಭೆಯಲ್ಲಿ ಮಾನ್ಯ ಶಾಸಕರಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಎಂ ಎನ್ ರಾಜೇಂದ್ರ ಕುಮಾರ್ ರವರು, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಹೆಚ್.ವಿ ರಾಜೀವ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಮಾನ್ಯ ಸಹಕಾರಿಗಳ ನಿಬಂಧಕರು ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ 19ನೇ ಸಾಮಾನ್ಯ ಸಭೆ 19ನೇ ಡಿಸೆಂಬರ್ 2020

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 19.12.2020 ನೇ ಶನಿವಾರ ದಂದು ನಡೆಸಲು ಉದ್ದೇಶಿಸಲಾಗಿದೆ. ಹೆಚ್ಚಿನ ವಿವರಗಳನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು. ರಾಜ್ಯದ ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.**

## 67ನೇ ಸಹಕಾರ ಸಪ್ತಾಹದ 7 ದಿನದ ಕಾರ್ಯಕ್ರಮಗಳನ್ನು ಸಹಕಾರಿ ಟಿ.ವಿ ಯಲ್ಲಿ ಪ್ರಸಾರ

**67ನೇ ಅಖಿಲ ಭಾರತ ಸಹಕಾರ ಸಪ್ತಾಹದ 7 ದಿನಗಳ ಸಂಪೂರ್ಣ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಸಹಕಾರ ಸುದ್ದಿ ಮಾಧ್ಯಮ ಮಹಾಮಂಡಳದ ಸಹಕಾರಿ ಟಿ.ವಿ ಯಲ್ಲಿ ಪ್ರಸಾರ ಮಾಡಲಾಗುವುದು. ರಾಜ್ಯದ ಸಹಕಾರಿಗಳು ಗಮನಿಸಲು ಕೋರಿದೆ.**

# ಸಂಯುಕ್ತ ಸಹಕಾರಿಯ ಆನ್‌ಲೈನ್ ತರಬೇತಿ ಕಾರ್ಯಕ್ರಮಗಳು

### ಬೆಂಗಳೂರು ವಿಭಾಗ

## ಆಡಳಿತ ಮಂಡಳಿ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ತರಬೇತಿ ಕಾರ್ಯಕ್ರಮ

**ಕೋಲಾರ ಮತ್ತು ಚಿಕ್ಕಬಳ್ಳಾಪುರ :** ದಿನಾಂಕ 28.10.2020 ರಂದು ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಆಡಳಿತ ಮಂಡಳಿ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸುವ ಮತ್ತು ನಡವಳಿಗಳನ್ನು ದಾಖಲಿಸುವ ವಿಧಿ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು, ಸದರಿ ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾಗಿ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ರವರು ಉಪನ್ಯಾಸ ನೀಡಿದರು. ತರಬೇತಿಯ ಅಧ್ಯಕ್ಷತೆ ಹಾಗೂ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತ ರವರು ನೆರವೇರಿಸಿದರು. ಕಾರ್ಯಕ್ರಮದ ಸ್ವಾಗತ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ನೆರವೇರಿಸಿದರು. ತರಬೇತಿಯಲ್ಲಿ ಒಟ್ಟು 26 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ :** ದಿನಾಂಕ 22.10.2020ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಲೆಕ್ಕಪರಿಶೋಧನೆ ವಿಷಯದ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಅನಿಲ್ ಭಾರದ್ವಾಜ್ ರವರು ಭಾಗವಹಿಸಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಯನ್ನು ಬೆಂಗಳೂರು ಪ್ರಾಂತೀಯ ಹಿರಿಯ ಕಾನೂನು ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ರವರು ನೆರವೇರಿಸಿದರು. ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಂ ರವರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. 59 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು.

ಕಲಬುರಗಿ ವಿಭಾಗ

## ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ "ಆದಾಯ ತೆರಿಗೆ ಮತ್ತು ಜಿ.ಎಸ್.ಟಿ" ಕುರಿತು ತರಬೇತಿ ಕಾರ್ಯಗಾರ.




**ಬೀದರ :** ದಿನಾಂಕ 20.10.2020 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ "ಸಹಕಾರಿಗಳಿಗೆ ಅನ್ವಯಿಸುವ ಆದಾಯ ತೆರಿಗೆ ಮತ್ತು ಜಿಎಸ್‌ಟಿ" ವಿಷಯದ ಕುರಿತು ಆನ್‌ಲೈನ್‌ನಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಶ್ರೀ ಗುರುನಾಥ ಜ್ಯಾಂತಿಕರ ವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಸಹಕಾರಿಗಳು ಕಾಲ ಕಾಲಕ್ಕೆ ಬದಲಾಗುವ ಸರ್ಕಾರದ ಕಾಯ್ದೆ ಮತ್ತು ನಿಯಮಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿ ಸದಸ್ಯರಿಗೆ ಉತ್ತಮ ಸೇವೆಯನ್ನು ನೀಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲ ಕಾಲಕ್ಕೆ ಕಾಯ್ದೆ ನಿಯಮಗಳಿಗೆ ತಿದ್ದುಪಡಿಗಳನ್ನು ತರುವ ಮೂಲಕ ಸಹಕಾರಿಗಳ ಆಡಳಿತದಲ್ಲಿ ಪಾರದರ್ಶಕ ತರುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದೆ ಕೇಂದ್ರ ಸರ್ಕಾರವು ಬಡವರ ಅಭಿವೃದ್ಧಿಗಾಗಿ ಆತ್ಮನಿರ್ಭರ ಮುಂತಾದ ಯೋಜನೆಗಳನ್ನು ಜಾರಿಗೆ ತಂದಿದೆ ಅದರ ಸದುಪಯೋಗ ಪಡೆದುಕೊಳ್ಳಲು ಕೋರಿದರು. ಸಹಕಾರಿಗಳು ಕೇಂದ್ರ ಸರ್ಕಾರವು ಇತ್ತೀಚಿನ ದಿನಗಳಲ್ಲಿ ಆದಾಯ ತೆರಿಗೆ ಕಾನೂನಿಗೆ ಬದಲಾವಣೆಯನ್ನು ತಂದಿರುತ್ತದೆ ಅದನ್ನು ಅಳವಡಿಸಿಕೊಂಡು ಪಾದರ್ಶಕ ವ್ಯವಹಾರವನ್ನು ನಡೆಸಿ ಸದಸ್ಯರಿಗೆ ಉತ್ತಮ ಸೇವೆಯನ್ನು ನೀಡಲು ಕರೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ॥ ಬಸವರಾಜ ದಾಬಕ್ಕೆ, ಒಕ್ಕೂಟ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್, ನಿರ್ದೇಶಕರಾದ ಶ್ರೀ ನಂದಾ ವಿವೇಕಾನಂದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಅಮೃತ ಹೋಸಮನಿ, ಜಿಲ್ಲಾ ಸಂಯೋಜಕರಾದ ವೀರಶಟ್ಟಿ, ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಧುಕರ ಹೆಗಡೆ, ಸನ್ನದು ಲೆಕ್ಕ ಪರಿಶೋಧಕರು ಬೆಂಗಳೂರು ತರಬೇತಿ ನೀಡಿದರು. ಪ್ರಾಸ್ತಾವಿಕ ನುಡಿಯನ್ನು ಶ್ರೀ ರಾಜಶೇಖರ ಹೆಚ್. ಪ್ರಾಂತೀಯ ವ್ಯವಸ್ಥಾಪಕರು ಕಲಬುರಗಿ ನಡೆಸಿಕೊಟ್ಟರು. ವೀರಶಟ್ಟಿ ಇವರು ವಂದಿಸಿದರು. ಜಿಲ್ಲೆಯ 55 ಸೌಹಾರ್ದ ಸಹಕಾರಿಗಳು ಆನ್‌ಲೈನ್ ತರಬೇತಿಯಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

## ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು" ವಿಷಯದ ಕುರಿತು ತರಬೇತಿ ಕಾರ್ಯಕ್ರಮ

**ಕೊಪ್ಪಳ :** ದಿನಾಂಕ 15.10.2020 ಗುರುವಾರ ದಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಚೇರಿ ವತಿಯಿಂದ ಕೊಪ್ಪಳ ಜಿಲ್ಲೆಯ ತಾಲ್ಲೂಕವಾರು ಕೊಪ್ಪಳ, ಕುಷ್ಟಗಿ, ಯಲಬುರ್ಗಾ, ಕುಕನೂರು ಮತ್ತು ಗಂಗಾವತಿ, ಕಾರಟಗಿ, ಕನಕಗಿರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರಿಗೆ "ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು" ವಿಷಯದ ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್ ರವರು ವಹಿಸಿ ಮಾತಾನಾಡಿ ಪ್ರಸುತ್ತ ಸಿತ್ಥಿಯಲ್ಲಿ ಸಹಕಾರಿಗಳು ಆರ್ಥಿಕ ಶಿಸ್ತನ್ನು ಕ್ರಮಬದ್ಧವಾಗಿ ಪಾಲಿಸುವುದರಿಂದ ಅನವಶ್ಯಕವಾದ ಖರ್ಚು–ವೆಚ್ಚಗಳಿಗೆ ಕಡಿವಾಣವನ್ನು ಹಾಕುವುದರ ಮೂಲಕ ಸಹಕಾರಿಯ ಆರ್ಥಿಕ ಅಭಿವೃದ್ಧಿಗೆ ಪೂರಕವಾಗುವುದು ಎಂದು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಡಾ॥ ಎಸ್. ಎ.ಸಿದ್ದಾಂತಿ ಮಾನ್ಯ ನಿರ್ದೇಶಕರು ನಿವೃತ್ತ (RICM) ಬೆಂಗಳೂರು ಸಹಕಾರಿಗಳ ಮೂಲ ಉದ್ದೇಶಗಳು, ಆರ್ಥಿಕ ಶಿಸ್ತಿನಿಂದ ಆಗುವ ಸದುಪಯೋಗಗಳ ಕುರಿತು ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಕಲಬುರಗಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್. ಹೆಚ್ ನೆರವೇರಿಸಿದರು. ಕಾರ್ಯಕ್ರಮದ ತಾಂತ್ರಿಕ ಸಹಾಯವನ್ನು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ನೀಡಿದರು. ನಿರೂಪಣೆ ಹಾಗೂ ವಂದರ್ನಾಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಪವನ ಎಮ್.ಆರ್

ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 102 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದರು.

**ರಾಯಚೂರು :** ದಿನಾಂಕ 17.10.2020 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ "ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು" ವಿಷಯದ ಕುರಿತು ಆನ್‌ಲೈನ್‌ನಲ್ಲಿ ತರಬೇತಿಯನ್ನು ಕರೆಯಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯಶೆಟ್ಟಿ ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾದ ಶ್ರೀ ಡಾ॥ ಎಸ್.ಎ.ಸಿದ್ದಾಂತಿ ಮಾನ್ಯ ನಿರ್ದೇಶಕರು ನಿವೃತ್ತ (RICM) ಬೆಂಗಳೂರು ಇವರು ತರಬೇತಿಯ ವಿಷಯದ ಕುರಿತು ಉಪನ್ಯಾಸ ನೀಡಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಇವರು ನೇರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜ–ಕರಾದ ಶ್ರೀ ವೆಂಕಟೇಶ ರಾಠೋಡ ನೇರವೆರಿಸಿದರು. ಸದರಿ ತರಬೇತಿಯಲ್ಲಿ 89 ಸೌಹಾರ್ದ ಸಹಕಾರಿಗಳು ಭಾಗವಹಿಸಿದರು.

**ಕಲಬುರಗಿ ಮತ್ತು ಯಾದಗಿರಿ :** ದಿನಾಂಕ: 21.10.2020ರಂದು ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರಿಗಾಗಿ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ವಿಷಯದ ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಈ ತರಬೇತಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಎಲ್ಲಾ ಸಹಕಾರಿಗಳು ದ್ರವ್ಯಾಸ್ತಿ ನಿರ್ವಹಣೆ ಮಾಡಬೇಕು ಹಾಗೂ ಸಾಲ ಮತ್ತು ಠೇವಣಿಗಳ ನಿಯಮಗಳನ್ನು ರಚಿಸಿಕೊಂಡು ಸದಸ್ಯರ ಜೊತೆ ವ್ಯವಹರಿಸಬೇಕು ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವೈ ಟಿ ಪಾಟೀಲರವರು ಅಧ್ಯಕ್ಷತೆಯ ಭಾಷಣದಲ್ಲಿ ಕೋವಿಡ್–19 ಹೆಚ್ಚು ಹರಡುತ್ತಿರುವ ಪರಿಣಾಮ ಆನ್‌ಲೈನ್ ಮೂಲಕ ಸಂಯುಕ್ತ ಸಹಕಾರಿ ನಡೆಸುವ ತರಬೇತಿ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸಿ ಅದರ ಲಾಭವನ್ನು ತಾವೆಲ್ಲಾ ಪಡೆದುಕೊಳ್ಳಬೇಕು ಎಂದು ತಿಳಿಸಿದರು, ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಡಾ॥ ಎಸ್ ಎ ಸಿದ್ಧಾಂತಿರವರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಹಕಾರಿಗಳಿಗೆ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಕುರಿತು ವಿವರವಾಗಿ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಮಾನ್ಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿರವರು ಹಾಗೂ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಮಹಾಮಂಡಳದ ಮಾನ್ಯ ನಿರ್ದೇಶಕರಾದ ಶ್ರೀ ಎಸ್‌ಎಸ್ ಪಾಟೀಲರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಇವರು ಉಪಸ್ಥಿತರಿದ್ದರು.

ಈ ಸಭೆಯಲ್ಲಿ ಒಟ್ಟು 80 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಇವರು ನೇರವೇರಿಸಿದರು. ಸ್ವಾಗತ & ನಿರೂಪಣೆ ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಇವರು ನೇರವೇರಿಸಿದರು. ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿ ಇವರು ನೇರವೇರಿಸಿದರು.

## "ಆಡಳಿತ ಮಂಡಳಿ ಸಭೆ ಯಾವ ರೀತಿ ಜರುಗಿಸುವುದು ಮತ್ತು ನಡವಳಿ ಬರೆಯುವುದರ ಕುರಿತು ತರಬೇತಿ ಕಾರ್ಯಕ್ರಮ

**ಬಳ್ಳಾರಿ :** ದಿನಾಂಕ 19.10.2020 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ "ಆಡಳಿತ ಮಂಡಳಿ ಸಭೆ ಯಾವ ರೀತಿ ಜರುಗಿಸುವುದು ಮತ್ತು ನಡವಳಿ ಬರೆಯುವುದರ ಕುರಿತು ಆನ್‌ಲೈನ್ ನಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠ ಇವರು ವಹಿಸಿ ತರಬೇತಿ ವಿಷಯದ ಕುರಿತು ಉಪನ್ಯಾಸ ನೀಡಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಇವರು ನೇರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ನೇರವೆರಿಸಿದರು. ಈ ತರಬೇತಿಯಲ್ಲಿ 53 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದರು.



## ಪೀಠಾಧಿಕಾರಿಗಳಾದ ಶ್ರೀ ಮಂಜುನಾಥ್ ಸಿಂಗ್ ಇವರಿಗೆ ಸ್ವಾಗತ

**ಬೆಳಗಾವಿ :** ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ ಬೆಳಗಾವಿ ಪ್ರಾಂತದ ನೂತನ ಮಾನ್ಯ ಪೀಠಾಧಿಕಾರಿಗಳಾದ ಶ್ರೀ ಮಂಜುನಾಥ ಸಿಂಗ್(ಪ್ರಭಾರಿ), ಇವರನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆಯವರು ಸ್ವಾಗತಿಸಿದರು.

# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಎರಡನೇ ತಂಡದ ಪರೀಕ್ಷೆಯ ಫಲಿತಾಂಶ

# 2nd Batch Diploma in Cooperation and Banking Management Examination Result

ಡಿ.ಸಿ.ಬಿ.ಎಂ ಎರಡನೇ ತಂಡವನ್ನು ದಿನಾಂಕ ಜನವರಿ 2020 ರಿಂದ ಜುಲೈ 2020 ರವರೆಗೆ ನಡೆಸಲಾಯಿತು. ಸದರಿ ಡಿ.ಸಿ.ಬಿ.ಎಂ ತರಗತಿಯ 272 ಅಭ್ಯರ್ಥಿಗಳ ಫಲಿತಾಂಶ ಪ್ರಕಟವಾಗಿದ್ದು ಅದರಲ್ಲಿ 231 ಅಭ್ಯರ್ಥಿಗಳು ಉತ್ತೀರ್ಣರಾಗಿರುತ್ತಾರೆ. 26 ಅಭ್ಯರ್ಥಿಗಳು ಅನುತ್ತೀರ್ಣರಾಗಿರುತ್ತದೆ ಹಾಗೂ 15 ಅಭ್ಯರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗಿದೆ.

## Pass condidate list - Roll No

| | | | | | | | | |
|---|---|---|---|---|---|---|---|---|
| B2-0184 | B2-0204 | B2-0222 | B2-0242 | B2-0259 | B2-0282 | B2-0304 | B2-0321 | B2-0339 |
| B2-0185 | B2-0205 | B2-0223 | B2-0243 | B2-0260 | B2-0283 | B2-0305 | B2-0322 | B2-0340 |
| B2-0186 | B2-0206 | B2-0224 | B2-0244 | B2-0261 | B2-0285 | B2-0306 | B2-0323 | B2-0341 |
| B2-0187 | B2-0207 | B2-0225 | B2-0245 | B2-0264 | B2-0287 | B2-0308 | B2-0324 | B2-0342 |
| B2-0188 | B2-0208 | B2-0226 | B2-0246 | B2-0265 | B2-0288 | B2-0309 | B2-0325 | B2-0343 |
| B2-0189 | B2-0209 | B2-0227 | B2-0247 | B2-0266 | B2-0289 | B2-0310 | B2-0326 | B2-0344 |
| B2-0190 | B2-0210 | B2-0228 | B2-0248 | B2-0267 | B2-0290 | B2-0311 | B2-0328 | B2-0345 |
| B2-0195 | B2-0211 | B2-0229 | B2-0249 | B2-0268 | B2-0292 | B2-0312 | B2-0330 | B2-0346 |
| B2-0196 | B2-0212 | B2-0231 | B2-0250 | B2-0271 | B2-0295 | B2-0313 | B2-0331 | B2-0347 |
| B2-0197 | B2-0213 | B2-0232 | B2-0251 | B2-0272 | B2-0296 | B2-0314 | B2-0332 | B2-0348 |
| B2-0198 | B2-0214 | B2-0233 | B2-0252 | B2-0273 | B2-0297 | B2-0315 | B2-0333 | B2-0349 |
| B2-0199 | B2-0215 | B2-0234 | B2-0253 | B2-0277 | B2-0298 | B2-0316 | B2-0334 | B2-0350 |
| B2-0200 | B2-0216 | B2-0235 | B2-0254 | B2-0278 | B2-0299 | B2-0317 | B2-0335 | B2-0351 |
| B2-0201 | B2-0217 | B2-0236 | B2-0255 | B2-0279 | B2-0300 | B2-0318 | B2-0336 | B2-0352 |
| B2-0202 | B2-0220 | B2-0237 | B2-0257 | B2-0280 | B2-0302 | B2-0319 | B2-0337 | B2-0353 |
| B2-0203 | B2-0221 | B2-0241 | B2-0258 | B2-0281 | B2-0303 | B2-0320 | B2-0338 | B2-0354 |
| B2-0355 | B2-0365 | B2-0376 | B2-0386 | B2-0397 | B2-0408 | B2-0420 | B2-0431 | B2-0449 |
| B2-0356 | B2-0366 | B2-0377 | B2-0387 | B2-0398 | B2-0409 | B2-0421 | B2-0432 | B2-0450 |
| B2-0357 | B2-0367 | B2-0378 | B2-0388 | B2-0400 | B2-0410 | B2-0422 | B2-0433 | B2-0451 |
| B2-0358 | B2-0368 | B2-0379 | B2-0389 | B2-0401 | B2-0411 | B2-0423 | B2-0434 | B2-0452 |
| B2-0359 | B2-0369 | B2-0380 | B2-0391 | B2-0402 | B2-0412 | B2-0424 | B2-0435 | B2-0453 |
| B2-0360 | B2-0371 | B2-0381 | B2-0392 | B2-0403 | B2-0413 | B2-0425 | B2-0442 | B2-0454 |
| B2-0361 | B2-0372 | B2-0382 | B2-0393 | B2-0404 | B2-0414 | B2-0426 | B2-0444 | B2-0455 |
| B2-0362 | B2-0373 | B2-0383 | B2-0394 | B2-0405 | B2-0416 | B2-0427 | B2-0445 | |
| B2-0363 | B2-0374 | B2-0384 | B2-0395 | B2-0406 | B2-0417 | B2-0429 | B2-0446 | |
| B2-0364 | B2-0375 | B2-0385 | B2-0396 | B2-0407 | B2-0419 | B2-0430 | B2-0447 | |

## Fail condidate list - Roll No

| | | | | | |
|---|---|---|---|---|---|
| B2-0191 | B2-0240 | B2-0270 | B2-0301 | B2-0436 | B2-0441 |
| B2-0192 | B2-0256 | B2-0275 | B2-0307 | B2-0437 | |
| B2-0219 | B2-0262 | B2-0276 | B2-0370 | B2-0438 | |
| B2-0238 | B2-0263 | B2-0293 | B2-0390 | B2-0439 | |
| B2-0239 | B2-0269 | B2-0294 | B2-0415 | B2-0440 | |

## With held condidate list - Roll No

| | | | | |
|---|---|---|---|---|
| B2-0193 | B2-0230 | B2-0286 | B2-0329 | B2-0428 |
| B2-0194 | B2-0274 | B2-0291 | B2-0399 | B2-0443 |
| B2-0218 | B2-0284 | B2-0327 | B2-0418 | B2-0448 |

### ಮೈಸೂರು ವಿಭಾಗ

# ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳನ್ನು ಲಾಭದತ್ತ ಕೊಂಡೊಯ್ಯುವ ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ & ಚಿಕ್ಕಮಗಳೂರು :** ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ & ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರಿಗಾಗಿ 2003 ರಿಂದ 2013ನೇ ಸಾಲಿನಲ್ಲಿ ನೋಂದಣಿಯಾಗಿ 2018–19ನೇ ಸಾಲಿನಲ್ಲಿ "ನಷ್ಟ ಹೊಂದಿರುವ ಸೌಹಾರ್ದ ಸಹಕಾರಿಗಳನ್ನು ಲಾಭದತ್ತ ಕೊಂಡೊಯ್ಯುವ" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 06.10.2020 ಮಂಗಳವಾರ ಮಧ್ಯಾಹ್ನ 03:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ಸ್ವಾಗತ ಭಾಷಣವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರಿ ಮಂಜುನಾಥರವರು ಪ್ರಾಸ್ತಾವಿಕ ನುಡಿಯನ್ನು ನೆರವೇರಿಸಿದರು. ನಂತರ ಶ್ರೀ ಬಿ.ವಿ ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು "ನಷ್ಟದಲ್ಲಿರುವ ಸೌಹಾರ್ದ ಸಹಕಾಗಳನ್ನು ಲಾಭದತ್ತ ಕೊಂಡೊಯ್ಯುವ ಕುರಿತು" ಉಪನ್ಯಾಸ ನೀಡಿದರು. ಮೈಸೂರು ಪ್ರಾಂತದ ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ 52 ಸೌಹಾರ್ದ ಸಹಕಾರಿಗಳಿಂದ 55 ಪ್ರತಿನಿಧಿಗಳು ಭಾಗವಹಿಸಿದ್ದರು.

**ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ & ಚಿಕ್ಕಮಗಳೂರು :** ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ & ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರಿಗಾಗಿ 2014 ರಿಂದ 2018ನೇ ಸಾಲಿನಲ್ಲಿ ನೋಂದಣಿಯಾಗಿ 2018–19ನೇ ಸಾಲಿನಲ್ಲಿ "ನಷ್ಟ ಹೊಂದಿರುವ ಸೌಹಾರ್ದ ಸಹಕಾರಿಗಳನ್ನು ಲಾಭದತ್ತ ಕೊಂಡೊಯ್ಯುವ" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 07.10.2020 ಬುಧವಾರ ಮಧ್ಯಾಹ್ನ 03:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ಸ್ವಾಗತ ಭಾಷಣವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಪ್ರಾಸ್ತಾವಿಕ ನುಡಿಯನ್ನು ನೆರವೇರಿಸಿದರು. ನಂತರ ಶ್ರೀ ಬಿ.ವಿ ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು "ನಷ್ಟದಲ್ಲಿರುವ ಸೌಹಾರ್ದ ಸಹಕಾಗಳನ್ನು ಲಾಭದತ್ತ ಕೊಂಡೊಯ್ಯುವ ಕುರಿತು" ಉಪನ್ಯಾಸ ನೀಡಿದರು. ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ 44 ಸೌಹಾರ್ದ ಸಹಕಾರಿಗಳಿಂದ 48 ಪ್ರತಿನಿಧಿಗಳು ಭಾಗವಹಿಸಿದ್ದರು.

**ರಾಮನಗರ :** ದಿನಾಂಕ 13.10.2020 ರಂದು ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಹಲಸಿನಮಸರ ದೊಡ್ಡಿ ಗ್ರಾಮದಲ್ಲಿ ನೂತನ ಸಹಕಾರಿ ಕುರಿತು ಪ್ರವರ್ತಕರ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಂ ರವರು ಭಾಗವಹಿಸಿ ಅಗತ್ಯ ಮಾಹಿತಿ ನೀಡಿದರು.

# ಸೌಹಾರ್ದ ಸಹಕಾರಿಗಳ ಇ-ಸ್ಟಾಂಪ್ ಕೇಂದ್ರಗಳು ಗಮನಿಸಬೇಕಾದ ಪ್ರಮುಖ ಅಂಶಗಳು,

1. ಇ-ಸ್ಟಾಂಪ್ ಕೇಂದ್ರ **(Estamp ACC)** ಪ್ರಾರಂಭಿಸಲು ಅನುಮತಿ ಪಡೆದ ವಿಳಾಸದಲ್ಲಿಯೇ ಸಹಕಾರಿಗಳು ಇ-ಸ್ಟಾಂಪ್ ಪೇಪರ್ ಗಳನ್ನು ವಿತರಿಸುವುದು. ಜೆರಾಕ್ಸ್/ಲೇಖನ ಸಾಮಗ್ರಿಗಳ ಅಂಗಡಿಯಲ್ಲಿ ಇ-ಸ್ಟಾಂಪ್ ವಿತರಿಸಬಾರದು. ಸಹಕಾರಿಯ ವಿಳಾಸ ಬದಲಾವಣೆಯಿದ್ದಲ್ಲಿ ಸಂಯುಕ್ತ ಸಹಕಾರಿಯ ಪೂರ್ವಾನುಮತಿ ಪಡೆಯುವುದು ಕಡ್ಡಾಯ ಹಾಗೂ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಇವರಿಗೆ ಸಂಯುಕ್ತ ಸಹಕಾರಿಯ ಮೂಲಕ ಮಾಹಿತಿ ನೀಡಿ ವಿಳಾಸ ಇಂದೀಕರಿಸಿಕೊಳ್ಳುವುದು.
2. ಇ-ಸ್ಟಾಂಪ್ ಪೇಪರ್ ಗಳ ಮುದ್ರಣಕ್ಕೆ ಸ್ಟಾಕ್ ಹೋಲ್ಡಿಂಗ್ ಕಾರ್ಪೋರ್ರೇಶನ್ ಆಫ್ ಇಂಡಿಯಾ ರವರು ಅನುಮೋದಿಸಿದ **HP LaserJet P2055d Printer, HP LaserJet Pro 400 Printer M401d** ಮತ್ತು **Samsung ProXpress Laserjet M3320ND** ಮಾತ್ರ ಬಳಸುವುದು.
3. ಇ-ಸ್ಟಾಂಪ್ ವ್ಯವಹಾರ ಮಾಡಲು ಸಂಯುಕ್ತ ಸಹಕಾರಿಗೆ ಹಣ ವರ್ಗಾಯಿಸಲು ಪ್ರತಿ ಎಸಿಸಿಗೂ ಪ್ರತ್ಯೇಕವಾಗಿ ನೀಡಿರುವ ವರ್ಚ್ಯುಲ್ ಐಡಿ **(Virtual ID)** ಕಡ್ಡಾಯವಾಗಿ ಬಳಸಿ ಹಣ ವರ್ಗಾಯಿಸುವುದು.
4. ಒಬ್ಬ ಸಿಬ್ಬಂದಿಯ ಐಡಿ ಹಾಗೂ ಗುಪ್ತ ಸಂಖ್ಯೆಗಳನ್ನು ಬೇರೆ ಸಿಬ್ಬಂದಿಗಳೊಂದಿಗೆ / ಅಪರಿಚಿತರೊಂದಿಗೆ ಹಂಚಿಕೊಳ್ಳಬಾರದು.
5. ಮೊದಲನೇ ಪಕ್ಷಗಾರ ಅಥವಾ ಎರಡನೇ ಪಕ್ಷಗಾರ ಹೆಸರಿನ ಸ್ಥಳದಲ್ಲಿ ವ್ಯಕ್ತಿಯ/ಸಂಸ್ಥೆಯ ಹೆಸರಿಲ್ಲದೇ ಕೇವಲ ಶ್ರೀ/ಶ್ರೀಮಾನ್/ಮಿಸ್ಟರ್/ಒಂದಕ್ಷರ ಬಳಸಿ ಇ-ಸ್ಟಾಂಪ್ ಮುದ್ರಿಸದಿರಲು ಸೂಚಿಸಿದೆ.
6. ಸಂಯುಕ್ತ ಸಹಕಾರಿಯು ಆಕ್ಸಿಸ್ ಬ್ಯಾಂಕ್‌ನಲ್ಲಿ ಹೊಂದಿದ್ದ ಉಳಿತಾಯ ಖಾತೆ ಸಂಖ್ಯೆ 910010008037593 ಹಾಗೂ ಐಡಿಬಿಐ ಬ್ಯಾಂಕ್‌ನ ಉಳಿತಾಯ ಖಾತೆ ಸಂಖ್ಯೆ 0243104000134620 ಈ ಎರಡು ಖಾತೆಗಳನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ. ಆದ ಕಾರಣ ಈ ಖಾತೆಗಳಿಗೆ ಹಣ ವರ್ಗಾಯಿಸದಿರಲು ಸೂಚಿಸಿದೆ.
7. ಪಕ್ಷಗಾರರ ಹೆಸರು ನಮೂದಿಸಬೇಕಾದ ಸ್ಥಳದಲ್ಲಿ ಬಾರೋವರ್ **(Borrower)** ಎಂದು ನಮೂದಿಸಿ ಇ-ಸ್ಟಾಂಪ್ ಮುದ್ರಿಸದಿರಲು/ವಿತರಿಸದಿರಲು ಸೂಚಿಸಿದೆ. ಈಗಾಗಲೇ ಈ ರೀತಿ ಮುದ್ರಿಸಿದ/ವಿತರಿಸಿರುವ ಸಹಕಾರಿಗಳ ಐಡಿಗಳನ್ನು ಲಾಕ್ ಮಾಡಲಾಗಿದೆ.
8. ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ಸೂಚಿಸಿರುವುದಕ್ಕಿಂತ ಹೆಚ್ಚಿನ ಸೇವಾ ಶುಲ್ಕ ಸ್ವೀಕರಿಸುವುದು ದಂಡನೀಯ ಅಪರಾಧ.
9. ಸಹಕಾರಿಗಳ ಇ-ಸ್ಟಾಂಪ್ ಕೇಂದ್ರಗಳು ನೆಗೆಟಿವ್ ಇ-ಸ್ಟಾಂಪ್ ಶಿಲ್ಕನ್ನು ಹೊಂದದಿರಲು ಸೂಚಿಸಿದೆ. ನಿರಂತರ ನೆಗೆಟಿವ್ ಇ-ಸ್ಟಾಂಪ್ ಶಿಲ್ಕನ್ನು ಹೊಂದಿರುವ ಸಹಕಾರಿಗಳ ಐಡಿಗಳು ಕೆಲವೊಮ್ಮೆ ಲಾಕ್ ಆಗುವುದು.
10. ಎರರ್ ರಿಪೋರ್ಟ ಫಾರಂ ಕಳುಸಿದ ಕೂಡಲೇ ಸಂಯುಕ್ತ ಸಹಕಾರಿಗೆ ಕರೆಮಾಡಿ ತಮ್ಮ ಅರ್ಜಿ ತಲುಪಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು. ಎರರ್ ರಿಪೋರ್ಟ ಫಾರಂ ನೊಂದಿಗೆ ಗ್ರಾಹಕ ಅರ್ಜಿ ಲಗತ್ತಿಸುವುದು ಕಡ್ಡಾಯ. ಎರರ್ ರಿಪೋರ್ಟ ಫಾರಂ ನ್ನು ಸಂಯುಕ್ತ ಸಹಕಾರಿಯ **estamppassword.error@souharda.coop** ಇ-ಮೇಲ್ ಐಡಿಗೆ ಕಳುಹಿಸಲು ಸೂಚಿಸಿದೆ.

## ಕನ್ನಡ ರಾಜ್ಯೋತ್ಸವ ಆಚರಣೆ



**ಕಲಬುರಗಿ :** ದಿನಾಂಕ 01.10.2020 ರಂದು ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ 65ನೇ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ಕರ್ನಾಟಕ ಮಾತೆ ಶ್ರೀ ಭುವನೇಶ್ವರಿ ದೇವಿಯ ಪೂಜೆ ಯನ್ನು ನೆರೆವೇರಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶರಾದ ಶ್ರೀ ಗುರುನಾಥ್ ಜ್ಯಾಂತಿಕರ ಇವರು ಮಾತನಾಡಿ ಕರ್ನಾಟಕ ರಾಜ್ಯದ ಚಳುವಳಿಯು ಗೋಕಾಕ ಚಳವಳಿಯಿಂದ ಆರಂಭವಾಯಿತು. ಕರ್ನಾಟಕವು ಹಲವು ಪ್ರಾಂತಗಳಿಂದ ಕೂಡಿದ್ದು ಭಾಷೆಯ ಆಧಾರದ ಮೇಲೆ ರಾಜ್ಯಗಳಾದವು. ಕನ್ನಡ ಮಾತನಾಡುವವರನ್ನು ಕನ್ನಡಿಗರೆಂದು ಕರ್ನಾಟಕ ರಾಜ್ಯ ವೆಂದು ಕರೆಯಲಾಯಿತು. ಸಂಯುಕ್ತ ಸಹಕಾರಿಯು ಆಡಳಿತ ಭಾಷೆ ಕನ್ನಡ ವಾಗಿದೆ. ಕನ್ನಡ ಭಾಷೆಯನ್ನು ಬೆಳೆಸಬೇಕೆಂದರೂ. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ವೈ.ಟಿ.ಪಾಟೀಲ, ಶ್ರೀ ಸಂಜೀವ್ ಮಹಾಜನ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## “ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜ್‌ಮೆಂಟ್ ಡಿಪ್ಲೋಮಾ”
## 3ನೇ ತಂಡದ ಪ್ರವೇಶ ಅರ್ಜಿಗಳ ಆಹ್ವಾನ
## ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಿದ್ಯಾರ್ಥಿಗಳಿಗೆ, ಸಹಕಾರಿಗಳಿಗೆ 6 ತಿಂಗಳ ದೂರ ಶಿಕ್ಷಣ ಕೋರ್ಸ”
## 1ನೇ ಜನವರಿ 2021 ರಿಂದ ಪ್ರಾರಂಭ

## Applications called for 3rd Batch of “Diploma in Cooperation and Banking Management”(DCBM) 6 Months Distance Education Course starts from 1st January 2021

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ 6 ತಿಂಗಳ ದೂರ ಶಿಕ್ಷಣ “ಡಿಪ್ಲೋಮಾ ಇನ್ ಕೋ-ಆಪರೇಶನ್ & ಬ್ಯಾಂಕಿಂಗ್ ಮೆನೇಜಮೆಂಟ”ನ 3ನೇ ತಂಡದ ಕೋರ್ಸ್‌ನ್ನು ಇದೇ ಜನವರಿ 2021 ರಿಂದ ಪ್ರಾರಂಭಿಸಲಾಗುತ್ತದೆ.

ಈ ಕೋರ್ಸ 6 ತಿಂಗಳು ಅವಧಿಯದ್ದಾಗಿದೆ. 6 ವಿಷಯಗಳಿರುತ್ತವೆ. ಒಂದು ಕೇಸ್‌ಸ್ಟಡಿ ಇರುತ್ತದೆ. ಪ್ರತಿ ವಿಷಯಕ್ಕೆ ತಲಾ 100 ಅಂಕಗಳು, ಕೇಸ್‌ಸ್ಟಡಿಗೆ 40 ಅಂಕಗಳು ಹಾಗೂ ಕಂಟ್ಯಾಕ್ಟ ಕ್ಲಾಸ್‌ಗಳಿಗೆ 60 ಅಂಕಗಳು (ಒಟ್ಟು 100 ಅಂಕಗಳು) ಒಟ್ಟು 700 ಅಂಕಗಳು. ಪ್ರತಿ 2 ತಿಂಗಳಿಗೆ ಒಂದು ಬಾರಿ 2 ದಿನಗಳ ಒಂದು ಕಂಟ್ಯಾಕ್ಟ ಕ್ಲಾಸ್ ನಡೆಸಲಾಗುವುದು. 6 ತಿಂಗಳ ಕೊನೆಯಲ್ಲಿ ಪರೀಕ್ಷೆ ನಡೆಸಲಾಗುವುದು. ನಂತರ ಫಲಿತಾಂಶ ಪ್ರಕಟಿಸಲಾಗುವುದು. ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.

ಈ ಕೋರ್ಸನ್ನು 1997 ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, ವಿದ್ಯಾರ್ಥಿಗಳು, ಸಹಕಾರಿಗಳು ಹಾಗೂ ಯುವಕ ಯುವತಿಯರು ಮಾಡಬಹುದಾಗಿದೆ.

**ಕನಿಷ್ಠ ವಿದ್ಯಾರ್ಹತೆ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಪೂರ್ಣಗೊಂಡಿರಬೇಕು.**

**ಕೋರ್ಸ್ ಫೀ** : ರೂ. 5000/- (ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/- ಕೋರ್ಸ ಮೆಟಿರಿಯಲ್ ರೂ 2000/- ಪರೀಕ್ಷಾ ಫೀ 1000/-) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ.

2 ದಿನಗಳ 3 ಕಂಟ್ಯಾಕ್ಟ ತರಗತಿಗಳ ವೆಚ್ಚ ತಲಾ ರೂ 500 ಗಳಂತೆ ಒಟ್ಟು ರೂ 1500/- ಕಂಟ್ಯಾಕ್ಟ ತರಗತಿಗಳನ್ನು ಶಿಬಿರಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು. ಕಂಟ್ಯಾಕ್ಟ ತರಗತಿ ಸಮಯದಲ್ಲಿ ಅಭ್ಯರ್ಥಿಗಳ ಊಟ, ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. 3 ಕಂಟ್ಯಾಕ್ಟ ತರಗತಿಗಳ ವೆಚ್ಚ ರೂ 1500/- ಪ್ರತ್ಯೇಕ. **ಕೋರ್ಸ್‌ನ ಒಟ್ಟು ಫೀ ರೂ. 7670/- (6500 + 18% ಜಿಎಸ್‌ಟಿ)**

**ಡಿಸೆಂಬರ 31 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.**

ಅರ್ಜಿ ಫಾರ್ಮ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಅಥವಾ ಪ್ರಾಂತೀಯ ಕಛೇರಿಗಳಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಸಂಪರ್ಕ ವ್ಯಕ್ತಿಗಳ ಹೆಸರುಗಳ ನಂಬರ್‌ಗಳನ್ನು www.souharda.coop ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಛೇರಿ : 080-23378375-80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080-23525546, ಮೈಸೂರು ಪ್ರಾಂತೀಯ ಕಛೇರಿ: 0821-2332299, ಬೆಳಗಾವಿ ಪ್ರಾಂತೀಯ ಕಛೇರಿ: 0831-2401551, ಕಲಬುರಗಿ ಪ್ರಾಂತೀಯ ಕಛೇರಿ: 08472-270222.

ಸಹಿ/-
(ಶರಣಗೌಡ ಜಿ. ಪಾಟೀಲ)
**ವ್ಯವಸ್ಥಾಪಕ ನಿರ್ದೇಶಕರು**

# ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು Video Conference / Virtual Meeting ಮೂಲಕ ನಡೆಸುವ ಕುರಿತು ಸರ್ಕಾರದ ಆದೇಶ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವುದರಿಂದ ಸಹಕಾರ ಸಂಘಗಳ /ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು video conference / virtual meeting ಮೂಲಕ ನಡೆಸುವ ಕುರಿತು.

**ಓದಲಾಗಿದೆ:-1** ಸರ್ಕಾರದ ಆದೇಶ ಸಂಖ್ಯೆ:ಸಇ 43 ಸಿಎಲ್‌ಎಮ್ 2020 (ಇ), ದಿನಾಂಕ:24.06.2020

2 ಸರ್ಕಾರದ ಆದೇಶ ಸಂಖ್ಯೆ:ಸಇ 44 ಸಿಎಲ್‌ಎಮ್ 2020 (ಇ), ದಿನಾಂಕ:08.07.2020

3 ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಬೆಂಗಳೂರು ಇವರ ಪತ್ರ ಸಂಖ್ಯೆ:ಸಸಂನಿ/ಆರ್‌ಎಸ್‌ಆರ್/ಎಕ್ಸ್‌ಎಮ್‌ಸಿ/11/2020-21, ದಿನಾಂಕ:14.10.2020

*****

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ರಾಜ್ಯದಲ್ಲಿ ಕೋವಿಡ್-19 ರೋಗವು ವ್ಯಾಪಕವಾಗಿ ಹರಡುತ್ತಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 121ರಡಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 27(1) ರಲ್ಲಿ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಯನ್ನು **ಸೆಪ್ಟೆಂಬರ್ ಇಪ್ಪತ್ತೈದರೊಳಗಾಗಿ** ನಡೆಸತಕ್ಕದ್ದು ಎಂಬುದನ್ನು ಸಡಿಲಿಸಿ, 25ನೇ **ಡಿಸೆಂಬರ್ 2020 ರೊಳಗಾಗಿ** ನಡೆಸಲು ಹಾಗೂ ಮೇಲೆ ಓದಲಾದ (2) ರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 70 ರಡಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 27(ಹೆಚ್-3), 30(1) ಹಾಗೂ 60(1) ರಡಿ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು **ಸೆಪ್ಟೆಂಬರ್ ಇಪ್ಪತ್ತೈದರೊಳಗಾಗಿ** ನಡೆಸತಕ್ಕದ್ದು ಎಂಬುದನ್ನು ಸಡಿಲಿಸಿ, **25ನೇ ಡಿಸೆಂಬರ್ 2020 ರೊಳಗಾಗಿ** ನಡೆಸಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (3) ರಲ್ಲಿ ಸಹಕಾರಿ ಸಂಘಗಳ /ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು video conference / virtual meeting ಮೂಲಕ ನಡೆಸಲು ಈ ಕೆಳಕಂಡ ನಿಬಂಧನೆಗೊಳಪಟ್ಟು ಸರ್ಕಾರದ ನಿರ್ದೇಶನ ನೀಡುವಂತೆ ಸಹಕಾರ ಸಂಘಗಳ ನಿಬಂಧಕರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಇ 43 ಸಿಎಲ್‌ಎಮ್ 2020 (ಇ) ಬೆಂಗಳೂರು, ದಿನಾಂಕ: 21.10.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 121ರಡಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 70ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಹಾಗೂ ವಿಪತ್ತು ನಿರ್ವಹಣೆ ಅಧಿನಿಯಮ 2005 ರಡಿಯಲ್ಲಿ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 158 ಟಿಎನ್‌ಆರ್ 2020

2.

2

ದಿನಾಂಕ:01.10.2020ರ ಆದೇಶ/ ಮಾರ್ಗಸೂಚಿಗಳನ್ನು ಮತ್ತು ಕೋವಿಡ್-19 ನಿರ್ವಹಣೆಗಾಗಿ ಹೊರಡಿಸಿದ ರಾಷ್ಟ್ರೀಯ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸರ್ವ ಸದಸ್ಯರ ಸಭೆಯನ್ನು video conference / virtual meeting ಮೂಲಕ ನಡೆಸಲು 2020 ರ ಅವಧಿಗೆ ಮಾತ್ರ ಈ ಕೆಳಕಂಡ ನಿಬಂಧನೆಗೊಳಪಟ್ಟು ಅನುಮತಿ ನೀಡಿದೆ.

- ಸರ್ವ ಸದಸ್ಯರ ಸಭೆಯನ್ನು video conference / virtual meeting ಮೂಲಕ ನಡೆಸಬಹುದು.
- ಸರ್ವ ಸದಸ್ಯರ ಸಭೆ ನಡೆಯುವ ದಿನಾಂಕ ಮತ್ತು ವೇಳೆ ದಿನಪತ್ರಿಕೆಯಲ್ಲಿ ಪ್ರಕಟಿಸುವುದು.
- ಸಭೆಯ ನೋಟೀಸು ಹಾಗೂ ಇನ್ನಿತರೆ ದಾಖಲಾತಿಗಳನ್ನು ಸಂಘದ ವೆಬ್‌ಸೈಟ್ ಮೂಲಕ ಪ್ರಚುರಗೊಳಿಸುವುದು ಹಾಗೂ ಹಾಲಿ ಅನುಸರಿಸುತ್ತಿರುವ ಪದ್ಧತಿಯಂತೆ ನೋಟೀಸುಗಳನ್ನು ಅಂಚೆಯ ಮೂಲಕ ರವಾನಿಸಲು ಸಹ ಕ್ರಮವಿಡತಕ್ಕದ್ದು.
- ಇ-ಮೇಲ್ ಅಥವಾ ವೆಬ್‌ಸೈಟ್ ಹೊಂದಿಲ್ಲದವರು Remote e-voting system ಮೂಲಕ ಭಾಗವಹಿಸುವುದು.
- ಸದಸ್ಯರಿಗೆ ಡಿವಿಡೆಂಡ್‌ಗಳನ್ನು ಇಸಿಎಸ್ ಮೂಲಕ ಅವರುಗಳ ಖಾತೆಗೆ ಪಾವತಿಸಲು ಕ್ರಮವಿಡುವುದು.
- ಇಂಥಹ ಸಭೆಯ ನಡವಳಿಗಳನ್ನು ಅಧಿಕೃತವಾಗಿ ರೆಕಾರ್ಡ್ ಮಾಡಿ ದಾಖಲಿಸುವ ತಂತ್ರಜ್ಞಾನ ಅಳವಡಿಸಿಕೊಳ್ಳತಕ್ಕದ್ದು.
- ಸರ್ವ ಸದಸ್ಯರ ಸಭೆ ನಡೆಸುವ ಸ್ಥಳದಲ್ಲಿ ಕೋವಿಡ್-19ರ ನಿಯಮಾವಳಿಗಳಿಗೆ ಒಳಪಟ್ಟು ಎಂದಿನಂತೆ ಹಾಜರಾತಿಯನ್ನು ನಿರ್ವಹಿಸಿ ಸಹಕಾರ ಸಂಘಗಳ ಕಾಯ್ದೆ ಅನ್ವಯ ನಮೂದಿಸಿರುವ ಅಂಶಗಳನ್ನು ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡು ಹಾಲಿ ಪದ್ಧತಿಯಂತೆ ನಡವಳಿಗಳನ್ನು ನಡೆಸಲು ಕ್ರಮವಹಿಸತಕ್ಕದ್ದು.

**ಸರ್ವ ಸದಸ್ಯರ ಸಭೆಯನ್ನು** video conference / virtual meeting ಮೂಲಕ ನಡೆಸಲು ವ್ಯವಸ್ಥೆ ಇಲ್ಲದೇ ಇರುವಂತಹ ಸಹಕಾರ ಸಂಘಗಳು /ಸೌಹಾರ್ದ ಸಹಕಾರಿಗಳು ಸರ್ಕಾರದ ಆದೇಶ ಸಂಖ್ಯೆ:ಸಇ 43 ಸಿಎಲ್‌ಎಮ್ 2020 (ಇ) ದಿನಾಂಕ:24.06.2020 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಇ 44 ಸಿಎಲ್‌ಎಮ್ 2020 (ಇ), ದಿನಾಂಕ:08.07.2020 ರನ್ವಯ ಕ್ರಮ ಕೈಗೊಳ್ಳಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ಎಂ.ಆಶಾ)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

<u>ಇವರಿಗೆ</u>

**ಸಂಕಲನಕಾರರು ಕರ್ನಾಟಕ ರಾಜ್ಯಪತ್ರ ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 25 ಪ್ರತಿಗಳನ್ನು ಒದಗಿಸಲು ಕೋರಿದೆ.**

**ಪ್ರತಿಗಳು: -**

1. ಮಹಾಲೇಖಪಾಲರು, (ಜಿ & ಎಸ್‌ಎಸ್‌ಎ), (ಇ & ಆರ್‌ಎಸ್‌ಎ), (ಎ&ಇ) ಕರ್ನಾಟಕ ಹೊಸ ಕಟ್ಟಡ ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-01
2. ಮಾನ್ಯ ಸಹಕಾರ ಸಚಿವರ, ಆಪ್ತ ಕಾರ್ಯದರ್ಶಿ ವಿಕಾಸ ಸೌಧ ಬೆಂಗಳೂರು.

3.

# ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರಿಗಳ 2019-20ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಲು ಕಲಾವಧಿಯನ್ನು ವಿಸ್ತರಣೆ ಮಾಡುವ ಕುರಿತು ಸರ್ಕಾರದ ಆದೇಶ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರಿಗಳ 2019-20 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಲು ಕಾಲಾವಧಿಯನ್ನು ವಿಸ್ತರಣೆ ಮಾಡುವ ಕುರಿತು.

**ಓದಲಾಗಿದೆ:-1** ಸರ್ಕಾರದ ಆದೇಶ ಸಂಖ್ಯೆ:ಸಇ 33 ಸಿಎಲ್ಎಮ್ 2020 (ಇ), ದಿನಾಂಕ:17.04.2020

2 ಸರ್ಕಾರದ ಆದೇಶ ಸಂಖ್ಯೆ:ಸಇ 34 ಸಿಎಲ್ಎಮ್ 2020 (ಇ), ದಿನಾಂಕ:17.04.2020

3 ಸರ್ಕಾರದ ಆದೇಶ ಸಂಖ್ಯೆ:ಸಇ 43 ಸಿಎಲ್ಎಮ್ 2020 (ಇ), ದಿನಾಂಕ:24.06.2020

4 ಸರ್ಕಾರದ ಆದೇಶ ಸಂಖ್ಯೆ:ಸಇ 44 ಸಿಎಲ್ಎಮ್ 2020 (ಇ), ದಿನಾಂಕ:08.07.2020

5 ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಕರ್ನಾಟಕ ರಾಜ್ಯ ಬೆಂಗಳೂರು ಇವರ ಪತ್ರ ಸಂಖ್ಯೆ: ಲೆಪಶಾ/ಇತರೆ/ಸಸಂಲೆಪನೆಅವಿ/02/2020-21, ದಿನಾಂಕ:20.10.2020

*****

**ಪ್ರಸ್ತಾವನೆ:**

ಮೇಲೆ ಓದಲಾದ (1) ಮತ್ತು (2) ರಲ್ಲಿ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯ್ದೆ-2012ರ ಕಲಂ 63(8) ಹಾಗೂ ನಿಯಮ 29(ಬಿ)7 ರನ್ವಯ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಕಾಯ್ದೆ 2013 ರ ಕಲಂ 33(8) ರನ್ವಯ ಲೆಕ್ಕ ಪರಿಶೋಧಕರು ಸಂಘಕ್ಕೆ, ಸಹಕಾರ ಸಂಘಗಳ ನಿಬಂಧಕರಿಗೆ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಹಾಗೂ ಆರ್ಥಿಕ ಸಹಾಯ ಒದಗಿಸುವ ಸಂಸ್ಥೆಗಳಿಗೆ ಲೆಕ್ಕ ಪರಿಶೋಧನಾ ವರದಿಯನ್ನು 1ನೇ ಸೆಪ್ಟೆಂಬರ್ ಒಳಗಾಗಿ ಸಲ್ಲಿಸಬೇಕಾದ ಅವಧಿಯನ್ನು 1ನೇ ನವೆಂಬರ್‌ವರೆಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (3) ಮತ್ತು (4) ರಲ್ಲಿ, ರಾಜ್ಯದಲ್ಲಿ ಕೋವಿಡ್-19 ವ್ಯಾಪಕವಾಗಿ ಹರಡುತ್ತಿರುವುದರಿಂದ ಸಹಕಾರಿ ಸಂಘಗಳ ಮತ್ತು ಸೌಹಾರ್ದ ಸಹಕಾರಿಗಳ ವಾರ್ಷಿಕ ಮಹಾ ಸಭೆ ನಡೆಸುವ ಅವಧಿಯನ್ನು ವಿಸ್ತರಿಸಿ ಡಿಸೆಂಬರ್ 25, 2020 ರವರೆಗೆ ನಡೆಸಲು ಅನುಮತಿ ನೀಡಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಪ್ರಕರಣ 27ಬಿ ರನ್ವಯ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 34 ಮತ್ತು 64ಎ ರೀತ್ಯಾ ವಿದ್ಯುಕ್ತ ವರದಿಗಳನ್ನು ಸಲ್ಲಿಸಲು 31ನೇ ಡಿಸೆಂಬರ್ 2020 ರ ವರೆಗೆ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (5)ರ ಪತ್ರದಲ್ಲಿ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ ಇವರು ಸಹಕಾರ ಸಂಘಗಳ ವಾರ್ಷಿಕ ಮಹಾ ಸಭೆಯನ್ನು ನಡೆಸಲು ಡಿಸೆಂಬರ್ 25 ರವರೆಗೆ ಅವಧಿ ವಿಸ್ತರಿಸಿ ಆದೇಶಿಸಿರುವುದರಿಂದ, ಲೆಕ್ಕಪರಿಶೋಧನಾ ವರದಿಗಳನ್ನು ಸಲ್ಲಿಸಬೇಕಾದ ಅವಧಿಯನ್ನು ದಿನಾಂಕ:25.11.2020ರವರೆಗೆ ವಿಸ್ತರಿಸಬಹುದಾಗಿದೆ ಎಂದು ಅಭಿಪ್ರಾಯಿಸಿರುತ್ತಾರೆ.

2...

-2-

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಇ 76 ಸಿಎಲ್ಎಮ್ 2020 (ಇ) ಬೆಂಗಳೂರು, ದಿನಾಂಕ: 29.10.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 121ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1960 ರ ನಿಯಮ 29-ಬಿ(7) ಕ್ಕೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 70ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 33(8)ಕ್ಕೆ ವಿನಾಯಿತಿ ನೀಡಿ, ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳನ್ನು ಲೆಕ್ಕಪರಿಶೋಧಕರು ಸಲ್ಲಿಸುವ ಕಾಲಾವಧಿಯನ್ನು ದಿನಾಂಕ:25.11.2020 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

29/10/2020
**(ಮನೋರಮ.ಡಿ.ಸಿ)**
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

**ಇವರಿಗೆ**

ಸಂಕಲನಕಾರರು ಕರ್ನಾಟಕ ರಾಜ್ಯಪತ್ರ ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 25 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು: -**

1. ಮಹಾಲೇಖಪಾಲರು, (ಜಿ & ಎಸ್ಎಸ್ಎ), (ಇ & ಆರ್ಎಸ್ಎ), (ಎ&ಇ) ಕರ್ನಾಟಕ ಹೊಸ ಕಟ್ಟಡ ಆಡಿಟ್ ಭವನ ಅಂಚೆ ಪಟ್ಟಿಗೆ ಸಂಖ್ಯೆ:5398, ಬೆಂಗಳೂರು-01.
2. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.
3. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ನಂ.17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು.
4. ಮಾನ್ಯ ಸಹಕಾರ ಸಚಿವರ, ಆಪ್ತ ಕಾರ್ಯದರ್ಶಿ ವಿಕಾಸ ಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಡಾ. ರಾಜ್‌ಕುಮಾರ್ ರಸ್ತೆ, ನಿರ್ಮಾಣ ಭವನ, ರಾಜಾಜಿನಗರ, ಬೆಂಗಳೂರು – 10.
7. ಕರ್ನಾಟಕ ರಾಜ್ಯ ಸನ್ನದು ಲೆಕ್ಕಪರಿಶೋಧಕರ ಅಸೋಸಿಯೇಷನ್, ನಂ.67, 1ನೇ ಮಹಡಿ, ವೆಸ್ಟ್ ಆಫ್ ಕಾರ್ಡ್ ರಸ್ತೆ, 2ನೇ ಹಂತ, ಮಹಾಲಕ್ಷ್ಮೀಪುರಂ, ಬೆಂಗಳೂರು – 86.
8. ಸರ್ಕಾರದ ಅಧೀನ ಕಾರ್ಯದರ್ಶಿ-3, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಶಾಖಾ ರಕ್ಷಾ ಕಡತ ಹೆಚ್ಚುವರಿ ಪ್ರತಿ.

# 01.01.2021 ರಿಂದ 31.12.2021 ರವರೆಗೆ ಪದಾವಧಿ ಮುಗಿಯಲಿರುವ / ಆಕಸ್ಮಿಕವಾಗಿ ತೆರವಾಗುವ ಸ್ಥಾನಗಳಿಗೆ/ ಹೊಸದಾಗಿ ನೋಂದಣಿಯಾಗುವ ಎಲ್ಲಾ ರೀತಿಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಕುರಿತು ಸರ್ಕಾರದ ಆದೇಶ.

**ಕರ್ನಾಟಕ ಸರ್ಕಾರ**

**ಸಹಕಾರ ಚುನಾವಣಾ ಪ್ರಾಧಿಕಾರ**

**3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್, ಶಾಂತಿನಗರ, ಬೆಂಗಳೂರು-560027.**

**ವಿಷಯ:** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 26 ಎ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 2(ಜಿ-2) ರಂತೆ ದಿನಾಂಕ: 01.01.2021 ರಿಂದ 31.12.2021 ರವರೆಗೆ ಪದಾವಧಿ ಮುಗಿಯಲಿರುವ/ ಆಕಸ್ಮಿಕವಾಗಿ ತೆರವಾಗುವ ಸ್ಥಾನಗಳಿಗೆ/ ಹೊಸದಾಗಿ ನೋಂದಣಿಯಾಗುವ ಎಲ್ಲಾ ರೀತಿಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:** ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಪ್ರಾ/ಆಡಳಿತ/ಪ್ರಾಸುಚ/05/ 2019-20, ದಿನಾಂಕ: 30-09-2019, 05-11-2019, 31-12-2019, 11-09-2020 ಮತ್ತು 22-09-2020

★★★

**ಪ್ರಸ್ತಾವನೆ**

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 (2015ರ ತಿದ್ದುಪಡಿ)ರ ನಿಯಮ 2(ಜಿ-2) ಪ್ರದತ್ತವಾದ ಅಧಿಕಾರದಂತೆ, 2021 ನೇ ಸಾಲಿನಲ್ಲಿ ಅಂದರೆ ದಿನಾಂಕ: 01.01.2021 ರಿಂದ 31.12.2021 ರವರೆಗೆ ಆಡಳಿತ ಮಂಡಲಿ ಪದಾವಧಿ ಮುಕ್ತಾಯವಾಗಲಿರುವ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯ ಸದಸ್ಯರ, ಸಾಮಾನ್ಯ, ಆಕಸ್ಮಿಕವಾಗಿ ಖಾಲಿಬಿದ್ದ ಸ್ಥಾನ ಮತ್ತು ಹೊಸದಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಆಡಳಿತ ಮಂಡಲಿ ಚುನಾವಣೆ ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಿಸಬೇಕಾಗಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 (2015ರ ತಿದ್ದುಪಡಿ)ರ ನಿಯಮ 2(ಜಿ-2) ರಂತೆ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ, ಹೊಸದಾಗಿ ನೋಂದಣಿಯಾದ, ಆಕಸ್ಮಿಕವಾಗಿ ತೆರವಾದ ನಿರ್ದೇಶಕರ ಸ್ಥಾನಗಳಿಗೆ / ವಿಶೇಷಾಧಿಕಾರಿ ನೇಮಕಗೊಂಡ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆ ದೇ ಶ**

**ಸಂಖ್ಯೆ: ಸಚುಪ್ರಾ/ಆಡಳಿತ/ಸೌ.ಸ.ಚು/35/2020-21** **ದಿನಾಂಕ: 29-10-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 (2015ರ ತಿದ್ದುಪಡಿ) ನಿಯಮ 2(ಜಿ-2) ರಂತೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಡಾ. ಎನ್.ಎಸ್. ಚನ್ನಪ್ಪಗೌಡ, ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಆದ ನಾನು ನಿಯಮ 5-ಎ ರಂತೆ ಆಯಾ ಜಿಲ್ಲೆಯಲ್ಲಿ ನೊಂದಣಿಯಾಗಿರುವ ಎಲ್ಲಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ, ಹೊಸದಾಗಿ ನೋಂದಣಿಯಾದ ಸೌಹಾರ್ದ

2

ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ, ಆಕಸ್ಮಿಕವಾಗಿ ತೆರವಾದ ನಿರ್ದೇಶಕರ ಸ್ಥಾನಗಳಿಗೆ ಮತ್ತು ವಿಶೇಷಾಧಿಕಾರಿ ನೇಮಕಗೊಂಡ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸಲು ಈ ಕೆಳಕಂಡ ಅಧಿಕಾರಿಗಳನ್ನು ಕೋಷ್ಟಕದಲ್ಲಿ ತಿಳಿಸಿರುವ ಜಿಲ್ಲೆಗಳಿಗೆ ಚುನಾವಣಾಧಿಕಾರಿಗಳನ್ನಾಗಿ ದಿನಾಂಕ 01.01.2021 ರಿಂದ 31.12.2021 ರವರೆಗೆ ನೇಮಕಾತಿ ಮಾಡಿ ಆದೇಶಿಸಿರುತ್ತೇನೆ.

| ಕ್ರ ಸಂ. | ಜಿಲ್ಲೆಯ ಹೆಸರು | ಚುನಾವಣಾಧಿಕಾರಿಯಾಗಿ ನೇಮಿಸಲ್ಪಟ್ಟ ಅಧಿಕಾರಿ |
|---|---|---|
| | **ಬೆಂಗಳೂರು ಪ್ರಾಂತ** | |
| 1 | ಬೆಂಗಳೂರು ನಗರ ಜಿಲ್ಲೆ | ಸಹಕಾರ ಸಂಘಗಳ ಜಂಟಿ ನಿಬಂಧಕರು, (ಪಟ್ಟಣ ಬ್ಯಾಂಕುಗಳ ವಿಭಾಗ) ಕೇಂದ್ರ ಬೆಂಗಳೂರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು. |
| 2 | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 3 | ರಾಮನಗರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ರಾಮನಗರ ಜಿಲ್ಲೆ |
| 4 | ತುಮಕೂರು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ತುಮಕೂರು ಜಿಲ್ಲೆ |
| 5 | ಚಿತ್ರದುರ್ಗ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಚಿತ್ರದುರ್ಗ ಜಿಲ್ಲೆ |
| 6 | ದಾವಣಗೆರೆ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ದಾವಣಗೆರೆ ಜಿಲ್ಲೆ |
| 7 | ಶಿವಮೊಗ್ಗ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಶಿವಮೊಗ್ಗ ಜಿಲ್ಲೆ |
| 8 | ಕೋಲಾರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಕೋಲಾರ ಜಿಲ್ಲೆ |
| 9 | ಚಿಕ್ಕಬಳ್ಳಾಪುರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಚಿಕ್ಕಬಳ್ಳಾಪುರ ಜಿಲ್ಲೆ |
| | **ಮೈಸೂರು ಪ್ರಾಂತ** | |
| 10 | ಮೈಸೂರು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಮೈಸೂರು ಜಿಲ್ಲೆ |
| 11 | ಚಾಮರಾಜನಗರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಚಾಮರಾಜನಗರ ಜಿಲ್ಲೆ |
| 12 | ಮಂಡ್ಯ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಮಂಡ್ಯ ಜಿಲ್ಲೆ |
| 13 | ಹಾಸನ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಹಾಸನ ಜಿಲ್ಲೆ. |
| 14 | ಚಿಕ್ಕಮಗಳೂರು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಚಿಕ್ಕಮಗಳೂರು ಜಿಲ್ಲೆ |

3

| ಕ್ರ ಸಂ. | ಜಿಲ್ಲೆಯ ಹೆಸರು | ಚುನಾವಣಾಧಿಕಾರಿಯಾಗಿ ನೇಮಿಸಲ್ಪಟ್ಟ ಅಧಿಕಾರಿ |
|---|---|---|
| 15 | ಕೊಡಗು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಕೊಡಗು ಜಿಲ್ಲೆ, ಮಡಿಕೇರಿ. |
| 16 | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು |
| 17 | ಉಡುಪಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಉಡುಪಿ ಜಿಲ್ಲೆ |
| | **ಬೆಳಗಾವಿ ಪ್ರಾಂತ** | |
| 18 | ಬೆಳಗಾವಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಬೆಳಗಾವಿ ಜಿಲ್ಲೆ |
| 19 | ವಿಜಯಪುರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ವಿಜಯಪುರ ಜಿಲ್ಲೆ |
| 20 | ಬಾಗಲಕೋಟೆ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಬಾಗಲಕೋಟ ಜಿಲ್ಲೆ |
| 21 | ಧಾರವಾಡ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಧಾರವಾಡ ಜಿಲ್ಲೆ |
| 22 | ಹಾವೇರಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಹಾವೇರಿ ಜಿಲ್ಲೆ |
| 23 | ಗದಗ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಗದಗ ಜಿಲ್ಲೆ |
| 24 | ಉತ್ತರ ಕನ್ನಡ ಜಿಲ್ಲೆ, ಕಾರವಾರ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಉತ್ತರ ಕನ್ನಡ ಜಿಲ್ಲೆ |
| | **ಕಲಬುರಗಿ ಪ್ರಾಂತ** | |
| 25 | ರಾಯಚೂರು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ರಾಯಚೂರು ಜಿಲ್ಲೆ. |
| 26 | ಕೊಪ್ಪಳ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಕೊಪ್ಪಳ ಜಿಲ್ಲೆ |
| 27 | ಕಲಬುರಗಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಕಲಬುರಗಿ ಜಿಲ್ಲೆ |
| 28 | ಬಳ್ಳಾರಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಬಳ್ಳಾರಿ ಜಿಲ್ಲೆ |
| 29 | ಬೀದರ್ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಬೀದರ್ ಜಿಲ್ಲೆ |
| 30 | ಯಾದಗಿರಿ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಯಾದಗಿರಿ ಜಿಲ್ಲೆ |

ಚುನಾವಣಾಧಿಕಾರಿಗಳು ಅವರ ಕಾರ್ಯವ್ಯಾಪ್ತಿಗೆ ಬರುವಂತಹ ಸೌಹಾರ್ದ ಸಹಕಾರಿಗಳ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ಹಾಗೂ ಪ್ರಾಧಿಕಾರದಿಂದ ಕಾಲಕಾಲಕ್ಕೆ ನೀಡಲಾದ ಸುತ್ತೋಲೆ, ಅಧಿಸೂಚನೆ ಆದೇಶ ಮತ್ತು ಮಾರ್ಗಸೂಚಿಗಳನ್ನು, (ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಗಳು ಮತ್ತು ನಿಯಮಾನುಸಾರ) ಅನುಸರಿಸಿ ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸಲು ಆದೇಶಿಸಿದೆ.

ಮೇಲೆ ತಿಳಿಸಿದಂತೆ ನೇಮಿಸಲ್ಪಟ್ಟ ಜಿಲ್ಲಾ ಚುನಾವಣಾಧಿಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 (2015ರ ತಿದ್ದುಪಡಿ)ರ ನಿಯಮ 5-ಎ ರಂತೆ ದಿನಾಂಕ:1-1-2021 ರಿಂದ 31-12-2021 ರವರೆಗೆ ನಡೆಯಬೇಕಾಗಿರುವ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸೌಹಾರ್ದ ಸಹಕಾರಿಗಳ ಚುನಾವಣೆಯನ್ನು ಹಾಲಿ ಇರುವ ಆಡಳಿತ ಮಂಡಲಿ ಅವಧಿ ಮುಗಿಯುವ 15 ದಿನಗಳ ಮುಂಚಿತವಾಗಿ ಚುನಾವಣೆ ಪ್ರಕ್ರಿಯೆ ಮುಗಿಯುವಂತೆ ಕ್ರಮ ಕೈಗೊಳ್ಳತಕ್ಕದ್ದು.

(ಡಾ.ಎನ್.ಎಸ್. ಚನ್ನಪ್ಪಗೌಡ) 29/10
ಆಯುಕ್ತರು
ಸಹಕಾರಚುನಾವಣಾ ಪ್ರಾಧಿಕಾರ,
ಬೆಂಗಳೂರು.



## ಸನ್ಮಾನ

**ಬೀದರ :** ದಿನಾಂಕ 20.10.2020ರಂದು ಬೀದರ ನಗರಕ್ಕೆ ಆಗಮಿಸಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಇವರನ್ನು ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಕಛೇರಿಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರು ಸ್ವಾಗತಿಸಿ ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಬೀದರ ಜಿಲ್ಲೆಯ ಸಹಕಾರಿಗಳು ಉಪಸ್ಥಿತರಿದ್ದರು.

## ಎ.ಟಿ.ಎಮ್ ಉದ್ಘಾಟನೆ



**ಕೊಪ್ಪಳ :** ದಿನಾಂಕ 19.10.2020 ರಂದು ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಾ ಸಹಕಾರಿಯಲ್ಲಿ ಎ.ಟಿ.ಎಂ ಯಂತ್ರ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ ಯವರು ನಮ್ಮ ಈ ಸೇವೆ ಜನರಿಗಾಗಿ ತಂದಿದ್ದು ಈ ಭಾಗದಲ್ಲಿ ಕೈಗಾರಿಕೆಗಳು ಹೆಚ್ಚಾಗಿರುವ ಕಾರಣದಿಂದ ಇಲ್ಲಿಯ ಜನರಿಗೆ ಎ.ಟಿ.ಎಂ ಸೇವೆಯು ಜನರಿಗೆ ಅನೂಕುಲವಾಗಿದೆ ಎಂದರು,

ಮುಖ್ಯ ಅತಿಥಿಗಳಾಗಿ ಶ್ರೀ ಸಿದ್ದನಗೌಡ ಪಾಟೀಲರು, ವೇಂಕಣ್ಣ ಬಂಡಾರಿ, ಯಮನೂರಪ್ಪ ಪಲ್ಲೆದ ಸಹಕಾರಿ ಉಪಾದ್ಯಕ್ಷರಾದ ಶ್ರೀ ಯಮನೂರಪ್ಪ ಗಂಟಿ, ಹಾಗೂ ಸಹಕಾರಿ ನಿರ್ದೇಶಕರುಗಳಾದ ಪುಟ್ಟಪ್ಪ ವಾರದ, ಕರಿಬಸವರಾಜ ಗದ್ದಿ, ಡಾ॥ ಬಸವರಾಜ ಪರನಗೌಡರು, ಚಂದ್ರಪ್ಪ ಮೇದಾರ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರ ಕಾರ್ಯಕ್ರಮ



**ಚಾಮರಾಜನಗರ :** ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿಯಮಿತದ ವತಿಯಿಂದ 2019–20ನೇ ಸಾಲಿನ ಪ್ರತಿಭಾ ಪುರಸಾರ ಸಮಾರಂಭವನ್ನು ದಿನಾಂಕ 18.10.2020ರ ಭಾನುವಾರ ರಂದು ಹಮ್ಮಿಕೊಳ್ಳಲಾಗಿತ್ತು. ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ ಯಲ್ಲಿ 85% ಕ್ಕಿಂತ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ ನಗದು ಪುರಸ್ಕಾರ ನೀಡಿ ಗೌರವದೊಂದಿಗೆ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಬಾಲಸುಬ್ರಹ್ಮಣ್ಯ, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಇಓ ಹಾಜರಿದ್ದರು.

## ಶ್ರೀ ಮಹಾಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆ



**ಯಾದಗಿರಿ :** ದಿನಾಂಕ 20.09.2020 ರಂದು ಶ್ರೀ ಮಹಾಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಲಿಂಗಣ್ಣ ವೈ.ಟಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ವಾರ್ಷಿಕ ವರದಿ ಮತ್ತು 2020–21ನೇ ಸಾಲಿನ ಮುಂಗಡ ಪತ್ರದ ವರದಿಯನ್ನು ಶ್ರೀ ಬಿ.ಎಸ್.ಸಗರ, ಮುಖ್ಯ ಕಾರ್ಯನಿರ್ವಾಹಕರು ಇವರು ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದರು. ಶ್ರೀ ಗುರುರಾಜ ಸಗರ ಸ್ವಾಗತ ಮಾಡಿದರು, ಶ್ರೀ ದೇವಿಂದ್ರಪ್ಪ ಸುರಪೂರ ವಂದಾನರ್ಪಣೆ ಮಾಡಿದರು.

## ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ 2ನೇ ವಾರ್ಷಿಕ ಸಾಮಾನ್ಯ ಮಹಾಸಭೆ




**ಕೊಪ್ಪಳ :** ದಿನಾಂಕ 11.10.2020 ರಂದು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ 2ನೇ ವಾರ್ಷಿಕ ಸಾಮಾನ್ಯ ಮಹಾಸಭೆಯು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಮತ್ತು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರ್, ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್. ಎಚ್, ಆಡಳಿತ ಮಂಡಳಿ ನಿರ್ದೇಶಕರು, ಸದಸ್ಯರು, ಮುಖ್ಯ ಕಾರ್ಯನಿರ್ವಾಹಕರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಪವನ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 45 ಸದಸ್ಯ ಸಹಕಾರಿಗಳು ಉಪಸ್ಥಿತರಿದ್ದರು.

## ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ 10ನೇ ವರ್ಷದ ವಾರ್ಷಿಕ ಮಹಾಸಭೆ




**ರಾಯಚೂರು :** ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ., ಸಿಂಧನೂರು ಇದರ 10ನೇ ವರ್ಷದ ವಾರ್ಷಿಕ ಮಹಾ ಸಭೆ ದಿನಾಂಕ 18-10-2020ರಂದು ಬೆಳಿಗ್ಗೆ 11.00 ಗಂಟೆಗೆ ಸಹಕಾರಿಯ ಕಾರ್ಯಾಲಯ, ಸಿಂಧನೂರಿನಲ್ಲಿ ನೆರವೇರಿಸಲಾಯಿತು. 10ನೇ ವರ್ಷದ ವಾರ್ಷಿಕ ಮಹಾ ಸಭೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟನೆ ಕಾರ್ಯಕ್ರಮ ಶ್ರೀ ಎಂ. ಲೋಕನಗೌಡ ಅಧ್ಯಕ್ಷರು ಮತ್ತು ನಿರ್ದೇಶಕ ಮಂಡಳಿ ಇವರಿಂದ ಉದ್ಘಾಟನೆ ಮಾಡಲಾಯಿತು. ನಂತರ ಅಧ್ಯಕ್ಷರು ತಮ್ಮ ನುಡಿಯಲ್ಲಿ ಕೋವಿಡ್-19 ಕಾರಣದಿಂದಾಗಿ ಸಹಕಾರಿಯ ದಶಮಾನೋತ್ಸವ ಆಚರಿಸಲು ಸಾಧ್ಯವಾಗದ ಬಗ್ಗೆ ವಿಷಾದ ವ್ಯಕ್ತಪಡಿಸಿದರು, ಹಾಗೂ ಸರ್ವರೂ ಕೋವಿಡ್-19 ವೈರಸ್ ಮಹಾಮಾರಿ ವಿರುದ್ಧ ನಾವು ನೀವೆಲ್ಲರು ಬಹಳಷ್ಟು ಜಾಗೂರಕತೆಯಿಂದ ಹೋರಾಡುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು. ಸಹಕಾರಿಯು ದೇಶದ ವಿಪತ್ತಿನ ಸಂದರ್ಭಗಳಲ್ಲಿ ಸಹಕಾರಿಯಿಂದ ದೇಣಿಗೆ ನೀಡುತ್ತಾ ಬಂದಿದ್ದು ಸದರಿ ಸಾಲಿನಲ್ಲಿ 10 ಜನ ಕೊರೋನಾ ವಾರಿಯರ್ಸ್‌ಗಳಿಗೆ ತಲಾ 3000 ಸಾವಿರ ದೇಣಿಗೆ ನೀಡಿದೆ. 2019-20ನೇ ಸಾಲಿನಲ್ಲಿ ಸಹಕಾರಿಯು ರೂ.72.62 ಲಕ್ಷ ನಿವ್ವಳ ಲಾಭ ಗಳಿಸಿದ್ದು ಕಳೆದ ವರ್ಷದಂತೆ ಈ ವರ್ಷವೂ ಶೇ 20% ರಷ್ಟು ಲಾಭಾಂಶವನ್ನು ಸದಸ್ಯರಿಗೆ ಹಂಚಲು ಹರ್ಷ ವ್ಯಕ್ತಪಡಿಸುತ್ತಾ ಈ ಎಲ್ಲಾ ಅಭಿವೃದ್ಧಿಗೆ ಕಾರಣರಾದಂತಹ ಕಾರ್ಯಕಾರಿ ಮಂಡಳಿಯವರ ಅಮೂಲ್ಯ ಸಲಹೆಗೆ, ಸಹಕಾರಿಯ ಸದಸ್ಯರಿಗೆ ಮತ್ತು ಸಿಬ್ಬಂಧಿಗಳ ಪರಿಶ್ರಮಕ್ಕೆ ಅಭಿನಂದನೆಗಳನ್ನು ಸಲ್ಲಿಸಿ ಮುಂದೆಯೂ ಇದೇ ರೀತಿ ಎಲ್ಲಾ ಸದಸ್ಯರ ಸಹಕಾರ ಕೋರುತ್ತಾ ತಮ್ಮ ಹಣವನ್ನು ಈ ಸಹಕಾರಿಯಲ್ಲಿ ತೊಡಗಿಸಿ ಹೆಚ್ಚಿನ ಅಭಿವೃದ್ಧಿಗೆ ಸಹಕಾರ ನೀಡಲು ಮನವಿ ಮಾಡಿದರು.

ನಂತರ ಶ್ರೀ ಹೆಚ್. ಕಲ್ಯಾಣಪ್ಪ ನಿರ್ದೇಶಕರು ಹಾಗೂ ಶ್ರೀ. ಕೆ. ಶರಣಬಸವ ನಿರ್ದೇಶಕರು ಸಹಕಾರಿಯ ಬೆಳವಣಿಗೆ ಕುರಿತು ಮಾತನಾಡಿದರು. ನಂತರದಲ್ಲಿ ಶ್ರೀ ಡಿ. ಬಸವರಾಜ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಸಹಕಾರಿಯ 9ನೇ ವರ್ಷದ 2018-19ನೇ ಸಾಲಿನ ನಡವಳಿಕೆಗಳನ್ನು ಮತ್ತು ಸಹಕಾರಿಯ ಅಭಿವೃದ್ಧಿಗೆ ಸರ್ವ ಸದಸ್ಯರ ಉತ್ತಮ ಸಹಕಾರ ಕಾರಣವೆಂದು ತಿಳಿಸಿದರು. ನಂತರದಲ್ಲಿ ಶ್ರೀ ಎನ್. ಬಸವರಾಜ ಅಲಬನೂರು ಸಹಾಯಕ ವ್ಯವಸ್ಥಾಪಕರು ಇವರು ಲಾಭ-ಹಾನಿ ಮತ್ತು ಅಡಾವೆ ಪತ್ರಿಕೆಯನ್ನು ಓದಿ ಹೇಳಿದರು. ಸಹಕಾ-ರಿಯ ಮುಂಗಡ ಪತ್ರ ಮಂಡಿಸಿದರು. ಪ್ರಾರ್ಥನೆ ಮಲ್ಲಿಕಾರ್ಜುನ ಟೆಂಗಿನಕಾಯಿ ದೈ.ಶಿ. & ಕಾರ್ಯಕ್ರಮ ನಿರೂಪಣೆ ಶ್ರೀ ಸಾಬಣ್ಣ ಶಿಕ್ಷಕರು ಇವರು ಮಾಡಿದರು. ನಂತರ ಎಲ್ಲಾ ಸದಸ್ಯರಿಗೆ ಹಾಗೂ ಕಾರ್ಯಕಾರಿ ಮಂಡಳಿ ಸದಸ್ಯರಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.




## ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

**ಚಿಕ್ಕಬಳ್ಳಾಪುರ :** ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿ ನಿ., ಚಿಕ್ಕಬಳ್ಳಾಪುರ. ಸಹಕಾರಿಯ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯು ದಿನಾಂಕ 24-10-2020ರಂದು ಸಹಕಾರಿ ಕಚೇರಿಯ ಸಭಾಂಗಣದಲ್ಲಿ ನಡೆಯಿತು.

## ಕನಕದಾಸ ಪತ್ತಿನ ಸೌಹಾರ್ದ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆ




**ಕೊಪ್ಪಳ :** ದಿನಾಂಕ 03.10.2020 ರಂದು ಕನಕದಾಸ ಪತ್ತಿನ ಸೌಹಾರ್ದ ಸಹಕಾರಿ ನಿ, ಹನಮಸಾಗರ ಇದರ 10ನೇ ವಾರ್ಷಿಕ ವರದಿ ಮತ್ತು ಅಡಾವೆ ಪತ್ರಿಕೆ 2019–20ರ ಸಹಕಾರಿ ಕಛೇರಿಯಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ಡಾ॥ ಬಸವರಾಜ ಅಕ್ಕಿ ಮಾತನಾಡಿ ಸಹಕಾರಿಯು ಪ್ರತಿ ವರ್ಷದಿಂದ ವರ್ಷಕ್ಕೆ ಉತ್ತಮ ಗ್ರಾಹಕ ಸ್ನೇಹಿ ಸಹಕಾರಿಯಾಗಿ ವರ್ಷದಿಂದ ವರ್ಷಕ್ಕೆ ಉತ್ತಮ ಲಾಭವನ್ನು ಗಳಿಸುತ್ತಾ ಪ್ರಸ್ತುತ ವರ್ಷ ಅಂದರೆ 2019–20ನೇ ಆರ್ಥಿಕ ವರ್ಷದಲ್ಲಿ 19,57,514/– ರೂಪಾಯಿಗಳ ನಿವ್ವಳ ಲಾಭಗಳಿಸಿದ್ದರಿಂದ ಸದಸ್ಯರಿಗೆ 13% ಡಿವಿಡೆಂಡ ವಿತರಿಸಲು ನಿರ್ಣಯಿಸಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಸಹಕಾರಿಯ ಬಂಡವಾಳ ಶೇ 35% ರಷ್ಟು ಏರಿಕೆಯಾಗಿದ್ದು ಇದಕ್ಕೆ ಕಾರಣಿಕರ್ತರಾದ ಆಡಳಿತ ಮಂಡಳಿಯ ಸದಸ್ಯರು ಗ್ರಾಹಕರು ಮತ್ತು ಸಿಬ್ಬಂದಿಯವರ ಸಹಕಾರದ ಶ್ರಮ ಕಾರಣ ಎಂದು ಹೇಳಿದರು

2019–20ನೇ ಆರ್ಥಿಕ ವರ್ಷದಲ್ಲಿ 19,57,514/– ರೂಪಾಯಿಗಳ ನಿವ್ವಳ ಗಳಿಸಿದ್ದು ಸಹಕಾರಿಯು ಸ್ವಂತ ಕಟ್ಟಡ ಹೊಂದಿ ಎರಡು ಶಾಖೆಗಳನ್ನು ಹೊಂದಿದ್ದು ಎರಡು ಶಾಖೆಗಳು ಉತ್ತಮ ಬೆಳವಣಿಗೆಯಲ್ಲಿ ಇದ್ದು ಇದಕ್ಕೆ ಅಲ್ಲಿನ ಶಾಖಾ ಸಲಹಾ ಸಮಿತಿಯ ಸದಸ್ಯರ ಸಲಹೆ ಶ್ರಮದ ಫಲವೇ ಕಾರಣ ಎರಡು ಶಾಖೆಗಳು ಉತ್ತಮವಾಗಿ ಕಾರ್ಯನಿರ್ವಸುತ್ತಾ ಇವೆ ಎಂದು ಹೇಳಿದರು. ಅದೇ ರೀತಿ ನಮ್ಮ ಸಹಕಾರಿಯು ಸನ್ 2020ರ ಆರ್ಥಿಕ ವರ್ಷದಲ್ಲಿ ಸುಮಾರು 12 ಕೋಟಿ ರೂ ಬಂಡವಾಳದೊಂದಿಗೆ ವ್ಯವಹಾರ ನಡೆಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಡಾ॥ ಬಸವರಾಜ ಅಕ್ಕಿ ಅಧ್ಯಕ್ಷತೆ ವಹಿಸಿದರು. ಉಪಾಧ್ಯಕ್ಷರಾದ ಅಂದಾನಪ್ಪ ಬಿಂಗಿ ನಿರ್ದೇಶಕರುಗಳಾದ ಹನಮಂತಪ್ಪ ಬಿಂಗಿ, ಹಿರಗಪ್ಪ ಗಡೇಕಾರ, ಬಸಪ್ಪ ಕಿಲ್ಲೇದ, ಭರಮಪ್ಪ ಬಿಂಗಿ, ಚನ್ನಬಸಪ್ಪ ಹಕ್ಕಿ, ಶಂಕ್ರಪ್ಪ ಬಾಗಲಿ, ಹನಮಂತಪ್ಪ ಹಕ್ಕಿ, ನಾಗರಾಜ ಹಕ್ಕಿ, ಶಿವಪ್ಪ ವಾಲ್ಮೀಕಿ, ಶ್ರೀಮತಿ ದ್ಯಾಮವ್ವ ಬಿಂಗಿ ಹಾಗೂ ಪಾರ್ವತಿ ಚೌಡಾಪೂರ ಹಾಗೂ ಸಹಕಾರಿಯ ಸಿಬ್ಬಂದಿಯವರಾದ ಮುತ್ತಪ್ಪ ಬಿಂಗಿ, ಶ್ವೇತಾ ಕೊಳ್ಳಿ, ರಾಘವೇಂದ್ರ ನಾಲಗಾರ, ಉಮೇಶ ಹುಡೇದ, ಬಸವರಾಜ ಚೌಡಾಪೂರ, ಸಿದ್ದಪ್ಪ ಕಿಲ್ಲೇದ, ಅಶೋಕ ಕುಂಕದ, ಮತ್ತು ಸಹಕಾರಿಯ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು. ಸಭೆಯಲ್ಲಿ ಆಡಳಿತ ಮಂಡಳಿಯವರಿಗೆ ಸನ್ಮಾಸಿಸಲಾಯಿತು.

ಶ್ರೀದೇವಿ ಅಂಗಡಿ ಸ್ವಾಗತಿಸಿದರು ಆನಂದ ಅಮ್ಮನಗದ್ದಿ ಸಭೆಯ ನೋಟಿಸು ಓದಿದರು. ಕೇಂದ್ರ ಕಛೇರಿಯ ವ್ಯವಸ್ಥಾಪಕರಾದ ದ್ಯಾಮಣ್ಣ ಬಿಂಗಿ ಕಾರ್ಯಕ್ರಮ ನಿರೂಪಿಸಿದರು. ನಾಗರಾಜ ಹಕ್ಕಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಮಲ್ಲಮ್ಮ ವಡಗೇರಿ ಆಸ್ತಿ–ಜವಾಬ್ದಾರಿ & ಲಾಭ–ಹಾನಿ ಓದಿದರು. ಅಮೀನಸಾಬ ಕಲಾದಗಿ ಅಂದಾಜು ಖರ್ಚು–ವೆಚ್ಚದ ವರದಿ ತಿಳಿಸಿದರು. ದೊಡ್ಡಪ್ಪ ಕಿಲ್ಲೇದ ವಂದಿಸಿದರು.

## ಸೇಫ್ ಸ್ಟಾರ್ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ



**ಉತ್ತರ ಕನ್ನಡ :** ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿ., ಹೊನ್ನಾವರ 2019–20ನೇ ಸಾಲಿನಲ್ಲಿ ರೂ 1.25 ಕೋಟಿ ಲಾಭ ಗಳಿಸಿದ್ದು ಶೇ.7 ಡಿವಿಡೆಂಡ್ ಘೋಷಣೆ ಮಾಡಲಾಗಿದೆ ಎಂದು ಅಧ್ಯಕ್ಷ ಶ್ರೀ ಜಿ. ಜಿ. ಶಂಕರ ತಿಳಿಸಿದರು. ಅವರು 26.09.2020 ರಂದು ನಡೆದ ಸಹಕಾರಿಯ 2019–20ನೇ ಸಾಲಿನ ವಾರ್ಷಿಕ ಸರ್ವ ಸಾಧಾರಣ ಸಭೆ ಉದ್ಘಾಟಿಸಿ ಮಾತನಾಡಿದರು. ಸದಸ್ಯರು ಸಹಕಾರಿಯ ಮೇಲೆ ವಿಶ್ವಾಸ ಇಟ್ಟು ಠೇವಣಿ ಮಾಡುವುದು ಮತ್ತು ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿದಾಗಲೇ ಸಹಕಾರಿ ಅಭಿವೃದ್ಧಿ ಸಾಧ್ಯ ಎಂದರು. ಸದಸ್ಯರುಗಳಲ್ಲಿ ಅನೇಕರು ನನಗಿಂತ ಹಿರಿಯರೂ, ಬುದ್ಧಿವಂತರೂ, ಹಿತಚಿಂತಕರೂ ಇದ್ದೀರಿ ಆದರೆ ಕಾಯ್ದೆಬದ್ಧವಾಗಿ ನನ್ನನ್ನು ಈ ಸ್ಥಾನದಲ್ಲಿ ಕೂಡ್ರಿಸಿದ್ದು ಅದನ್ನು ಸಮರ್ಥವಾಗಿ ನಿಭಾಯಿಸಬೇಕಾದ ಜವಾಬ್ದಾರಿ ನನ್ನ ಮೇಲಿದೆ. ಉಪಾಧ್ಯಕ್ಷ ವಿ.ಎಸ್. ಕಿಮಾನಿಕರ ಅವರ ಸಹಕಾರ ಮತ್ತು ಅನುಭವಿ ಹಿರಿಯ ಕಿರಿಯ ನಿರ್ದೇಶಕರ ಸಹಕಾರ ಮಾರ್ಗದರ್ಶನದೊಂದಿಗೆ ನಮ್ಮ ಪ್ರಯತ್ನ ಮತ್ತು ತಮ್ಮ ಸಹಕಾರದೊಂದಿಗೆ ಸಹಕಾರಿಯನ್ನು ಮುನ್ನಡೆಸುತ್ತಿದ್ದೇನೆ ಎಂದರು. ಸಹಕಾರಿ ಕಾಯ್ದೆ ಮತ್ತು ರಾಷ್ಟ್ರೀಕೃತ ಬ್ಯಾಂಕಿನ ಅನುಭವವಿರುವ, ತೀಕ್ಷ್ಣ ಬುದ್ಧಿಯುಳ್ಳ ಪ್ರಧಾನ ಕಛೇರಿ ಅಧಿಕಾರಿಗಳು, ಜವಾಬ್ದಾರಿ ಅಚ್ಚುಕಟ್ಟಾಗಿ ನಿರ್ವಹಿಸುವ ದಕ್ಷ ಸಿಬ್ಬಂದಿಗಳು, ಅತ್ಯಂತ ಶ್ರಮವಹಿಸುವ ಫೀಲ್ಡ್ ಎಕ್ಸಿಕ್ಯೂಟಿವ್ಸ್ ಇವರೆಲ್ಲರಿಂದಾಗಿ ಸಹಕಾರಿ ಅತಿ ಕಡಿಮೆ ಅವಧಿಯಲ್ಲಿಯೇ ಈ ಮಟ್ಟಕ್ಕೆ ಬೆಳೆದು ನಿಂತಿದೆ ಎಂದರು. 2011ರಲ್ಲಿ ಆರಂಭವಾದ ಸಹಕಾರಿ ವರದಿ ಸಾಲಿನಲ್ಲಿ ಮಂಕಿಯಲ್ಲಿ ನೂತನ ಶಾಖೆ ತೆರೆಯುವದರ ಮೂಲಕ ಜಿಲ್ಲಾದ್ಯಂತ ಹನ್ನೊಂದು ಶಾಖೆಗಳನ್ನು ಹೊಂದಿದ್ದು, ಒಂಬತ್ತು ಆರ್ಥಿಕ ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆಯೆಂದು ತಿಳಿಸಿದರು.

ವರ್ಷಾಂತ್ಯಕ್ಕೆ ಒಟ್ಟೂ 30,068 ಸದಸ್ಯರು, ರೂ.2.37ಕೋಟಿ ಶೇರು ಬಂಡವಾಳ, ರೂ44.57ಕೋಟಿ ಠೇವಣಿ ಹೊಂದಿದ್ದು, ರೂ.41.48ಕೋಟಿ ಸದಸ್ಯರ ಸಾಲ ಇರುತ್ತದೆ. ರೂ.27.22ಕೋಟಿ ಸ್ವ–ಸಹಾಯ ಸಂಘಗಳಿಗೆ ಸಾಲ

ನೀಡಿದ್ದು, ದುಡಿಯುವ ಬಂಡವಾಳ ರೂ51.54 ಕೋಟಿಯಷ್ಟು ಆಗಿದ್ದು, 2019-20ನೇ ಸಾಲಿನಲ್ಲಿ ರೂ 86.05ಕೋಟಿಯಷ್ಟು ವ್ಯವಹಾರ ಮಾಡಿದೆಯೆಂದು ತಿಳಿಸಿದರು. ಸಹಕಾರಿಯು ಆರಂಭದಿಂದಲೂ ಸಂಪೂರ್ಣ ಗಣಕೀಕೃತವಾಗಿದ್ದು, ತನ್ನ ಸದಸ್ಯರಿಗೆ ಎಸ್.ಎಮ್.ಎಸ್. ಅಲರ್ಟ ಹಾಗೂ ಪಾಸ್‌ಬುಕ್ ಪ್ರಿಂಟಿಂಗ್ ಸೌಲಭ್ಯವನ್ನು ಒದಗಿಸಿದೆಯೆಂದು ತಿಳಿಸಿದರು. ಸಹಕಾರಿಯ ಕಾರ್ಯವ್ಯಾಪ್ತಿ ರಾಜ್ಯಮಟ್ಟಕ್ಕೆ ವಿಸ್ತರಣೆಗೊಂಡಿದ್ದು ಅತಿ ಶೀಘ್ರದಲ್ಲಿ ಹೊರ ಜಿಲ್ಲೆಗಳಲ್ಲೂ ಶಾಖೆ ತೆರೆಯುವ ಬಗ್ಗೆ ತಿಳಿಸಿದರು. ಕೋವಿಡ್-19ರಿಂದಾಗಿ ಮಾರ್ಚ ಅಂತ್ಯದಲ್ಲಿ ಸಾಲ ವಸೂಲಿಗೆ ತೊಂದರೆ ಆದಾಗ್ಯೂ ಸಹಕಾರಿಯು ಆರಂಭದಿಂದಲೂ ವಸೂಲಿಗೆ ಹೆಚ್ಚಿನ ಗಮನಹರಿಸಿದ್ದರಿಂದ ಶೇ91ರಷ್ಟು ವಸೂಲಿ ಮಾಡಿದ್ದು ಉತ್ತಮ ಸಾಧನೆ ಎಂದರು. ಈ ಹಿಂದಿನ ವರ್ಷ ಶೇ11 ಡಿವಿಡೆಂಡ್ ನೀಡಿದ್ದು ಈ ಬಾರಿ ಕೋವಿಡ್‌ನಿಂದಾಗಿ ಪ್ರಸಕ್ತ ಆರ್ಥಿಕ ವರ್ಷವನ್ನು ಗಮನದಲ್ಲಿಟ್ಟುಕೊಂಡು ವರದಿ ಸಾಲಿಗೆ ಶೇ7 ಡಿವಿಡೆಂಡ್ ಘೋಷಣೆ ಮಾಡಲಾಯಿತು.

ಜನರಲ್ ಮೆನೇಜರ್ ಮಹೇಶ ಎಸ್. ಶೆಟ್ಟಿ ಸ್ವಾಗತಿಸಿದರು ಮತ್ತು ಹಿಂದಿನ ಸಾಲಿನ ವರದಿ ವಾಚಿಸಿದರು. ನಿರ್ದೇಶಕ ಜಿ. ಆರ್. ಹೆಗಡೆ ಪ್ರಾಸ್ತಾವಿಕ ನುಡಿದರು. ನಿರ್ದೇಶಕ ಜಿ.ಎಸ್. ಭಟ್ಟ, ಎಸ್. ಜಿ. ಭಟ್ಟ ಹಾಗೂ ರಾಷ್ಟ್ರಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕ ಎಸ್. ಎಸ್. ಭಟ್ಟ ಸೇರಿದಂತೆ ಅನೇಕ ಸದಸ್ಯರುಗಳು ಅತ್ಯಮೂಲ್ಯ ಸಲಹೆ ನೀಡಿದರು. ವರದಿ ಸಾಲಿನಲ್ಲಿ ಸಾಧನೆ ಮಾಡಿದ ಸಿಬ್ಬಂದಿ, ಫೀಲ್ಡ್ ಎಕ್ಸಿಕ್ಯೂಟಿವ್, ನಿರ್ದೇಶಕರು ಹಾಗೂ ಬಿಡಿಸಿ ನಿರ್ದೇಶಕರುಗಳಿಗೆ ನೆನಪಿನ ಕಾಣಿಕೆ ನೀಡಿ ಸತ್ಕರಿಸುವ ಕಾರ್ಯಕ್ರಮವನ್ನು ಎಜಿಎಂ ಎಡ್ವಿನ್ ರೆಬೆಲ್ಲೋ ನಡೆಸಿಕೊಟ್ಟರು. ನಿರ್ದೇಶಕ ನಾಗರಾಜ ಎಂ. ಇಂದ್ರ ವಂದನಾರ್ಪಣೆ ಮಾಡಿದರು. ಅಳ್ಳಂಕಿ ಶಾಖೆ ಕೋ-ಆರ್ಡಿನೇಟರ್ ಮಾದೇವ ನಾಯ್ಕ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಆಡಳಿತ ಮಂಡಳಿ ನಿರ್ದೇಶಕರು, ಬಿಡಿಸಿ ನಿರ್ದೇಶಕರು, ಚೀಫ್ ಮೆನೇಜರ್ ವಸಂತ ನಾಯ್ಕ, ಡೆವಲಪ್‌ಮೆಂಟ್ ಆಫೀಸರ್ ಶ್ರೀಪಾದ ಭಟ್ಟ, ಐಟಿ ಮೆನೇಜರ್ ವಿಘ್ನೇಶ್ವರ ಹೆಗಡೆ, ಇಂಟರ್ನಲ್ ಆಡಿಟರ್ ನರೇಂದ್ರ ಪ್ರಭು, ಅನೇಕ ಸದಸ್ಯರುಗಳು, ಎಲ್ಲಾ ಸಿಬ್ಬಂದಿಗಳು, ಫೀಲ್ಡ್ ಎಕ್ಸಿಕ್ಯೂಟಿವ್‌ಗಳು ಹಾಜರಿದ್ದರು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ನೀಲಾಂಬಿಕ ಸೌಹಾರ್ದ ಸಹಕಾರಿ ನಿ., ಸಿಂಧನೂರು, ರಾಯಚೂರು ಜಿಲ್ಲೆ.



ಶ್ರೀ ಮಲ್ಲಿಕಾರ್ಜುನ ವಲ್ಕಂದಿನ್ನಿ
ಅಧ್ಯಕ್ಷರು



ಶ್ರೀ ದೇವೇಂದ್ರಗೌಡ ಹೋಸಳ್ಳಿ ಇ ಜೆ
ಉಪಾಧ್ಯಕ್ಷರು



**ರಾಯಚೂರು** : ಸಿದ್ಧಗಂಗಾ ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಮಸ್ಕಿ ಇದರ ಆಡಳಿತ ಮಂಡಳಿ ಚುನಾವಣೆಯು ದಿನಾಂಕ 28.10.2020 ರಂದು ಸಹಕಾರಿಯ ಚುನಾವಣಾಧಿಕಾರಿಗಳಾದ ಶ್ರೀ ಗುರುಪ್ರಸಾದ್ ಎಚ್. ಇವರು ಚುನಾವಣಾ ಪ್ರಕ್ರಿಯೆಗಳನ್ನು ನಡೆಸಿ ಅಧ್ಯಕ್ಷರಾಗಿ ಶ್ರೀ ತಿಪ್ಪಯ್ಯಸ್ವಾಮಿ ಸಾಲಿಮಠ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಶಿವಾಜಿರಾವ್ ಲೋಕ್ರೆ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಈ ಸಂದರ್ಭದಲ್ಲಿ ನಿರ್ದೇಶಕರಾದ ಶ್ರೀ ಶಿವಶಂಕರಸ್ವಾಮಿ ಗಚ್ಚಿನಮಠ, ಶ್ರೀ ಲಕ್ಷ್ಮೀನಾರಾಯಣ ಶ್ರೇಷ್ಠಿ, ಶ್ರೀ ಆದಯ್ಯಸ್ವಾಮಿ ಹಿರೇಮಠ, ಶ್ರೀ ಚಂದ್ರಕಾಂತ ಅಮರಾವತಿ, ಶ್ರೀ ಸಿದ್ದಲಿಂಗಯ್ಯಸ್ವಾಮಿ ಸೊಪ್ಪಿಮಠ, ಶ್ರೀ ಸೋಮಶೇಖರಯ್ಯ ಸಿರವಾರಮಠ, ಶ್ರೀ ಮಲ್ಲಪ್ಪ ಜೋಗಿನ್, ಶ್ರೀಮತಿ ಅಂಜನಾ ಪಾರ್ಶ್ವನಾಥ ಕೋಲ್ಹಾರ, ಶ್ರೀಮತಿ ಮಂಜುಳಾ ಸುರೇಶ ರೇಳೆಕರ್, ಶ್ರೀ ಶಂಕ್ರಪ್ಪ ಬಂಗಾಲಿ, ಶ್ರೀ ದೇವಪ್ಪ ಪೋಲಿಸ್ ಪಾಟೀಲ್ ಉಪಸ್ಥಿತರಿದ್ದರು.



**ಚಾಮರಾಜನಗರ** : ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಚಾಮರಾಜನಗರ ಇದರ ನೂತನ ಆಡಳಿತ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿದ್ದು, ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಮಹೇಶ್ ಕುಮಾರ್, ಉಪಾಧ್ಯಕ್ಷರಾಗಿ ಶ್ರೀ ಮುರಳಿ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



**ಚಾಮರಾಜನಗರ :** ಜನಪರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಚಾಮರಾಜನಗರ ಇದರ ನೂತನ ಆಡಳಿತ ಮಂಡಳಿ ಸದಸ್ಯರು ಆಯ್ಕೆಯಾಗಿದ್ದು, ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಪಿ. ರಂಗಸ್ವಾಮಿ ಉಪಾಧ್ಯಕ್ಷರಾಗಿ ಶ್ರೀ ಎಲ್. ಉಪೇಂದ್ರ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



**ಚಾಮರಾಜನಗರ :** ಸಂಗಮ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ನೂತನ ಆಡಳಿತ ಮಂಡಳಿ ಸದಸ್ಯರು ಆಯ್ಕೆಯಾಗಿದ್ದು, ಸಹಕಾರಿಯ ಅಧ್ಯಕ್ಷರಾಗಿ ಶ್ರೀ ವೈ.ಎಸ್ ರಾಘವೇಂದ್ರ ರವರು ಉಪಾಧ್ಯಕ್ಷರಾಗಿ ಶ್ರೀ ಚಂದ್ರಶೇಖರ ಸಿ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ನಿರ್ದೇಶಕರಾಗಿ ಆಯ್ಕೆ



**ಬಳ್ಳಾರಿ :** ಶ್ರೀ ವಿಷ್ಣುವಿಲಾಸ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್. ಜೆ ಹನುಮಂತಯ್ಯ ಇವರು ಕರ್ನಾಟಕ ರಾಜ್ಯ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ. ಇವರಿಗೆ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಂದ ಅಭಿನಂದನೆಗಳು.

## ಉದ್ಘಾಟನೆ



**ಚಾಮರಾಜನಗರ :** ದಿನಾಂಕ 28.10.2020 ರಂದು ಶ್ರೀ ಮುಪ್ಪಿನ ಷಡಕ್ಷರದೇವ ಸೌಹಾರ್ದ ಸಹಕಾರಿ ನಿ., ಯಳಂದೂರು ಇದರ 2019–20ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯ ಉದ್ಘಾಟನೆಯನ್ನು ಶ್ರೀ ನಿ.ಪ್ರಸ್ವ.ಶ್ರೀ ಬಸವರಾಜಸ್ವಾಮಿ ಒಡೆಯರ್ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹೇಂದ್ರ ಕೆ.ಜೆ ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯ ಕಾರ್ಯನಿರ್ವಾಹಕರಾದ ಕು. ನಾಗಪೂಜಾ ಎ.ಎನ್ ಉಪಸ್ಥಿತರಿದ್ದರು.



**ಮಂಡ್ಯ :** ದಿನಾಂಕ 30.10.2020 ರಂದು ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಭಾರತೀನಗರ, ಮದ್ದೂರು ತಾಲ್ಲೂಕು, ಇದರ 2019–20ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿ ಉದ್ಘಾಟನೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿದ್ಧಲಿಂಗಯ್ಯ, ಎಸ್ ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಪೂರ್ಣಿಮಾ ಉಪಸ್ಥಿತರಿದ್ದರು. ಈ ಮಹಾಸಭೆಯಲ್ಲಿ ಸಹಕಾರಿಯು ಮುಂದಿನ ದಿನಗಳಲ್ಲಿ ಸದ್ಯಸರಿಗೆ ಅನುಕೂಲವಾಗುವಂತೆ "ದಿನಸಿ ವಸ್ತುಗಳ ಮಾರಾಟ ಮಳಿಗೆ"ಯನ್ನು ಪ್ರಾರಂಭಿಸಲು ಅನುಮೋದನೆ ಪಡೆಯಲಾಯಿತು.

## ಸನ್ಮಾನ



**ಬೆಳಗಾವಿ :** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಪ್ರವೀಣ ಬಾಜಿರಾವ ಕಾಂಬಳೆ ಇವರಿಗೆ ದಿನಾಂಕ 24.10.2020 ರಂದು ಚಿಕ್ಕೋಡಿ ಪಟ್ಟಣದ ಪುರಸಭೆಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಆದ ಪ್ರಯುಕ್ತ ಸದರಿಯವರಿಗೆ ಸಹಕಾರಿ ವತಿಯಿಮದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರು ಹಾಗೂ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ ಹಾಗೂ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ ಮತ್ತು ಸಹಕಾರಿಯ ನಿರ್ದೇಶಕರಾದ ಸಂಜಯ ಗಿಡವೀರ, ಯರ್ರಿಸ್ವಾಮಿಗೌಡಾ ಈಟಗೌನಿ. ಹೇಮಂತ ಹಂಪಣ್ಣವರ, ಶ್ರೀಧರ ದಿಕ್ಷೀತ, ಶಿವಜಾತ ಮಿರ್ಜೆ, ರಮೇಶ ಕುಡತರಕರ, ಲೋಕಪ್ಪಾ ದುಂಬಾಳಿ, ಸಂಜಯ ಶಿಂತ್ರೆ, ಫೇವರಚಂದ ಶಹಾ, ಚಂದ್ರಕಾಂತ ಬುರಡ, ಮನೋಜಕುಮಾರ ಸಮ್ಮತಶೆಟ್ಟ ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಮ್ ಬಿ ಬಡಿಗೇರ ಹಾಗೂ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸಂತೋಷ ಶಿವಮೊಗ್ಗಿಮಠ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಬೆಳಗಾವಿ :** ದಿನಾಂಕ 31/10/2020 ರಂದು ಶ್ರೀ ಸಾಯಿ ಪತ್ತಿನ ಸೌಹಾರ್ದ ಸಹಕಾರಿಯ ಪ್ರಧಾನ ಕಚೇರಿಯ ಕಾರ್ಯಾಲಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎಮ್ ಬಿ ಬಡಿಗೇರ, ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಉದ್ಘಾಟನೆ



**ಕಲಬುರಗಿ :** ದಿನಾಂಕ 01.10.2020 ರಂದು ಕಲಬುರಗಿ ಜಿಲ್ಲೆಯ ಸಮುನ್ನತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಇದರ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ್ ರವರು ನೇರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಹಾಗೂ ವಾಯ್ ಟಿ ಪಾಟೀಲರವರು ಮತ್ತು ಬಸವೇಶ್ವರ ಸುದ್ದಿ ಮಾಧ್ಯಮದ ಮಾನ್ಯ ನಿರ್ದೇಶಕರಾದ ಶ್ರೀ ಎಸ್. ಎಸ್ ಪಾಟೀಲರವರು ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ರಾಜಶೇಖರ ಹೆಚ್ ರವರು ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 30–10–2020 ರಂದು ಹುಲಿಗಿ ಶ್ರೀ ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ನಿ., ಹುಲಿಗಿ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಹುಲಿಗಿಯಲ್ಲಿ ಇರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರ ಜೊತೆ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್ ರವರು ಮಾತನಾಡಿ ಸಹಕಾರಿಗಳ ಅಭಿವೃದ್ಧಿಯ ಕುರಿತು ಅಗತ್ಯ ಮಾರ್ಗದರ್ಶನ ಹಾಗು ಸಲಹೆ–ಸೂಚನೆಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಹುಲಿಗಿ ಶ್ರೀ ಶಿವಪ್ರಿಯ ಪತ್ತಿನ ಸೌಹಾರ್ದ ಆಡಳಿತ ಮಂಡಳಿಯ ಸದಸ್ಯರು, ಹುಲಿಗಿಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಪವನ್ ಉಪಸ್ಥಿತರಿದ್ದರು.

# ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ವರದಿ ಸಲ್ಲಿಕೆ

– ಮಾಹಿತಿ ಸಂಗ್ರಹ : ಸಿಎ॥ ವಿಜೇಂದ್ರ ಕಾಮತ್

– ಪ್ರಸ್ತುತಿ : ಸಿಎ॥ ಬಿ.ವಿ.ರವೀಂದ್ರನಾಥ್, ಸಾಗರ

ಆದಾಯ ತೆರಿಗೆ ಕಾಯ್ದೆಯ ಪ್ರಕಾರ ಕೆಲವೊಂದು ನಿರ್ದಿಷ್ಟ ವ್ಯಕ್ತಿಗಳ ನಿರ್ದಿಷ್ಟ ಆದಾಯಗಳಿಗೆ ತೆರಿಗೆ ವಿನಾಯಿತಿ ಇರುತ್ತದೆ ಹಾಗೂ ಇನ್ನು ಕೆಲವು ನಿರ್ದಿಷ್ಟ ಆದಾಯಗಳಿಗೆ ಷರತ್ತುಬದ್ಧ ಕಡಿತಗಳ (Deductions) ಅನುಕೂಲವಿರುವುದರಿಂದಾಗಿ ಅವುಗಳಿಗೆ ಅಂತಿಮವಾಗಿ ಯಾವುದೇ ತೆರಿಗೆ ಪಾವತಿಸಬೇಕಾದ ಪ್ರಮೇಯ ಬರುವುದಿಲ್ಲ. ಅದರಂತೆ ಸಹಕಾರಿ ಸಂಘಗಳ ಆದಾಯವು ಸಹ ಷರತ್ತುಬದ್ಧ ಕಡಿತಗಳಿಂದಾಗಿ (Deductions) ಯಾವುದೇ ತೆರಿಗೆ ಬಾಧ್ಯತೆಗಳಿಗೆ ಒಳಪಡುವುದಿಲ್ಲ ಎಂಬುದೇ ಹೊರತು ಅವುಗಳ ಆದಾಯ ಯಾವುದೇ ವಿನಾಯಿತಿಗೆ ಒಳಪಟ್ಟಿರುವುದಿಲ್ಲ. ಅದರಂತೆಯೆ ಸಹಕಾರಿ ಸಂಘಗಳು ತೆರಿಗೆ ಬಾಧ್ಯತೆಗೆ ಒಳಪಡದಂತಿರಲು ಪಾಲಿಸಬೇಕಾದ ನಿಯಮಗಳನ್ನು ನೋಡೋಣ.

1. ಪತ್ತಿನ ವ್ಯವಹಾರ (ಠೇವಣಿ ಸ್ವೀಕಾರ ಮತ್ತು ಸಾಲ ನೀಡುವಿಕೆ) ನಡೆಸುವ ಎಲ್ಲ ಸಹಕಾರ ಸಂಘಗಳು ಅಂತಹ ಪತ್ತಿನ ಚಟುವಟಿಕೆಗಳನ್ನು ಕೇವಲ ತಮ್ಮ ಸದಸ್ಯರೊಂದಿಗೆ ಮಾತ್ರ ವ್ಯವಹಾರ ಮಾಡಿರಬೇಕು (80ಪಿ ಪ್ರಕಾರ)
2. ಪ್ರತಿ ವರ್ಷ ಆದಾಯ ತೆರಿಗೆ ವರದಿಯನ್ನು (Income Tax Return) ಸಲ್ಲಿಸಲೇಬೇಕು (ಕಲಂ 139).
3. ಆದಾಯ ತೆರಿಗೆ ವರದಿಗಳನ್ನು ಪ್ರತಿ ವರ್ಷವೂ ನಿಗದಿತ ದಿನಾಂಕದೊಳಗೇ ಸಲ್ಲಿಸಬೇಕು. (ಕಲಂ 80ಎಸಿ ಮತ್ತು 139)

ನೆನಪಿಡಿ, ಹೊಸದಾಗಿ ಪ್ರಾರಂಭಿಸಿದ್ದೇವೆ, ವ್ಯವಹಾರದಲ್ಲಿ ನಷ್ಟ ಉಂಟಾಗಿರುತ್ತದೆ, ನಮ್ಮ ವ್ಯವಹಾರ ಕೃಷಿಕರೊಂದಿಗೆ ಮಾತ್ರ, ನಮಗೆ ಆದಾಯ ತೆರಿಗೆ ಕಾಯ್ದೆಯಲ್ಲಿ ವಿನಾಯಿತಿ ಇದೆ, ನಮ್ಮ ಸಂಘದ ಲೆಕ್ಕಪರಿಶೋಧನೆ ಇನ್ನೂ ಮುಗಿದಿರುವುದಿಲ್ಲ, ನಮಗೆ ಆದಾಯ ತೆರಿಗೆ ಇಲಾಖೆಯಿಂದ ವರದಿ ಸಲ್ಲಿಸಿ ಎಂಬ ಸೂಚನೆ ಬಂದಿರುವುದಿಲ್ಲ, ಎಂಬಿತ್ಯಾದಿ ಯಾವುದೇ ನೆಪಗಳೂ ಸಕಾರಣಗಳಾಗಿರುವುದಿಲ್ಲ.

ಇಲ್ಲಿ ಗಮನಿಸಿ, ಆದಾಯ ತೆರಿಗೆ ವರದಿ ಸಲ್ಲಿಸುವುದು ಕಡ್ಡಾಯವೇ ಹೊರತು ತೆರಿಗೆ ಪಾವತಿಯಲ್ಲ.

ಈಗ ಆದಾಯ ತೆರಿಗೆ ವರದಿಯನ್ನು ಯಾರು, ಯಾವಾಗ, ಹೇಗೆ ಸಲ್ಲಿಸಬೇಕೆಂಬ ನಿಯಮಗಳ ಬಗ್ಗೆ ತಿಳಿಯೋಣ

ಆದಾಯ ತೆರಿಗೆ ಕಲಂ 139ರ ಪ್ರಕಾರ ಯಾವುದೇ ಕಂಪನಿ ಅಥವಾ ಪಾಲುದಾರಿಕೆ ಸಂಸ್ಥೆಗಳು (Partnership firms) ತಮ್ಮ ಯಾವುದೇ ಆದಾಯ ಮಿತಿಯನ್ನು ಲೆಕ್ಕಿಸದೆ ಕಡ್ಡಾಯವಾಗಿ ನಿಗದಿತ ದಿನಾಂಕದೊಳಗೆ ಆದಾಯ ತೆರಿಗೆಯ ವರದಿಯನ್ನು ಸಲ್ಲಿಸಬೇಕು. ಇವುಗಳಲ್ಲದೆ ಇನ್ನಿತರ ವ್ಯಕ್ತಿಗಳು ತಮ್ಮ ಆದಾಯವು ತೆರಿಗೆದಾಯಕ ಮಿತಿಯನ್ನು ಮೀರಿದರೆ ಕಡ್ಡಾಯವಾಗಿ ನಿಗದಿತ ದಿನಾಂಕದೊಳಗೆ ಆದಾಯ ತೆರಿಗೆಯ ವರದಿಯನ್ನು ಸಲ್ಲಿಸಬೇಕು. ತೆರಿಗೆದಾಯಕ ಮಿತಿಯನ್ನು ಲೆಕ್ಕಚಾರ ಹಾಕುವಾಗ ಅಧ್ಯಾಯ 6ಎ (Chapter VIA) ಯಡಿಯಲ್ಲಿ ಸಿಗಬಹುದಾದ ಕಡಿತಗಳನ್ನು (Deductions) ಪರಿಗಣಿಸಬಾರದು. ಹಾಗೆಯೆ ಬಜೆಟ್ 2020ರ ಪ್ರಕಾರ ಕಂಪನಿ ಮತ್ತು ಪಾಲುದಾರಿಕೆ ಸಂಸ್ಥೆಗಳನ್ನು ಹೊರತುಪಡಿಸಿ ಸಹಕಾರೀ ಸಂಸ್ಥೆಗಳೂ ಸೇರಿದಂತೆ ಇನ್ನಿತರ ವ್ಯಕ್ತಿಗಳು ತಮ್ಮ ಆದಾಯವು ತೆರಿಗೆದಾಯಕ ಮಿತಿಯನ್ನು ಮೀರದಿದ್ದರೂ ಸಹ ಕೆಳಕಂಡ ಸಂದರ್ಭಗಳಲ್ಲಿ ವರದಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

1. ಯಾವುದೇ ಬ್ಯಾಂಕಿನ ಚಾಲ್ತಿಖಾತೆಯಲ್ಲಿ ಒಂದು ಕೋಟಿಗಿಂತ ಮೀರಿದ ಮೊತ್ತವನ್ನು ಜಮಾಮಾಡಿದರೆ
2. ವಿದೇಶಿ ಪ್ರವಾಸಕ್ಕೆ ರೂ. 2.5 ಲಕ್ಷಕ್ಕಿಂತ ಮೀರಿದ ವೆಚ್ಚವನ್ನು ಮಾಡಿದರೆ
3. ರೂ. 1 ಲಕ್ಷಕ್ಕಿಂತ ಹೆಚ್ಚಿಗೆ ವಿದ್ಯುಚ್ಛಕ್ತಿ ವೆಚ್ಚವನ್ನು ಮಾಡಿದರೆ
4. ಇನ್ನಿತರೆ ಷರತ್ತುಗಳನ್ನು ಪೂರೈಸದಿದ್ದರೆ

ಅಂತೆಯೆ ಮೇಲಿನ ಕಲಂನ ಅಂಶಗಳನ್ನು ಗಮನಿಸಿದರೆ ಎಲ್ಲಾ ಸಹಕಾರಿ ಸಂಘಗಳು ಕಂಪನಿ ಮತ್ತು ಪಾಲುದಾರಿಕೆ ಸಂಸ್ಥೆಗಳನ್ನು ಹೊರತುಪಡಿಸಿ ಇನ್ನಿತರೆ ವ್ಯಕ್ತಿಗಳು ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕಡ್ಡಾಯವಾಗಿ ಆದಾಯ ತೆರಿಗೆ ವರದಿಯನ್ನು ಸಲ್ಲಿಸಬೇಕು. ಸಹಕಾರ ಸಂಸ್ಥೆಗಳು ತಾವು ಆದಾಯ ತೆರಿಗೆ ವರದಿಯನ್ನು ಸಲ್ಲಿಸಬೇಕೊ ಅಥವಾ ಬೇಡವೊ ಅಂತ ನಿರ್ಧರಿಸುವಾಗ 80ಪಿ ಅಡಿಯಲ್ಲಿ ಸಿಗಬಹುದಾಂತಹ ಕಡಿತಗಳನ್ನು (Deductions) ಪರಿಗಣಿಸದೆ ತಮ್ಮ ಆದಾಯವನ್ನು ಲೆಕ್ಕಚಾರಮಾಡಬೇಕು. ಹಾಗೆಯೆ ಇನ್ನೊಂದು ಗಮನಿಸಬೇಕಾದ ಅಂಶವೇನೆಂದರೆ ಸಹಕಾರಿ ಸಂಸ್ಥೆಗಳಿಗೆ ಸಾಮಾನ್ಯ ವ್ಯಕ್ತಿಗಳಿಗೆ (Individual) ಇರುವ ಮೂಲ ವಿನಾಯಿತಿ ಮಿತಿ (Basic Exemption Limit) ಸಹವಿರುವುದಿಲ್ಲ. ಇದರರ್ಥ ಎಲ್ಲಾ ಸಹಕಾರಿ ಸಂಘಗಳು ಆದಾಯ ತೆರಿಗೆ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಯಾವುದೇ ಸಹಕಾರ ಸಂಘಗಳಿಗೆ ವರದಿ ಸಲ್ಲಿಕೆಯಿಂದ ವಿನಾಯಿತಿ/ರಿಯಾಯಿತಿ ಇರುವುದಿಲ್ಲ.

ತೆರಿಗೆ ವರದಿಯನ್ನು ಸಲ್ಲಿಸುವ ಕೊನೆಯ ದಿನಾಂಕದ ಬಗ್ಗೆ ನೋಡುವುದಾದರೆ, ಕಲಂ 139ರ ಪ್ರಕಾರ ಆದಾಯ ತೆರಿಗೆ ವರದಿಯನ್ನು ಕೆಳಕಂಡ ವ್ಯಕ್ತಿಗಳು ಕೊನೆಯ ದಿನಾಂಕವೆಂಬ ಕೊಷ್ಟಕದಲ್ಲಿ ನೀಡಿರುವ ದಿನಾಂಕದೊಳಗೆ ಸಲ್ಲಿಸಬೇಕು.

| ಕ್ರ.ಸಂ | | ವ್ಯಕ್ತಿಗಳು | ಕೊನೆಯ ದಿನಾಂಕ |
|---|---|---|---|
| 1 | ಅ | ಕಂಪನಿ | 31 ಅಕ್ಟೋಬರ್ |
| | ಆ | ಕಂಪನಿ ಹೊರತುಪಡಿಸಿ ಆದಾಯ ತೆರಿಗೆ ಕಾಯ್ದೆ ಅಥವಾ ಇನ್ನಿತರೆ ಕಾಯ್ದೆಯಡಿಯಲ್ಲಿ ಶಾಸನಾತ್ಮಕ ಲೆಕ್ಕಪರಿಶೋಧನೆಗೆ ಒಳಡುವವರು | |
| | ಇ | ಆದಾಯ ತೆರಿಗೆ ಕಾಯ್ದೆಯಡಿಯಲ್ಲಿ ಲೆಕ್ಕಪರಿಶೋಧನೆಗೆ ಒಳಡುವ ಪಾಲುದಾರ ಸಂಸ್ಥೆಯ ಪಾಲುದಾರನಿಗೆ | |
| 2 | ಇನ್ನಿತರೆ ವ್ಯಕ್ತಿಗಳು | | 31 ಜುಲೈ |

ಮೇಲ್ಕಾಣಿಸಿದ ನಿಯಮಗಳನ್ನು ಪರಿಶೀಲಿಸಿದಾಗ ಗಮನಿಸುವುದೇನೆಂದರೆ ಎಲ್ಲ ಸಹಕಾರ ಸಂಘಗಳು ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ಲೆಕ್ಕಪರಿಶೋಧನೆಗೆ ಒಳಪಡುವುದರಿಂದ ಅಕ್ಟೋಬರ್ 31ರೊಳಗೆ ( ಈ ವರ್ಷ ಕೋವಿಡ್–19ರ ಕಾರಣದಿಂದಾಗಿ ನವೆಂಬರ್ 30ರವರೆಗೆ ವಾಯಿದೆ ವಿಸ್ತರಿಸಲಾಗಿದೆ) ಆದಾಯ ತೆರಿಗೆ ವರದಿಯನ್ನು ಸಲ್ಲಿಸಬೇಕು.

ಇನ್ನು 2018ರ ಬಜೆಟ್‌ನ ತಿದ್ದುಪಡಿಯಾದ ಕಲಂ 80ಎಸಿ ಪ್ರಕಾರ ಯಾವುದೇ ಒಬ್ಬ ವ್ಯಕ್ತಿಯು ಅಧ್ಯಾಯ 6ಎ (Chapter VIA)ಯಲ್ಲಿನ ಕಡಿತಗಳ ಪ್ರಯೋಜನ ಪಡೆಯುವುದಾದರೆ ಕಲಂ 139ರ ಅಡಿಯಲ್ಲಿ ನಿಯಮಗಳ ಪ್ರಕಾರ ನಿಗದಿತ ದಿನಾಂಕದೊಳಗೆ ಆದಾಯ ತೆರಿಗೆ ವರದಿಯನ್ನು ಸಲ್ಲಿಸಬೇಕು. ಅದರಂತೆ 80ಪಿ ಕಲಂ ಅಧ್ಯಾಯ 6ಎ ನಲ್ಲಿ ಬರುವುದರಿಂದ ಹಾಗೂ ಹೆಚ್ಚಿನ ಸಹಕಾರಿ ಸಂಘಗಳಿಗೆ 80ಪಿ ಕಲಂ ಅನ್ವಯವಾಗುವುದರಿಂದ ಅವು ಪ್ರತಿವರ್ಷ ಅಕ್ಟೋಬರ್ 31ರೊಳಗೆ ರಿಟರ್ನನ್ನು ಸಲ್ಲಿಸುವುದು ಅತ್ಯವಶ್ಯಕ.

**ನಿಗದಿತ ದಿನಾಂಕದೊಳಗೆ ವರದಿ ಸಲ್ಲಿಸಲು ವಿಫಲವಾದರೆ ಆಗುವ ಪರಿಣಾಮಗಳು :**

1. ಸಹಕಾರಿ ಸಂಘಗಳಿಗೆ ಯಾವುದೇ ಕಡಿತಗಳು ಸಿಗುವುದಿಲ್ಲ.
2. ಕಡಿತಗಳು ಸಿಗುವುದಿಲ್ಲವಾದ್ದರಿಂದ ಎಲ್ಲಾ ವ್ಯವಹಾರಗಳನ್ನು ಸಹಕಾರಿಯ ಸದಸ್ಯರೊಂದಿಗೇ ಮಾಡಿದರೂ ಸಹ ಗಳಿಸಿರುವ ಅಷ್ಟೂ ಆದಾಯದ ಮೇಲೆ ತೆರಿಗೆಯನ್ನು ಪಾವತಿಸಬೇಕು.
3. ಹಾಗೆಯ ಕಲಂ 234ಎಫ್‌ರ ಪ್ರಕಾರ 1,000 ದಿಂದ 10,000 ರೂ. ಗಳವರೆಗೆ ವಿಳಂಬ ಶುಲ್ಕವನ್ನು ಸಹ ಪಾವತಿಸಬೇಕಾಗಬಹುದು.
4. ತೆರಿಗೆಯನ್ನು ವಿಳಂಬವಾಗಿ ಕಟ್ಟುವುದರಿಂದ ತೆರಿಗೆಯೊಂದಿಗೆ ಬಡ್ಡಿಯನ್ನು ಸಹ ಪಾವತಿಸಬೇಕಾಗುತ್ತದೆ.
5. ಹಾಗೆಯೆ ಸಹಕಾರಿಯು ನಷ್ಟ ಅನುಭವಿಸಿದ್ದಲ್ಲಿ ಆ ಮೊತ್ತವನ್ನು ಸಹ ಮುಂದಿನ ವರ್ಷಗಳ ಲಾಭಗಳಲ್ಲಿ ಹೊಂದಾಣಿಕೆ ಮಾಡಲಾಗುವುದಿಲ್ಲ.
6. ವಿಳಂಬವಾಗಿ ಸಲ್ಲಿಸಿದ ಸಹಕಾರ ಸಂಘಗಳನ್ನು ಕರನಿರ್ಧಾರಣಾ ಪ್ರಕ್ರಿಯೆ(ಸ್ಕ್ರುಟಿನಿ)ಗೆ ಆರಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಮೇಲ್ಕಾಣಿಸಿದ ಎಲ್ಲಾ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಸಹಕಾರ ಸಂಘಗಳು ಮುಂದುವರೆಯುವುದು ಸೂಕ್ತವಾಗಿರುತ್ತದೆ.

## ವಾಲ್ಮೀಕಿ ಜಯಂತಿ



**ಕೊಪ್ಪಳ :** ದಿನಾಂಕ 31–10–2020 ರಂದು ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೇರಾ, ಕೊಪ್ಪಳ ಸಹಕಾರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ, ಮಾನ್ಯ ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕರಾದ ಕೃಷ್ಣ ರವರು ಉಪಸ್ಥಿತರಿದ್ದರು.

# ಕೋವೀಡ-19 ರ ಭಯವನ್ನು ಹೊಗಲಾಡಿಸಲು ಸಹಕಾರ ಸಪ್ತಾಹ ಆಚರಣೆ ಸಹಕಾರಿಯಾಗಲಿ.

- ಶ್ರೀ ಸೂರ್ಯಕಾಂತ ರ್‍ಯಾಕಲೆ, ಕಾನೂನು ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಕಲಬುರಗಿ ವಿಭಾಗ.

ಭಾರತ ದೇಶವು ಪ್ರತಿ ವರ್ಷ ನವೆಂಬರ 14 ರಿಂದ ನವೆಂಬರ 20ರ ವರೆಗೆ ರಾಷ್ಟ್ರೀಯ ಸಹಕಾರ ಸಪ್ತಾಹವನ್ನು ಆಚರಿಸುತ್ತದೆ ಈ ವರ್ಷವು ಸಹ ನವೆಂಬರ 14 ರಿಂದ ನವೆಂಬರ 20ರ ವರೆಗೆ ಆಚರಿಸಲಾಗುವುದು. ಸಹಕಾರ ಕ್ಷೇತ್ರವು ವಾಸ್ತವದಲ್ಲಿ ಅತಿ ದೊಡ್ಡ ಸಹಕಾರಿ ಕ್ಷೇತ್ರವಾಗಿದೆ ಇದನ್ನು ಸುಮಾರು ಲಕ್ಷಕ್ಕಿಂತ ಅಧಿಕ ಸಹಕಾರಿ ಸಂಘಗಳು ಹೊಂದಿದ್ದು ಈ ಆಚರಣೆಯು ಬೃಹತ ಜಾಲವನ್ನು ಹೊಂದಿರುವುದರಿಂದ ಇದು ಭಾರತೀಯ ಆರ್ಥಿಕತೆ ಪ್ರಮುಖ ಪಾತ್ರ ವಹಿಸುತ್ತಿದ್ದರಿಂದ ಸಹಕಾರ ಸಪ್ತಾಹ ಆಚರಣೆ ಯೋಗ್ಯ ಹಾಗೂ ಅರ್ಥ ಪೂರ್ಣವಾಗಿದೆ.

ಭಾರತೀಯ ಆರ್ಥಿಕತೆಯಲ್ಲಿ ಹಲವು ಕ್ಷೇತ್ರಗಳು ದುರ್ಬಲ ಹೊಂದಿರುವ ಅಂಶಗಳನ್ನು ಕಂಡು ಬಂದಿವೆ ಈ ಸಮಸ್ಯೆಯನ್ನು ಪರಿಹರಿಸಲು ಸಹಕಾರ ಕ್ಷೇತ್ರವು ಕಾರ್ಯನಿರ್ವಹಿಸುತ್ತಿದೆ ಇಂತಹ ಸಹಕಾರ ಕ್ಷೇತ್ರದ ಚಳುವಳಿಯ ಗುರಿಯ ಬಗ್ಗೆ ಜನರಿಗೆ ತಿಳಿಸುವುದರ ಜೊತೆಗೆ ಅದಕ್ಕೆ ಬೆಂಬಲವನ್ನು ನೀಡುತ್ತ ಸಾಮಾನ್ಯವಾಗಿ ಭಾರತೀಯ ಸಮಾಜವು ವಿವಿಧ ಚಟುವಟಿಕೆಗಳನ್ನು ನಡೆಸುವ ಮೂಲಕ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದೆ. ಇಂದಿನ ಯುವ ಪೀಳಿಗೆ ಸಹ ತಮ್ಮದೆ ಆದ ಹೊಸ ಯೋಚನೆ ಆಲೋಚನೆಗಳ ಮೂಲಕ ಸಹಕಾರಿಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಈ ಚಳುವಳಿಗೆ ಸಹಕರಿಸುತಿದ್ದಾರೆ.

ದುರದೃಷ್ಟವಶಾತ ರಾಷ್ಟ್ರೀಯ ಸಹಕಾರ ಸಪ್ತಹಾದ ಇತಿಹಾಸ ಬಗ್ಗೆ ವ್ಯಾಪಕವಾದ ಸಂಶೋಧನೆಯೊಂದಿಗೆ ಸಪ್ತಾಹದ ಬಗ್ಗೆ ನಿಖರವಾದ ಮೂಲದ ಬಗ್ಗೆ ನಮಗೆ ಇನ್ನೂ ಖಚಿತವಾಗಿಲ್ಲ. ಆದರು ಸಹ ಈ ಚಳುವಳಿಯಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಜನರನ್ನು ಪ್ರೋತ್ಸಾಹಿಸುತ್ತ ಬಂದಿದೆ ಎಂಬುದು ನಮಗೆ ತಿಳಿದಿದೆ, ಇದರಿಂದಾಗಿ ಸಹಕಾರಿಯಲ್ಲಿನ ಹಣವು ನಿಷ್ಕ್ರಿಯವಾಗುವುದಿಲ್ಲ ಅದರ ಬದಲಾಗಿ ಹಣವು ಉತ್ಪಾದಕವಾಗುವುದರಲ್ಲಿ ಬಳಸಲಾಗುತ್ತದೆ. ಇದು ಭಾರತದ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತದೆ. ಇದು ಭಾರತೀಯ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತದೆ ಮತ್ತು ಇದು ಭಾರತೀಯ ಆರ್ಥಿಕ ದುರ್ಬಲ ವರ್ಗಗಳ ಬಲವರ್ಧನೆಗೆ ಮತ್ತು ಅಭಿವೃದ್ಧಿಗೆ ಸಹಕಾರ ಕ್ಷೇತ್ರವು ಸಹಾಯಕವಾಗಿದೆ.

ಸಹಕಾರ ಸಪ್ತಾಹದಲ್ಲಿ ಭಾಗವಹಿಸಲು ಈ ಕೆಳಗಿನವುಗಳು ಮುಖ್ಯ ಕಾರಣಗಳಾಗಿವೆ.

- **ಸಹಕಾರಿಗಳನ್ನು ಉತ್ತೇಜಿಸಲು :** ಈ ಸಪ್ತಾಹದ ಆಚರಣೆಯಲ್ಲಿ ಸಹಕಾರಿಗಳನ್ನು ಉತ್ತೇಜಿಸಲು ಇದು ಸೂಕ್ತ ಸಮಯ. ಸಹಕಾರಿ ಸಂಸ್ಥೆಗಳು ಆರ್ಥಿಕತೆಗೆ ಉತ್ತಮ ಕೊಡುಗೆ ನೀಡುತ್ತವೆ ಏಕೆಂದರೆ ಜನರು ಉತ್ಪಾದಕ ಚಟುವಟಿಕೆಗಳಿಗೆ ಬಳಸಬಹುದಾದ ಹಣವನ್ನು ಎರವಲು ಪಡೆಯಲು ಪ್ರೋತ್ಸಾಹಿಸಲಾಗುತ್ತದೆ. ಇದರಿಂದ ಹೆಚ್ಚು ಸಹಕಾರಿಗಳು ಪ್ರಾರಂಭವಾದರೆ ಹೆಚ್ಚು ಜನರು ಇದರ ಲಾಭ ಪಡೆದುಕೊಳ್ಳಲು ಸಹಕಾರಿಯಾಗುತ್ತದೆ.
- **ಸಹಕಾರಿ ಸಂಸ್ಥೆಗಳಲ್ಲಿ ಸೇರಲು ಜನರನ್ನು ಪ್ರೋತ್ಸಾಹಿಸುವುದು :** ಸಹಕಾರಿ ಸಂಸ್ಥೆಗಳ ಬಗ್ಗೆ ಮತ್ತು ಅವರು ಹೇಗೆ ಕಾರ್ಯನಿರ್ವಹಿಸುತ್ತಾರೆ ಎಂಬುದರ ಬಗ್ಗೆ ಸರಿಯಾಗಿ ತಿಳಿಯದವರು ಸಾಕಷ್ಟು ಜನರು ಇದ್ದಾರೆ ಆದ್ದರಿಂದ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆ ಬಗ್ಗೆ ತಿಳಿಸಲು ಸಹಕಾರಿಯಾಗುತ್ತದೆ.
- **ಭಾರತೀಯ ಆರ್ಥಿಕತೆಯ ಸಮೃದ್ಧಿಯನ್ನು ಉತ್ತೇಜಿಸಲು :** ಜನ ಸಾಮಾನ್ಯರಿಗೆ ಸಾಲ ನೀಡುವ ಮತ್ತು ಸಾಲ ಪಡೆಯುವ ಮೂಲಕ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ಇದರಿಂದಾಗಿ ದೇಶಕ್ಕೆ ಉತ್ತಮ ಆರ್ಥಿಕತೆಗೆ ಪ್ರತ್ಯೇಕ ಹಾಗೂ ಪರೋಕ್ಷವಾಗಿ ಸಹಕರಿಸಿದಂತೆಯಾಗುತ್ತದೆ.

ಪ್ರತಿ ವರ್ಷವು ಸಹಕಾರ ಸಪ್ತಾಹವು ಅರ್ಥಪೂರ್ಣವಾದ ವಿಷಯಗಳನ್ನು ಸಮಾಜದ ಮಧ್ಯ ಚರ್ಚೆಯಾಗಿ ಸಹಕಾರ ಚಳುವಳಿ ಬಲಪಡಿಸಲು ಸಹಕಾರವಾಗಬೇಕು ಹಿನ್ನಲೆಯಲ್ಲಿ ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿಯವರು ಸಪ್ತಾಹದ ಸಂದರ್ಭದಲ್ಲಿ ಸಪ್ತಾಹದ ಪ್ರತಿ ದಿನ ವಿವಿಧ ವಿಷಯಗಳನ್ನು ನಿಗದಿಪಡಿಸಿ ದೇಶ್ಯಾದಂತ್ಯ ಆ ದಿವಸ ಅದೇ ವಿಷಯದ ಬಗ್ಗೆ ಚರ್ಚೆಯಾಗಬೇಕು ಹಿನ್ನಲೆಯಲ್ಲಿ ಸಪ್ತಾಹದ ಆಚರಣೆಯ ವಿವರಗಳನ್ನು ಸಿದ್ದಪಡಿಸಿ ಅದರಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸಹಕಾರಿಗಳಿಗೆ ಮಾರ್ಗದರ್ಶನ ನೀಡುತ್ತದೆ ಅದರಂತೆ ಈ ವರ್ಷದ ಸಹಕಾರ ಸಪ್ತಾಹದ ವಿಷಯಗಳು ಈ ಕೆಳಕಂಡತೆ ಇವೆ

**ಮೊದಲನೆ ದಿನ : ಕೊರೋನೋತ್ತರ, ಸಹಕಾರ ಸಂಸ್ಥೆಗಳ ಜವಾಬ್ದಾರಿ ಮತ್ತು ಪಾತ್ರ**

**ಎರಡನೇ ದಿನ : ಸಹಕಾರಿ ಮಾರಾಟ, ಗ್ರಾಹಕ, ರೂಪಾಂತರ ಮತ್ತು ಮೌಲ್ಯವರ್ಧನೆ**

**ಮೂರನೇ ದಿನ : ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರಿ ಶಿಕ್ಷಣ, ತರಬೇತಿ ಪುನರ್ ಮನನ**

**ನಾಲ್ಕನೆ ದಿನ : ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು**

**ಐದನೇ ದಿನ : ವ್ಯವಹಾರ, ಉದ್ಯೋಗ ಕಳೆದುಕೊಂಡವರು, ಬಾಧಿತರು ಪುನರುದ್ಯೋಗಸ್ಥರಾಗಲು ಕೌಶಲ್ಯಾಭಿವೃದಿ**

**ಆರನೇ ದಿನ : ಯುವಜನ ಮಹಿಳಾ ಮತ್ತು ಅಬಲ ವರ್ಗದವರಿಗಾಗಿ ಸಹಕಾರ ಸಂಸ್ಥೆಗಳು**

**ಏಳನೇ ದಿನ : ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ಡಿಜಿಟಲೈಜೇಷನ್ ಮತ್ತು ಸಾಮಾಜಿಕ ಜಾಲತಾಣ.**

ಈಗಾಗಲೇ ಕೋವಿಡ-19ರ ಮಹಾ ವೈರಸನ ಅಟ್ಟಹಾಸದಿಂದ ಸಹಕಾರ ಕ್ಷೇತ್ರದ ಮೇಲೆ ಪರಿಣಾಮ ಬಿರಿದ್ದರಿಂದ ಸಹಕಾರಿಯ ಆರ್ಥಿಕ ವ್ಯವಹಾರ ಕಡಿಮೆಯಾಗಿದೆ ಇದನ್ನು ಸರಿಪಡಿಸಲು ಕೋವೀಡ-19ರ ವಿರುದ್ಧ ಹೊರಾಡಿ ನಮ್ಮ ಸದಸ್ಯರು ನಿರ್ಗಳವಾಗಿ ಸಹಕಾರಿಯೊಂದಿಗೆ ಹೆಚ್ಚಿನ ಪ್ರಮಾಣದಲ್ಲಿ ವ್ಯವಹಾರ ಮಾಡಲು ಅವರಿಗೆ ಜಾಗೃತಿ ಹಾಗೂ ತಿಳುವಳಿಕೆ ಕೊಡಲು ಈ ವರ್ಷದ ಸಹಕಾರ ಸಪ್ತಾಹದ ಮುಖಾಂತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮುಖಾಂತರ ನಾವೆಲ್ಲರೂ ಸಹಕಾರ ಕ್ಷೇತ್ರವನ್ನು ಬಲಪಡಿಸೋಣ.

**ಜೈ, ಸಹಕಾರ**

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–7)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-7)



– ಶ್ರೀ ಯಶವಂತ ಡೋಂಗ್ರೆ

**ಎಸ್‌ಡಿಜಿ 7 : ಕೈಗೆಟಕುವ ದರದಲ್ಲಿ, ವಿಶ್ವಾಸಾರ್ಹವಾದ, ಸುಸ್ಥಿರವಾದ ಮತ್ತು ಆಧುನಿಕ ಇಂಧನವು ಎಲ್ಲರಿಗೂ ದೊರೆಯುವಂತೆ ಮಾಡುವುದು**

**(Ensure access to affordable, reliable, sustainable and modern energy for all)**

ನೀರು ಮತ್ತು ನೈರ್ಮಲ್ಯದಷ್ಟೇ ಪ್ರಮುಖವಾದ ಇನ್ನೊಂದು ದೈನಂದಿನ ಅಗತ್ಯವೆಂದರೆ ಇಂಧನ. ಇಂಧನದ ಉಪಯೋಗಕ್ಕೂ ಆರೋಗ್ಯ ಮತ್ತು ಪರಿಸರಕ್ಕೂ ನಿಕಟವಾದ ಸಂಬಂಧವಿದೆ. ಪಾರಂಪರಿಕ ಇಂಧನಗಳಲ್ಲಿ ಪ್ರಮುಖವಾದ ಕಟ್ಟಿಗೆಯನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ಮರಗಳು ಮತ್ತು ಕಾಡಿನ ನಾಶಕ್ಕೆ ಕಾರಣವಾಗುವುದರ ಜೊತೆಗೆ, ಈ ಇಂಧನದಿಂದ ಹೊರಬರುವ ಹೊಗೆಯಿಂದಾಗಿ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತದೆ ಮತ್ತು ಪರಿಸರ ಹಾನಿಯೂ ಹೆಚ್ಚುತ್ತದೆ. ಆದುದರಿಂದ ಸುಸ್ಥಿರವಾದ ಆಧುನಿಕ ಇಂಧನದ ಅಗತ್ಯವಿದೆ. ಹೀಗೆಯೇ ಆಧುನಿಕ ಇಂಧನದಲ್ಲಿ ಅತಿ ಹೆಚ್ಚು ಬಳಕೆಯಲ್ಲಿರುವ ವಿದ್ಯುಚ್ಛಕ್ತಿಯು ಎಲ್ಲ ಪ್ರದೇಶದ ಎಲ್ಲ ಜನರಿಗೂ ಲಭ್ಯವಾಗುತ್ತಿಲ್ಲ. ಇದಕ್ಕೂ ಪರ್ಯಾಯಗಳ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಎಸ್‌ಡಿಜಿ 7ರಲ್ಲಿ ಎಲ್ಲರಿಗೂ ಸುಸ್ಥಿರ ಇಂಧನ ಒದಗಿಸುವ ಬಗ್ಗೆ ಒತ್ತು ನೀಡಲಾಗಿದೆ.

2030 ರ ಹೊತ್ತಿಗೆ ವಿಶ್ವಾಸಾರ್ಹ ಮತ್ತು ಆಧುನಿಕ ಇಂಧನವು



ಸಾರ್ವತ್ರಿಕವಾಗಿ ಲಭ್ಯವಾಗುವಂತೆ ನೋಡಿಕೊಳ್ಳಬೇಕೆಂದು ವಿಧಿಸುವ ಈ ಗುರಿಯಲ್ಲಿ ನವೀಕರಿಸಬಹುದಾದ ಇಂಧನ ಶಕ್ತಿಯನ್ನು ಗಣನೀಯವಾಗಿ ಹೆಚ್ಚಿಸಬೇಕೆಂದೂ ಹಾಗೂ ಇದೇ ಅವಧಿಯಲ್ಲಿ ಇಂಧನದ ದಕ್ಷತೆಯ ಪ್ರಮಾಣವನ್ನು ದ್ವಿಗುಣಗೊಳಿಸಬೇಕೆಂದೂ ತಿಳಿಸಲಾಗಿದೆ. ಇವುಗಳನ್ನು ಸಾಧಿಸಲು ಅನುವಾಗುವಂತೆ ಶುದ್ಧ ಇಂಧನ ಕುರಿತಂತೆ ಸಂಶೋಧನೆಯನ್ನು ಹೆಚ್ಚಿಸಲು ಮತ್ತು ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಅಂತಾರಾಷ್ಟ್ರೀಯ ಸಹಕಾರ ಮತ್ತು ಬಂಡವಾಳ ಹೂಡಿಕೆಯನ್ನು ಹೆಚ್ಚಿಸುವ ಕುರಿತಂತೆಯೂ ಈ ಗುರಿಯು ನಿರ್ದಿಷ್ಟ ಕಾರ್ಯಕ್ರಮಗಳನ್ನು ಬಯಸುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ಸಣ್ಣ ದ್ವೀಪಗಳು, ಭೂಪ್ರದೇಶದಿಂದ ಸುತ್ತುವರಿಯಲ್ಪಟ್ಟ ದೇಶಗಳು ಮತ್ತು ಕಡುಬಡತನವಿರುವ ದೇಶಗಳಲ್ಲಿ, ಎಲ್ಲ ವರ್ಗದ ಜನರಿಗೂ ಆಧುನಿಕ ಮತ್ತು ಸುಸ್ಥಿರ ಇಂಧನ ಸೇವೆಗಳನ್ನು ವಿಸ್ತರಿಸಲು ಅಗತ್ಯವಾದ ಮೂಲಸೌಕರ್ಯ ಮತ್ತು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕೆಂದೂ ಈ ಗುರಿಯಲ್ಲಿ ವಿಧಿಸಲಾಗಿದೆ.

ಪ್ರಪಂಚದಾದ್ಯಂತ ಒಂದು ಶತಕೋಟಿಗೂ ಹೆಚ್ಚು ಜನರಿಗೆ ಇಂದಿಗೂ ವಿದ್ಯುತ್ ಸೌಲಭ್ಯ ಲಭ್ಯವಿಲ್ಲ. ಮೂರು ಶತಕೋಟಿಗೂ ಹೆಚ್ಚುಜನ ಪ್ರಾಥಮಿಕ ಇಂಧನ ಮೂಲವಾಗಿ ಇಂದಿಗೂ ಮರ, ಇದ್ದಿಲು, ಕಲ್ಲಿದ್ದಲು ಮತ್ತು ಸಗಣಿಯನ್ನೇ ಅವಲಂಬಿಸಿದ್ದಾರೆ. ಭಾರತದಲ್ಲಿ ಸುಮಾರು 23 ದಶಲಕ್ಷ ಕುಟುಂಬಗಳು ಮತ್ತು 200 ದಶಲಕ್ಷ ಜನರು ವಿದ್ಯುಚ್ಛಕ್ತಿಯ ಲಭ್ಯತೆಯಿಂದ ವಂಚಿತರಾಗಿದ್ದಾರೆ. ಕಳೆದ ಕೆಲವರ್ಷಗಳಲ್ಲಿನ ಕ್ರಮಗಳಿಂದಾಗಿ ದೇಶದ ಒಟ್ಟು ಗ್ರಾಮಗಳಲ್ಲಿ ಸುಮಾರು ಶೇಕಡ 80ಕ್ಕಿಂತ ಹೆಚ್ಚು ಗ್ರಾಮಗಳಿಗೆ ವಿದ್ಯುತ್ ಪೂರೈಕೆ ನೀಡಲಾಗಿದೆ ಮತ್ತು 2027ರ ಹೊತ್ತಿಗೆ ಪರ್ಯಾಯ ಮತ್ತು ನವೀಕರಿಸಬಹುದಾದ ಮೂಲಗಳಿಂದ ಉತ್ಪಾದಿಸುವ ಪ್ರಮಾಣವನ್ನು 72 ಗಿಗಾವ್ಯಾಟ್‌ಗೆ ಏರಿಸುವ ಯೋಜನೆ ಚಾಲ್ತಿಯಲ್ಲಿದೆ. ಆದರೆ ದೇಶದ ಎಲ್ಲ ಪ್ರದೇಶಗಳು ಮತು ಜನರು ಸಂಪೂರ್ಣವಾಗಿ ಆಧುನಿಕ ಮತ್ತು ಸುಸ್ಥಿರ ಇಂಧನವನ್ನು ಪಡೆಯಬೇಕಾದರೆ ಕೇವಲ ಸರಕಾರದ ಪ್ರಯತ್ನ ಮತ್ತು

ಹೂಡಿಕೆಯಿಂದ ಸಾಧ್ಯವಿಲ್ಲ. ಸರಕಾರೇತರ ಸಂಸ್ಥೆಗಳೂ ಈ ಪ್ರಯತ್ನದಲ್ಲಿ ಭಾಗವಹಿಸಬೇಕಾದುದು ಅನಿವಾರ್ಯ. ಅಂತೆಯೇ ಸಮುದಾಯ ಕಾಳಜಿಯನ್ನು ತತ್ವಗಾಗಿರಿಸಿಕೊಂಡ ಸಹಕಾರಿ ಸಂಘಟನೆಗಳು ಈ ಜವಾಬ್ದಾರಿಯ ಕಡೆಗೂ ಗಮನಹರಿಸಬೇಕಾಗಿದೆ.

### ಸಹಕಾರಿ ಸಂಸ್ಥೆಗಳ ಪಾತ್ರ :

ಸಹಕಾರಿ ಸಂಸ್ಥೆಗಳು ಎಸ್‌ಡಿಜಿ 7ರ ಗುರಿಗಳಿಗೆ ಸಂಭಂಧಿಸದಂತೆ ತಮ್ಮನ್ನು ಈಗಾಗಲೇ ತೊಡಗಿಸಿಕೊಂಡಿವೆ. ವಿದ್ಯುಚ್ಛಕ್ತಿ ಸಹಕಾರಿ ಸಂಘಗಳು ಹಲವಾರು ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಗ್ರಾಮೀಣ ಪ್ರದೇಶದ ಮತ್ತು ಖಾಸಗಿ ಸಂಸ್ಥೆಗಳು ಸೇವೆ ನೀಡಲಾಗದ ಸ್ಥಳಗಳಲ್ಲಿ ವಿದ್ಯುಚ್ಛಕ್ತಿಯನ್ನು ವಿತರಿಸುತ್ತಿವೆ. ಬೆಲ್ಜಿಯಂನಲ್ಲಿರುವ REScoop.eu ಸುಮಾರು 1500 ನವೀಕರಿಸಬಹುದಾದ ಇಂಧನ ಸಹಕಾರಿ ಸಂಘಗಳ ಒಕ್ಕೂಟವಾಗಿದ್ದು ಇದು ಒಂದು ದಶಲಕ್ಷ ಗ್ರಾಹಕರನ್ನು ಹಂತ ಹಂತವಾಗಿ ಪಾರಂಪರಿಕ ಇಂಧನದಿಂದ ಆಧುನಿಕ ಮತ್ತು ಸುಸ್ಥಿರ ಇಂಧನಗಳಿಗೆ ಸ್ಥಿತ್ಯಂತರಗೊಳಿಸಲು ನೆರವಾಗುತ್ತಿದೆ. ಜೊತೆಗೆ ನವೀಕರಿಸಬಹದಾದ ಇಂಧನ ಪೂರೈಕೆಗೆ ಸಂಬಂಧಿಸಿದ ಹೊಸ ವ್ಯವಹಾರ ಸಂಸ್ಥೆಗಳಿಗೆ ಧನಸಹಾಯವನ್ನೂ ನೀಡುತ್ತಿದೆ. ಈ ಒಕ್ಕೂಟದ ಅತಿ ದೊಡ್ಡ ಸದಸ್ಯ ಸಹಕಾರಿ ಸಂಸ್ಥೆಯಾದ 'ಇಕೋಪವರ್', 50,000 ಸದಸ್ಯರನ್ನು ಹೊಂದಿದ್ದು, 17 ವಿಂಡ್‌ಮಿಲ್‌ಗಳು, 370 ಸೌರ ವಿದ್ಯುತ್ ಘಟಕಗಳು, ಮೂರು ಜಲವಿದ್ಯುತ್ ಘಟಕಗಳು ಹಾಗೂ ಒಂದು ರೇಪ್ ಬೀಜದ ಎಣ್ಣೆಯ ವಿದ್ಯುತ್ ಘಟಕವನ್ನು ಹೊಂದಿದ್ದು, ಪರಿಸರ ಪ್ರೇಮಿ ಇಂಧನವನ್ನು ಉತ್ಪಾದಿಸುತ್ತಾ ತನ್ನ ಸದಸ್ಯರಿಗೆ ಕಡಿಮೆದರದಲ್ಲಿ ವರ್ಷಪೂರ್ತಿ ಸುಸ್ಥಿರ ಇಂಧನವನ್ನು ಪೂರೈಸುತ್ತಿದೆ. ಇಂಗ್ಲೆಂಡ್‌ನಲ್ಲಿರುವ 'ಎನರ್ಜಿ ಫಾರ್ ಆಲ್ (Energy4All), 23 ಸಹಕಾರಿ ಸಂಘಗಳ ಒಕ್ಕೂಟವಾಗಿದ್ದು, 13,500 ಸದಸ್ಯರನ್ನು ಹೊಂದಿ, ಸುಮಾರು 30 ಮೆಗವ್ಯಾಟ್‌ನಷ್ಟು ನವೀಕರಿಸಬಹುದಾದ ಇಂಧನವನ್ನು ಉತ್ಪಾದಿಸುತ್ತಿದೆ.

ಬಾಂಗ್ಲಾ ದೇಶದ ಗ್ರಾಮೀಣ ವಿದ್ಯುಚ್ಛಕ್ತಿ ನಿಗಮವು 1977ರಿಂದ ವಿದ್ಯುತ್ ಸಹಕಾರಿ ಸಂಘಗಳನ್ನು ಉತ್ತೇಜಿಸುತ್ತಿದ್ದು, ಹಾಲಿ 70 ಇಂತಹ ಸಹಕಾರಿ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಈ ಸಹಕಾರಿ ಸಂಘಗಳು ಒಟ್ಟಾಗಿ ಸುಮಾರು 47,650 ಹಳ್ಳಿಗಳ 30 ದಶಲಕ್ಷ ಜನರಿಗೆ ವಿದ್ಯುತ್ ಸರಬರಾಜು ಮಾಡುತ್ತಿರುವುದಲ್ಲದೆ, 1,70,000 ಗ್ರಾಮೀಣ ನೀರಾವರಿ ಪಂಪ್‌ಸೆಟ್‌ಗಳ ಚಾಲನೆಗೆ ಕಾರಣವಾಗಿವೆ ಮತ್ತು ಸುಮಾರು 16,500 ಜನರಿಗೆ ಉದ್ಯೋಗವನ್ನೂ ಒದಗಿಸಿವೆ. 1999ರಲ್ಲಿ ಜಾಗತಿಕ ಬ್ಯಾಂಕ್‌ನ ಸಹಾಯದಿಂದ ಬಾಂಗ್ಲಾದೇಶದಲ್ಲಿ



ಆರಂಭವಾದ 'ಕಡಲಪ್ರದೇಶದ ವಿದ್ಯುದೀಕರಣ ಮತ್ತು ಮಹಿಳಾ ಅಭಿವೃದ್ಧಿ ಸಹಕಾರಿ ಸಂಘವು' (UBOMUS) ಸೌರ ದೀಪಗಳನ್ನು ಉತ್ಪಾದಿಸುತ್ತಿದ್ದು, ವಿದ್ಯುತ್ ಗ್ರಿಡ್‌ಗೆ ಸೇರಿಲ್ಲದ ಪ್ರದೇಶಗಳು ಮತ್ತು ಬಾಂಗ್ಲಾ ದೇಶದ ದಕ್ಷಿಣ ಭಾಗದಲ್ಲೆಲ್ಲ ಸೌರ ವಿದ್ಯುತ್ ಬಳಕೆಯನ್ನು ಉತ್ತೇಜಿಸುತ್ತಿದೆ. ದಕ್ಷಿಣ ಸೂಡಾನ್‌ನಲ್ಲಿರುವ 'ಎಯ್ ವಿದ್ಯುತ್ ಸಹಕಾರಿಯು' (Yei Electric Coop-erative) 16,000 ಜನರಿಗೆ ವಿದ್ಯುತ್ ಸರಬರಾಜಿನ ಗುಣಮಟ್ಟದ ಸೇವೆ ನೀಡುತ್ತಿದೆ. 2005ರಲ್ಲಿ ಬ್ರೆಝಿಲ್‌ನ ರಿಯೋ ಗ್ರಾಂಡೆ ಡೊ ಸುಲ್ ಪ್ರಾಂತ್ಯದಲ್ಲಿನ ಸಣ್ಣ ರೈತರು ಮತ್ತು ಭೂರಹಿತ ಕಾರ್ಮಿಕರು ಸೇರಿ ಆರಂಭಿಸಿರುವ 'ಕೋಆಪರ್ಬಿಯೋ' (COOPERBIO) ಈ ದೇಶದ ಪ್ರಥಮ ಜೈವಿಕ ಇಂಧನ ಸಹಕಾರಿ ಸಂಘವಾಗಿದ್ದು, ಜೈವಿಕ ಡಿಸೆಲ್ ಮತ್ತು ಎಥೆನಾಲ್ ಉತ್ಪಾದನೆಯಲ್ಲಿ ತೊಡಗಿದೆ. ಹರಳೆಣ್ಣೆ ಬೀಜ, ಜತ್ರೋಪ, ಸೂರ್ಯಕಾಂತಿ ಮುಂತಾದ ಜೈವಿಕ ವಸ್ತುಗಳಿಂದ ಇಂಧನ ಉತ್ಪಾದಿಸಿ ತನ್ನ 25,000 ಸದಸ್ಯರ ಅಗತ್ಯಗಳನ್ನು ಈ ಸಹಕಾರಿಯು ಸರಬರಾಜು ಮಾಡುತ್ತಿದೆ.

ವಿದ್ಯುಚ್ಛಕ್ತಿ ಉತ್ಪಾದನೆ, ವಿತರಣೆ ಮತ್ತು ನವೀಕರಿಸಬಹದಾದ ಇಂಧನ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸಹಕಾರಿ ಸಂಸ್ಥೆಗಳು ನಮ್ಮ ದೇಶದಲ್ಲೂ ಲಭ್ಯವಿವೆ. ಉದಾಹರಣೆಗೆ 1974ರಲ್ಲಿ ಆಂಧ್ರಪ್ರದೇಶದಲ್ಲಿ ಆರಂಭವಾದ 'ಅನಕಪಲ್ಲೆ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವು' ತನ್ನ ಕಾರ್ಯವ್ಯಾಪ್ತಿಯಲ್ಲಿ ಶೇಕಡ ನೂರರಷ್ಟು ಕುಟುಂಬಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಾ ಲಾಭದಾಯಕವಾಗಿ ಕಾರ್ಯನಿರ್ವಹಿಸುತ್ತಿದೆ. ಒರಿಸ್ಸದಲ್ಲಿರುವ ಸಿಂಗೂರ್ 'ಹರಿಪಾಲ್ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ' ಯಶಸ್ವಿಯಾಗಿ ಕೆಲಸ ನಿರ್ವಹಿಸುತ್ತಿರುವ ಇನ್ನೊಂದು ಸಹಕಾರಿ ಪ್ರಯತ್ನ. ಇತ್ತೀಚೆಗೆ ಗುಜರಾತ್‌ನ ಖೇಡ ಜಿಲ್ಲೆಯ ಧುಂಡಿ ಗ್ರಾಮದ ಕೆಲವು ರೈತರು ಸೇರಿ ಆರಂಭಿಸಿರುವ 'ಧುಂಡಿ ಸೌರ ವಿದ್ಯುತ್ ಉತ್ಪಾದನಾ ಸಹಕಾರಿ ಮಂಡಳಿಯು' ನವೀಕರಿಸಬಹದಾದ ಮೂಲಗಳಿಂದ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿರುವ

ಭಾರತದ ಮೊದಲ ಸಹಕಾರಿ ಸಂಘವೆನ್ನಬಹುದು.

ಕರ್ನಾಟಕದ ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವೂ ಹಲವು ದಶಕಗಳಿಂದ ಗ್ರಾಮೀಣ ಜನತೆಗೆ ವಿದ್ಯುತ್ ವಿತರಿಸುತ್ತಿರುವ ಉತ್ತಮ ಸಹಕಾರಿ ಸಂಘಗಳಲ್ಲೊಂದು. 1969ರಲ್ಲಿ ಆರಂಭವಾದ ಈ ಸಹಕಾರಿ ಸಂಘವು 2019ರ ವೇಳೆಗೆ 113 ಹಳ್ಳಿಗಳ 1,10,000 ಬಳಕೆದಾರರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿತ್ತು. ಈ ಸಹಕಾರಿ ಸಂಘವು ವಿದ್ಯುತ್ ವಿತರಣೆಯನ್ನೇ ಪ್ರಮುಖ ವ್ಯವಹಾರ ಚಟುವಟಿಕೆಯಾಗಿ ನಡೆಸುತ್ತಿದ್ದರೆ, ಮಾರುಕಟ್ಟೆ ಸಹಕಾರಿ ಸಂಘವಾದ ಕ್ಯಾಂಪ್ಕೋ ಇತ್ತೀಚೆಗೆ ನವೀಕರಿಸಬಹುದಾದ ಮೂಲವಾದ ವಿಂಡ್ ಮಿಲ್ ಮೂಲಕ ವಿದ್ಯುತ್ ಉತ್ಪಾದನಾ ಚಟುವಟಿಕೆಯನ್ನು ಆರಂಭಿಸಿದೆ.

ಇಂತಹ ಹಲವು ಉದಾಹರಣೆಗಳು ನಮ್ಮಲ್ಲಿ ಲಭ್ಯವಿದ್ದರೂ ದೇಶದ ಸಹಕಾರಿ ಕ್ಷೇತ್ರದ ಗಾತ್ರ ಮತ್ತು ದೇಶದ ಅದರಲ್ಲೂ ಗ್ರಾಮೀಣ ಜನತೆಯ ಭರಿಸಲಾಗದಿರುವ ವಿದ್ಯುತ್ ಬೇಡಿಕೆಗಳ ಹಿನ್ನೆಲೆಯಿಂದ ನೋಡಿದರೆ, ಸಹಕಾರಿ ಕ್ಷೇತ್ರದ ಭಾಗವಹಿಸುವಿಕೆಯು ಅಗತ್ಯಕ್ಕಿಂತ ಬಹಳ ಕಡಿಮೆ ಇದೆ ಎನ್ನಬಹುದು. ಅಂತೆಯೇ ನಮ್ಮ ದೇಶದ ಸಹಕಾರಿ ಸಂಘಟನೆಗಳು ಈ ಕೆಳಗೆ ಸೂಚಿಸಿರುವ ಸಾಧ್ಯತೆಗಳನ್ನು ಪ್ರಯತ್ನಿಸಬಹುದು.

1. ಸರಕಾರೀ ವಿಭಾಗಗಳಿಂದ ವಿದ್ಯುತ್ ವಿತರಣೆಯು ನಿರೀಕ್ಷಿತ ಗುಣಮಟ್ಟದಲ್ಲಿಲ್ಲದಿರುವುದರಿಂದ ವಿದ್ಯುತ್ ವಿತರಣೆ ಮತ್ತು ನಿರ್ವಹಣೆಗಾಗಿ ಸಹಕಾರಿ ಸಂಸ್ಥೆಗಳನ್ನು ಆರಂಭಿಸುವ ಬಗ್ಗೆ ಸರಕಾರಗಳು ಮತ್ತು ಸಹಕಾರ ಮಹಾಮಂಡಳಗಳು ಪ್ರಯತ್ನಿಸಬೇಕು
2. ಈಗಾಗಲೇ ವಿದ್ಯುತ್ ವಿತರಣೆಯಲ್ಲಿ ತೊಡಗಿರುವ ಸಹಕಾರಿ ಸಂಘಗಳು ವಿದ್ಯುತ್ ಉತ್ಪಾದನಾ ಚಟುವಟಿಕೆಗಳನ್ನು ಆರಂಭಿಸಬಹುದು
3. ಎಲ್ಲ ಸಹಕಾರಿ ಸಂಘಗಳು ತಮ್ಮ ವಿವಿಧ ಕಟ್ಟಡಗಳಲ್ಲಿ ಸೌರ ವಿದ್ಯುತ್ ಘಟಕಗಳನ್ನು ನಿರ್ಮಿಸಿಕೊಂಡು ಪರ್ಯಾಯ ಇಂಧನದ ಬಳಕೆ ಹಾಗೂ ಅಧಿಕ ವಿದ್ಯುತ್ ಉತ್ಪಾದನೆಯಾದಲ್ಲಿ ಅದನ್ನು ಮಾರಾಟಮಾಡಬಹುದು



4. ನವೀಕರಿಸಬಹುದಾದ ಇಂಧನವನ್ನು ಉತ್ಪಾದಿಸಲೆಂದೇ ಸಹಕಾರಿ ಸಂಘಗಳನ್ನು ಸ್ಥಾಪಿಸಬಹುದು. ಉದಾರಗಣೆಗೆ ವಿದ್ಯುಚ್ಛಕ್ತಿ ಮಾತ್ರವಲ್ಲದೆ ಜೈವಿಕ ಅನಿಲ, ಜೈವಿಕ ಡಿಸೆಲ್ ಮತ್ತು ಎಥನಾಲ್ ಮುಂತಾದುವುಗಳ ಉತ್ಪಾದನೆ ಸಾಧ್ಯ.
5. ಎಲ್ಲ ಸಹಕಾರಿ ಸಂಘಗಳು ತಮ್ಮ ಸದಸ್ಯರಿಗೆ ವಿವಿಧ ಆಧುನಿಕ ಸುಸ್ಥಿರ ಇಂಧನದ ಬಗ್ಗೆ ಮಾಹಿತಿ ನೀಡಿ ಅವರುಗಳು ಆ ಮೂಲಗಳನ್ನು ಬಳಸಲು ಉತ್ತೇಜಿಸಬಹುದು.
6. ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಅಥವ ಜೈವಿಕ ಇಂಧನಗಳನ್ನು ಉತ್ಪಾದಿಸ ಬಯಸುವವರಿಗೆ ಸಹಕಾರಿ ಸಂಘಗಳು ಕಡಿಮೆ ಬಡ್ಡಿದರದಲ್ಲಿ ಸಾಲನೀಡುವ ಯೋಜನೆಗಳನ್ನು ರೂಪಿಸಬಹುದು.
7. ಗ್ರಾಮೀಣ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಿದ್ದು ವಿದ್ಯುಚ್ಛಕ್ತಿ ಮತ್ತು ಇತರ ಇಂಧನ ಮೂಲಗಳು ಲಭ್ಯವಿಲ್ಲದ ಜನರಿಗೆ ಸೌರ ದೀಪಗಳು ಮತು ಜೈವಿಕ ಅನಿಲವನ್ನು ಒದಗಿಸುವ ಕೆಲಸವನ್ನು ಕೈಗೆತ್ತಿಕೊಳ್ಳಬಹುದು
8. ತಮ್ಮ ಸಾಮಾಜಿಕ ಜವಾಬ್ದಾರಿಯ ಚಟುವಟಿಕೆಗಳ ಅಂಗವಾಗಿ ಲಾಭಾಂಶದ ಒಂದಂಶವನ್ನು ಬಡಜನರಿಗೆ ಇಂಧನ ಮೂಲಗಳನ್ನು ಒದಗಿಸಲು ವಿನಿಯೋಗಿಸಬಹುದು.
9. ನವೀಕರಿಸಬಹುದಾದ ಇಂಧನಕ್ಕೆ ಸಂಬಂಧಿಸಿದಂತೆ ಸರಕಾರದ ವಿವಿಧ ಯೋಜನೆಗಳನ್ನು ಗಮನಿಸಿ ಅವುಗಳನ್ನು ಸದಸ್ಯರಿಗೆ ತಲುಪಿಸಲು ಪ್ರಯತ್ನಿಸಬಹುದು
10. ಪರಿಸರ ಜಾಗೃತಿ ಕಾರ್ಯಕ್ರಮಗಳ ಮೂಲಕ ಇಂಧನಕ್ಕಾಗಿ ಕಾಡು ಮತ್ತು ನೀರಿನ ಮೂಲಗಳ ದುರ್ಬಳಕೆಯನ್ನು ತಡೆಯಬಹುದು.

ಪರ್ಯಾಯ ಮತ್ತು ನವೀಕರಿಸಬಹುದಾದ ಮೂಲಗಳಿಂದ ಇಂಧನ/ಶಕ್ತಿಯನ್ನು ಪಡೆಯುವುದು ನಮ್ಮ ಪರಿಸರ ಮತ್ತು ಆರೋಗ್ಯದ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು. ಇಂದಿಗೂ ಆಧುನಿಕ ಇಂಧನ ಮೂಲಗಳ ಲಭ್ಯತೆ ಇಲ್ಲದಿರುವ ಜನರು ದೊಡ್ಡ ಸಂಖ್ಯೆಯಲ್ಲಿದ್ದಾರೆನ್ನುವುದನ್ನೂ ಮತ್ತು ಪಾರಂಪರಿಕ ಇಂಧನ ಮೂಲಗಳು ಬರಿದಾಗುತ್ತಿವೆ ಹಾಗೂ ನಮ್ಮ ಪರಿಸರವನ್ನು ಹಾಳುಗೆಡುವುತ್ತಿವೆ ಎನ್ನುವುದನ್ನೂ ಸಹಕಾರಿ ಸಂಘಟನೆಗಳು ಮನನಮಾಡಿಕೊಂಡು, ತಮ್ಮ ಸಮುದಾಯ ಕಾಳಜಿಯ ತತ್ವದ ಆಧಾರದಲ್ಲಿ ಹೊಸ ಪ್ರಯತ್ನಗಳನ್ನು ಮಾಡಿದರೆ ಎಸ್‌ಡಿಜಿ 7ರ ಸಾಧನೆಗೆ ದೊಡ್ಡ ಕೊಡುಗೆ ನೀಡಿದಂತಾಗುತ್ತದೆ.

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 56
Licensed to post without Prepayment License No. PMG BG/WPP-384/2020-2022.



# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

## ಆಡಳಿತ ಮಂಡಳಿ ಸದಸ್ಯರು



ಬಿ.ಹೆಚ್. ಕೃಷ್ಣಾರೆಡ್ಡಿ
ಅಧ್ಯಕ್ಷರು



ಜಗದೀಶ ಕವಟಗಿಮಠ
ಉಪಾಧ್ಯಕ್ಷರು



ಗುರುನಾಥ ಜಾಂತಿಕರ
ನಿರ್ದೇಶಕರು



ಹೆಚ್.ವಿ. ರಾಜೀವ್
ನಿರ್ದೇಶಕರು



ವಿಶ್ವನಾಥ ಚ. ಹಿರೇಮಠ
ನಿರ್ದೇಶಕರು



ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ
ನಿರ್ದೇಶಕರು



ರಂಗಪ್ಪಯ್ಯ ದೇಶಪಾಂಡೆ
ನಿರ್ದೇಶಕರು



ಮಾರುತಿ ಬಿ. ಕಲಾಲ
ನಿರ್ದೇಶಕರು



ಗುರುನಗೌಡ ಪಾಟೀಲ
ನಿರ್ದೇಶಕರು



ವಾಯ್. ಟಿ. ಪಾಟೀಲ
ನಿರ್ದೇಶಕರು



ಜಿ. ನಂಜನಗೌಡ
ನಿರ್ದೇಶಕರು



ಬಿ. ಗಂಗಾಧರಯ್ಯ
ನಿರ್ದೇಶಕರು



ಸಿದ್ರಾಮಪ್ಪ ಉಪ್ಪಿನ
ನಿರ್ದೇಶಕರು



ಎ.ಆರ್. ಪ್ರಸನ್ನಕುಮರ್
ನಿರ್ದೇಶಕರು



ಆರ್. ತಿಮ್ಮಯ್ಯಶೆಟ್ಟಿ
ನಿರ್ದೇಶಕರು



ಸಂಜೀವ ಮಹಾಜನ
ನಿರ್ದೇಶಕರು



ಜಿ. ಶ್ರೀಧರ
ನಿರ್ದೇಶಕರು



ಬಿ.ಎಸ್. ಗುಂಡುರಾವ್
ನಿರ್ದೇಶಕರು



ಮಂಜುನಾಥ
ನಿರ್ದೇಶಕರು



ಚಂದ್ರಕಾಂತ ಪಡಚಣ್ಣನವರ
ನಿರ್ದೇಶಕರು



ಶ್ರೀಮತಿ ಸರಸ್ವತಿ
ನಿರ್ದೇಶಕರು



ಲಕ್ಷ್ಮಣ ಮಾರುತಿ ಪವಾರ್
ವೃತ್ತಿಪರ ನಿರ್ದೇಶಕರು



ಸದಾಶಿವ ಶೆಟ್ಟಿ
ವೃತ್ತಿಪರ ನಿರ್ದೇಶಕರು



ಶರಣಗೌಡ ಜಿ. ಪಾಟೀಲ
ವ್ಯವಸ್ಥಾಪಕ ನಿರ್ದೇಶಕರು

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪ್ರಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010